Damage Book

**THE BOOK WAS DRENCHED**

# ಯೇಸು ಕ್ರಿಸ್ತ

ರತ್ನ
ಬಾಲ
ಸಾಹಿತ್ಯ




316A

ಸಂಖ್ಯೆ
೫

ಬಿ. ಬಿ. ಡಿ. ಪವರ್ ಪ್ರೆಸ್
ಬೆಂಗಳೂರು ನಗರ

ಬೆಲೆ
೧೨ ಆಣೆ

UNIVERSAL
LIBRARY
OU_198637
LIBRARY
UNIVERSAL

OUP—556—13-7-71—4,000.

**OSMANIA UNIVERSITY LIBRARY**

Call No. K 921 Accession No. K 2900

Author RXGA

Title

This book should be returned on or before the date last marked below

# ಯೇಸು ಕ್ರಿಸ್ತ

ಜಿ. ಪಿ. ರಾಜರತ್ನಂ

ಬಿ. ಬಿ. ಡಿ. ಪವರ್ ಪ್ರೆ
ಬೆಂಗಳೂರು ನಗರ
೧೯೪೧

ಈ ಪುಸ್ತಕದ ಎಲ್ಲಾ ಹಕ್ಕೂ ಗ್ರಂಥಕರ್ತರದು]

## ರತ್ನನ ಶಿಶುಸಾಹಿತ್ಯ

ತುತ್ತೂರಿ
ಕಡಲೆಪುರಿ
ಚುಟಕ
ಗುಲಗಂಜಿ
ಕೆನೆಹಾಲು
ಕಲ್ಲುಸಕ್ಕರೆ
ಕೋಳಿಕಳ್ಳ

## ರತ್ನನ ಬಾಲಸಾಹಿತ್ಯ

ಗೌತಮ ಬುದ್ಧ
ಶ್ರೀ ರಾಮಚಂದ್ರ
ಅಶೋಕ ಮೌರ್ಯ
ಶ್ರೀ ಹರ್ಷ
ಯೇಸು ಕ್ರಿಸ್ತ
ನರಿಯ ಬಾಲ
ದಾನವೀರ ವಿಶ್ವಂತರ
ಪಂಚಾಯುಧ

## ದೊರೆಯುವ ಸ್ಥಳಗಳು :

ಸತ್ಯಶೋಧನ ಪುಸ್ತಕ ಭಂಡಾರ, ಕೋಟೆ, ಬೆಂಗಳೂರು
ಪ್ರೋಗ್ರೆಸ್ ಬುಕ್‌ಸ್ಟಾಲ್, ಮೈಸೂರು
ಜೀವನ ಪುಸ್ತಕಾಲಯ, ಧಾರವಾಡ

# ಬಿನ್ನಹ

ಕನ್ನಡನಾಡಿನ ಮಕ್ಕಳಿಗಾಗಿ ಹಿಂದೆ **'ಶ್ರೀ ರಾಮಚಂದ್ರ', 'ಗೌತಮ ಬುದ್ಧ', 'ಅಶೋಕ ಮೌರ್ಯ'** ಮತ್ತು **'ಶ್ರೀಹರ್ಷ'** ಎಂಬ ಜೀವನ ಕಥೆಗಳನ್ನು ಬರೆದಂತೆಯೇ ಈಗಲೂ ಈ **'ಯೇಸು ಕ್ರಿಸ್ತ'** ಎಂಬ ಜೀವನ ಕಥೆಯನ್ನೂ ಬರೆದು ಒಪ್ಪಿಸುತ್ತಿದ್ದೇನೆ. ಇದು ಮಕ್ಕಳನ್ನು ಉದ್ದೇಶಿಸಿ ಬರೆದ **ಜೀವನ ಕಥೆ**ಯೇ ಹೊರತು ದೊಡ್ಡವರಿಗಾಗಿ ಬರೆದ **ಜೀವನ ಚರಿತ್ರೆ**ಯಲ್ಲವೆಂದು ಮತ್ತೊಮ್ಮೆ ತಿಳಿಸಬಯಸುತ್ತೇನೆ.

ಹಿಂದಿನ ಪುಸ್ತಕಗಳಂತಲ್ಲದೆ, ಇದರಲ್ಲಿ ಅಪರಿಚಿತವಾದ ಹೆಸರುಗಳಿಂದ ಸ್ವಲ್ಪ ತೊಡಕಾಗುವುದು ಸಹಜವೇ ಅದಕ್ಕಾಗಿ, ಈ ಜೀವನ ಕಥೆಯನ್ನು ಪ್ರಾರಂಭಿಸುವ ಮೊದಲು, ಮುಂದೆ ಕೊಟ್ಟಿರುವ ಹೆಸರುಗಳ ಪಟ್ಟಿಯನ್ನು ಒಂದೆರಡು ಸಲ ಓದಿಕೊಂಡರೆ, ಕಿವಿಗೆ ಬಿದ್ದ ಬಳಕೆಯಿಂದ ಉಳಿದ ಓದು ಸುಲಭವಾಗುತ್ತದೆ.

ಮಕ್ಕಳ ಕೈಯಲ್ಲಿ ಈ ಪುಸ್ತಕ ಬೆಳೆಯಲೆಂದು ಬಯಸುತ್ತೇನೆ.

ಮಾರ್ಚ್, ೧೯೪೧
ಮಲ್ಲೇಶ್ವರಂ

**ಜಿ ಪಿ ರಾಜರತ್ನಂ**

# ಹೆಸರುಗಳ ಪರಿಚಯ

## ಜನಗಳ ಹೆಸರು—ಗಂಡಸರು

**ಯೇಸು**—ಇವನೇ '**ಕ್ರಿಸ್ತ**', ಜಗದ್ರಕ್ಷಕ, **ಲೋಕದ ಉದ್ಧಾರಕ್ಕಾಗಿ ಭೂಮಿಗೆ ಬಂದ** '**ದೇವರ ಮಗ**'. ಇವನಿಗೆ '**ಮನುಷ್ಯ ಕುಮಾರ**'ನೆಂದೂ ಹೆಸರು.

**ಯೋಹಾನ (ಸ್ನಾನಿಕ)**—ಯೇಸು ಬರುವುದನ್ನು ಯೆಹೂದ್ಯರಿಗೆ ಸಾರುತ್ತಾ ಬಂದವನು.

**ಯೋಹಾನ (ಜೆಬೆದಾಯನ ಮಗ)**—ಯೇಸುವಿನ ಹನ್ನೆರಡು ಪ್ರಚಾರಕರಲ್ಲಿ ಒಬ್ಬ.

**ಜಕರೀಯ**—ಸ್ನಾನಿಕ ಯೋಹಾನನ ತಂದೆ.

**ಯೋಸೇಫ** (೧)—ಯೇಸುವಿನ ತಂದೆ.

**ಯೋಸೇಫ** (೨)—ಯೇಸುವಿನ ತಮ್ಮಂದಿರಲ್ಲಿ ಒಬ್ಬ.

**ಯೋಸೇಫ** (೩)—ಯೇಸುವನ್ನು ಒಪ್ಪ ಮಾಡಿದವನು.

**ಯಾಕೋಬ** (೧)—ಯೇಸುವಿನ ತಮ್ಮಂದಿರಲ್ಲಿ ಒಬ್ಬ.

**ಯಾಕೋಬ** (೨)—ಜೆಬದಾಯನ ಮಗ, ಯೇಸುವಿನ ಹನ್ನೆರಡು ಪ್ರಚಾರಕರಲ್ಲಿ ಒಬ್ಬ.

**ಯಾಕೋಬ** (೩)—ಅಲ್ಫಾಯನ ಮಗ, ಯೇಸುವಿನ ಹನ್ನೆರಡು ಪ್ರಚಾರಕರಲ್ಲಿ ಒಬ್ಬ.

**ಯಾಕೋಬ** (೪)—ಸಮಾರಿಯಾದಲ್ಲಿ ಬಾವಿ ತೆಗೆಸಿದವನು.

**ಯೂದ** (೧)—ಯೇಸುವಿನ ಹನ್ನೆರಡು ಜನ ಪ್ರಚಾರಕರಲ್ಲಿ ಒಬ್ಬ.

**ಯೂದ** (೨)—ಇವನಿಗೆ **ಇಸ್ಕರಿಯೋತ ಯೂದ**ನೆಂದು ಹೆಸರು. ಇವನೇ ಗುರು ದ್ರೋಹಮಾಡಿ, ಯೇಸುವನ್ನು ಯೆಹೂದ್ಯರಿಗೆ ಹಿಡಿದೊಪ್ಪಿಸಿದವನು.

**ಯೂದ** (೩)—ಯೇಸುವಿನ ನಾಲ್ಕು ತಮ್ಮಂದಿರಲ್ಲಿ ಒಬ್ಬ.

**ಸೀಮೋನ** (೧)—ಯೇಸುವಿನ ಹನ್ನೆರಡು ಜನ ಪ್ರಚಾರಕರಲ್ಲಿ ಮುಖ್ಯನಾದವನು. **ಪೇತ್ರ**ನೆಂದೂ ಇವನಿಗೆ ಹೆಸರು.

**ಸೀಮೋನ** (೨)—ಯೇಸುವಿನ ಹನ್ನೆರಡು ಜನ ಶಿಷ್ಯರಲ್ಲಿ ಇನ್ನೊಬ್ಬ.

**ಸೀಮೋನ** (೩)—ಯೇಸುವಿನ ತಮ್ಮಂದಿರಲ್ಲಿ ಒಬ್ಬ.

**ಸೀಮೋನ** (೪)—ಯೇಸುವನ್ನು ತನ್ನ ಮನೆಗೆ ಊಟಕ್ಕೆ ಕರೆದ ಫರಿಸಾಯ.

**ಸೀಮೋನ** (೫)—ಬೇಥಾನ್ಯದಲ್ಲಿ ಯೇಸುವನ್ನು ಮನೆಗೆ ಊಟಕ್ಕೆ ಕರೆದಿದ್ದವನು.

**ಅಂದ್ರೆ, ಫಿಲಿಪ್ಪ, ಬಾರ್ತೊಲೊಮಾಯ, ಮತ್ತಾಯ, ತೋಮ**—ಯೇಸುವಿನ ಹನ್ನೆರಡು ಜನ ಪ್ರಚಾರಕರಲ್ಲಿ ಐವರು. [ಉಳಿದವರು: ಸೀಮೋನ (ಪೇತ್ರ), ಜೆಬೆದಾಯನ ಮಕ್ಕಳಾದ ಯಾಕೋಬ ಯೋಹಾನರು, ಅಲ್ಫಾಯನ ಮಗ

ಯಾಕೋಬ, ಸೀಮೋನ, ಯೂದ, ಇಸ್ಕರಿಯೋತ ಯೂದ]. ಈ ಪ್ರಚಾರಕರಿಗೆ **ಅಪೊಸ್ತಲರು** ಎಂದು ಹೆಸರು.

**ನತಾನಯೇಲ**—ಯೇಸುವನ್ನು ನಂಬಿದ್ದವನೊಬ್ಬ.

**ಸಿಮೆಯೋನ್**—ಯೆರೂಸಲೇಮ್ ದೇವಾಲಯದಲ್ಲಿ ಯೇಸುವನ್ನು ಕುರಿತು ಭವಿಷ್ಯ ಹೇಳಿದವನು.

**ಯಾಯೀರ**—ಇವನ ಸತ್ತು ಹೋಗಿದ್ದ ಮಗಳನ್ನು ಯೇಸು ಬದುಕಿಸಿದನು

**ಲಾಜರ**—ಇವನೂ ಸತ್ತು ಹೋಗಿದ್ದನು, ಯೇಸುವಿನ ಕೃಪೆಯಿಂದ ಬದುಕಿಬಂದನು.

**ಜಕ್ಕಾಯ**—ಯೇಸುವಿನಿಂದ ಉದ್ಧಾರವಾದ ಒಬ್ಬ ಸುಂಕದವ.

**ಲೇವಿ**—ಯೇಸುವಿನಿಂದ ಉದ್ಧಾರವಾದ ಇನ್ನೊಬ್ಬ ಸುಂಕದವ.

**ರೂಫ**—ಯೇಸುವಿನ ಶಿಲುಬೆಯನ್ನು ಹೊತ್ತುಕೊಂಡು ಹೋದವನು.

**ಬರಬ್ಬ**—ಕಳ್ಳ, ಕೊಲೆಗಾರ, ದಂಗೆಕೋರ, ಯೇಸುವಿಗೆ ಬದಲಾಗಿ ಯೆಹೂದ್ಯರಿಂದ ಬಿಡುಗಡೆ ಪಡೆದವನು.

**ಮೋಶೆ, ಎಶಾಯ, ಎಲೀಯ, ಎಲೀಷ**—ಯೆಹೂದ್ಯರ ಪ್ರವಾದಿಗಳು.

**ದಾವೀದ**—ಯೇಸುವಿನ ವಂಶದ ಮೂಲ ಪುರುಷ.

**ಗಬ್ರಿಯೇಲ್**— ದೇವದೂತ.

**ಕಾಯಫ**—ಯೇಸುವನ್ನು ಶಿಲುಬೆಗೆ ಹಾಕಿಸುವುದಕ್ಕೆ ಕಾರಣನಾದ ಯೆಹೂದ್ಯರ ಮುಖ್ಯ ಅರ್ಚಕ.

**ಅನ್ನ**— ಕಾಯಫನ ಮಾವ.

**ನಾಮಾನ್**—ಎಲೀಷ ಎಂಬ ಪ್ರವಾದಿಯ ಕಾಲದವನು.

ಈ ಮೇಲೆ ಹೇಳಿದವರೆಲ್ಲರೂ **ಯೆಹೂದ್ಯರು**. ಇವರಲ್ಲಿ ಮೋಶೆಯೇ ಮುಂತಾದವರು ಬೋಧಿಸಿದ್ದ ಪರಸ್ಪರ ಪ್ರೀತಿ, ದೀನರಲ್ಲಿ ದಯೆ ಮುಂತಾದ ಮುಖ್ಯ ನಿಯಮಗಳನ್ನು ಬಿಟ್ಟು, ಆದಿತ್ಯವಾರದ ದಿನ ಏನೂ ಕೆಲಸಮಾಡದಿರುವುದು, ಊಟ ಮಾಡುವ ಮುಂಚೆ ಕೈ ತೊಳೆಯುವುದು ಮುಂತಾದ ಅಮುಖ್ಯ ವಿಷಯಗಳಿಗಾಗಿ ಬಡಿದಾಡುತ್ತಿದ್ದವರು **ಫರಿಸಾಯರು**, ಯೆಹೂದ್ಯ ಶಾಸ್ತ್ರಗಳನ್ನು ಓದಿ ತಿಳಿದುಕೊಂಡಿದ್ದವರು **ಯೆಹೂದ್ಯ ಶಾಸ್ತ್ರಿಗಳು**; ದೇವಾಲಯದಲ್ಲಿ ದೇವರಿಗೆ ಪೂಜೆ ಮಾಡುತ್ತಿದ್ದವರು **ಅರ್ಚಕರು**; ಈ ಅರ್ಚಕರ ಕೆಲಸದಲ್ಲಿ ಸಹಾಯಮಾಡುತ್ತಿದ್ದವರು **ಲೇವ್ಯರು.**

ಈ ಯೆಹೂದ್ಯರು **ರೋಮ್ ದೇಶ**ದವರಿಗೆ ದಾಸರಾಗಿದ್ದರು. ರೋಮ್ ದೇಶದವರೇ **ರೋಮಕರು.** ದಾಸರಾದ ಯೆಹೂದ್ಯರು ಈ ಸ್ವಾಮಿಗಳಾದ ರೋಮಕರಿಗೆ ಕಾಣಿಕೆ ಕೊಡಬೇಕಾಗಿತ್ತು. ಈ ಕಾಣಿಕೆಯನ್ನು ಜನರಿಂದ ತೆಗೆದುಕೊಡುತ್ತಿದ್ದವರೇ **ಸುಂಕದವರು.** ಇವರಲ್ಲಿ ಅನೇಕರು ಯೆಹೂದ್ಯರೂ ಇದ್ದರು. ಇವರನ್ನು ಕಂಡರೆ ಫರಿಸಾಯರಿಗೆ ತುಂಬ ತಿರಸ್ಕಾರವಿತ್ತು.

**ಕೈಸರ್**—ರೋಮುಕರ ರಾಜ.

**ಹೆರೋದ** (೧)—ಕೈಸರನ ಪ್ರತಿನಿಧಿಯಾಗಿ ಯೆಹೂದ್ಯರನ್ನು ಆಳುತ್ತಿದ್ದ ಉಪರಾಜ; ಯೇಸುವನ್ನು ಚಿಕ್ಕಂದಿನಲ್ಲಿ ಕೊಲ್ಲಲು ಬಯಸಿದವನು.

**ಹೆರೋದ** (೨)—ಮೇಲಿನವನ ಮಗ. ಸ್ನಾನಿಕ ಯೋಹಾನನನ್ನು ಕೊಲ್ಲಿಸಿದವನು, ಯೇಸುವನ್ನು ಅವಮಾನಪಡಿಸಿದವನು.

**ಹೆರೋದ್ಯ**—(೨)ನೇ ಹೆರೋದನ ಅಣ್ಣನಾದ ಫಿಲಿಪ್ಪನ ಹೆಂಡತಿ. ಹೆರೋದನೊಡನೆ ಸಂಸಾರ ಮಾಡುತ್ತಿದ್ದವಳು.

**ಪಿಲಾತ**—ಕೈಸರನ ಪ್ರತಿನಿಧಿಯಾಗಿ ಯೆಹೂದ್ಯರನ್ನು ಆಳುತ್ತಿದ್ದ ಇನ್ನೊಬ್ಬ ಉಪ ರಾಜ, ಯೆಹೂದ್ಯರ ಬಲವಂತಕ್ಕಾಗಿ ಯೇಸುವನ್ನು ಶಿಲುಬೆಗೆ ಹಾಕಿಸಿದವನು.

## ಜನಗಳ ಹೆಸರು—ಹೆಂಗುಸರು

**ಮರಿಯ** (೧)—ಯೇಸುವಿನ ತಾಯಿ.

**ಮರಿಯ** (೨)—ಯೇಸುವಿಗೆ ತೈಲೋಪಚಾರ ಮಾಡಿದವಳು. ಲಾಜರನ ತಂಗಿ.

**ಮರಿಯ** (೩)—ಇವಳಿಗೆ '**ಮಗ್ದಲದ ಮರಿಯ**' ಎಂದೂ ಹೆಸರು. ಯೇಸುವಿನ ಪ್ರಿಯ ಶಿಷ್ಯಳು.

**ಎಲಿಸಬೆತ್**—ಸ್ನಾನಿಕ ಯೋಹಾನನ ತಾಯಿ.

**ಅನ್ನಾ**—ಯೆರೂಸಲೇಮ್ ದೇವಾಲಯದಲ್ಲಿ ಯೇಸುವನ್ನು ಕುರಿತು ಭವಿಷ್ಯ ಹೇಳಿದ ಮುದುಕಿ.

## ಸ್ಥಳಗಳ ಹೆಸರು

**ಬೆತ್ಲೆಹೇಮ್**—ಯೇಸು ಹುಟ್ಟಿದ ಊರು.

**ನಜರೇತ್**—ಯೇಸು ಬೆಳೆದ ಊರು.

**ಯೆರೂಸಲೇಮ್**—ಯುಹೂದ್ಯರ ಪರಮಪವಿತ್ರ ನಗರ, ಯೇಸು ತನ್ನ ಕೊನೆಯ ದಿನಗಳನ್ನು ಕಳೆದುದು ಇಲ್ಲಿಯೇ.

**ಗೊಲ್ಗೊಥಾ**—ಯೆರೂಸಲೇಮಿನ ಬಳಿ, ಯೇಸುವನ್ನು ಶಿಲುಬೆಗೆ ಹಾಕಿದ ಸ್ಥಾನ.

**ಗಲಿಲಾಯ, ಇಸ್ರಯೇಲ, ಯೂದಾಯ, ಸಮಾರಿಯಾ, ಕಾನಾ, ಕಪೆರ್‌ನೌಮ್, ಸಿಖರ್, ಎಫ್ರಾಯಿಮ್, ತೂರ್, ಸೀದೋನ್, ನಾಯಿನ್, ಯೆರಿಕೋ, ಬೇಥಾನ್ಯ, ಗೆನೇಜರೆತ್ ಕೊಳ, ಬೇತ್ಸಥಾ ಕೊಳ**—ಯೇಸು ತನ್ನ ಅದ್ಭುತ ಕಾರ್ಯಗಳನ್ನೂ ಕರುಣೆಯ ಕೃತ್ಯಗಳನ್ನೂ ಉಪದೇಶದ ಕೆಲಸಗಳನ್ನೂ ನಡಸುವಾಗ ತಿರುಗಾಡಿದ ಮುಖ್ಯವಾದ ದೇಶಗಳು, ಊರುಗಳು, ಕೊಳಗಳು.

**ಐಗುಪ್ತ, ಐನೋನ್, ಸುರಿಯಾ, ಇದುಮಾಯ**— ಕತೆಯಲ್ಲಿ ಬರುವ ಇನ್ನು ಕೆಲವು ದೇಶಗಳ, ಸ್ಥಳಗಳ ಹೆಸರು.

**ಅರಿಮಥಾಯ**—ಯೇಸುವನ್ನು ಒಪ್ಪವಾಡಿದ ಯೋಸೇಫನ ಊರು.

**ಯೋರ್ದನ್**—ಒಂದು ಹೊಳೆ, ಇದರಲ್ಲಿ ಸ್ನಾನಿಕ ಯೋಹಾನನು ಜನರಿಗೆ ದೀಕ್ಷಾಸ್ನಾನಮಾಡಿಸುತ್ತಿದ್ದನು.

## ಇತರ ಹೆಸರುಗಳು

**ಪಸ್ಕ**—ಯೆಹೂದ್ಯರ ಮುಖ್ಯ ಹಬ್ಬ.

**ಸಬ್ಬತ್‌ದಿನ**—ವಿರಾಮದ ದಿವಸ. ದೇವರು ಪ್ರಪಂಚದ ಸೃಷ್ಟಿಗಾಗಿ ಆರು ದಿನ ಶ್ರಮಿಸಿ ಏಳನೆಯ ದಿನ ವಿರಾಮ ತೆಗೆದುಕೊಂಡನಂತೆ. ಅದೇ ಆದಿತ್ಯವಾರ, ಏನೂ ಕೆಲಸಮಾಡದೆ ಇರಬೇಕಾದ ಸಬ್ಬತ್‌ದಿನ.

**ತಲಾಂತು**—ಸುಮಾರು ಮೂರು ಸಾವಿರ ರೂಪಾಯಿಗಳ ಒಂದು ಮೊತ್ತ.

# ವಿವರ


| | | | ಪುಟ |
|---|---|---|---|
| ೧. | ಸ್ನಾನಿಕ ಯೋಹಾನ | .. | ೧ |
| ೨. | ಮರಿಯಳ ಮಗ ಯೇಸು | | ೩ |
| ೩. | ದೇವರ ಮಗ ಯೇಸು | | ೧೪ |
| ೪. | ಬೆಟ್ಟದ ಮೇಲಿನ ಬೋಧೆ | | ೨೯ |
| ೫. | ಕ್ರಿಸ್ತನ ಕಾರ್ಯಕಲಾಪ | ... | ೩೮ |
| ೬. | ಪರಲೋಕದ ರಾಜ್ಯ | ... | ೫೮ |
| ೭. | ಯೇಸು ಹೇಳಿದ ಕತೆಗಳು | | ೬೫ |
| ೮. | ಯೇಸುವಿನ ಕಡೆಯ ದಿನಗಳು | ... | ೭೭ |
| ೯. | ವಿಚಾರಣೆ, ಮುಕ್ತಾಯ | ... | ೯೫ |
| ೧೦. | ದಿವ್ಯದರ್ಶನ | .... | ೧೧೦ |

# ಸ್ನಾನಿಕ ಯೋಹಾನ್

## ಯೋಹಾನನ ಜನನ

ಹಿಂದೆ, ಯೂದಾಯದೇಶಕ್ಕೆ ಹೆರೋದನು ಅರಸನಾಗಿರುವಾಗ ಜಕರೀಯನೆಂಬ ಒಬ್ಬ ಅರ್ಚಕನಿದ್ದನು. ಅವನಿಗೆ ಎಲಿಸಬೆತ್ ಎಂಬವಳು ಹೆಂಡತಿ. ಅವರಿಬ್ಬರೂ ದೇವರಲ್ಲಿ ಭಯಭಕ್ತಿಯಿಟ್ಟು ಪಾಪಕ್ಕೆ ಹೆದರಿ ನಡೆದುಕೊಳ್ಳುತ್ತಿದ್ದರು ಅವರಿಗೆ ಅನೇಕ ಕಾಲ ವಾದರೂ ಮಕ್ಕಳೇ ಆಗಲಿಲ್ಲ. ಹಾಗೆಯೇ ಅವರು ಮುದುಕರಾದರು.

ಜಕರೀಯನಿಗೆ ದೇವರ ಎದುರಿನಲ್ಲಿ ಧೂಪ ಸಮರ್ಪಿಸುವ ಕೆಲಸ ವಿತ್ತು ಅದರಂತೆ ಒಂದು ದಿನ ಅವನು ದೇವಾಲಯದಲ್ಲಿ ಧೂಪ ಪೀಠದ ಮುಂದೆ ನಿಂತಿದ್ದಾಗ ದೇವದೂತನು ಒಬ್ಬನು ಅವನ ಬಳಿ ಪ್ರತ್ಯಕ್ಷವಾದನು ದೇವದೂತನನ್ನು ಕಂಡು ಜಕರೀಯನು ಹೆದರಿಕೆ ಯಿಂದ ನಡುಗಿದನು.

ದೇವದೂತನು ಅವನ ಹೆದರಿಕೆಯನ್ನು ಕಂಡು, " ಹೆದರಬೇಡ, ಜಕರೀಯ ದೇವರು ನಿನಗೂ ನಿನ್ನ ಹೆಂಡತಿಗೂ ಮಗನೊಬ್ಬನನ್ನು ದಯೆಪಾಲಿಸುವನು. ಆ ಮಗನು ಯೋಹಾನನೆಂದು ಹೆಸರಾಗುವನು. ಅವನು ಮದ್ಯವೇ ಮೊದಲಾದ ಮಾದಕಗಳನ್ನು ಸೇವಿಸದೆ ದೇವರ ಕಣ್ಣಿಗೆ ದೊಡ್ಡವನಾಗುವನು ಅವನು ಮನುಷ್ಯರನ್ನು ದೇವರ ಕಡೆಗೆ ಒಲಿಸುವನು " ಎಂದನು.

ಅದಕ್ಕೆ ಜಕರೀಯನು " ನೀನು ಹೇಳಿದಂತೆ ನಡೆಯುವುದೆಂದು ನಾನು ತಿಳಿಯುವುದು ಹೇಗೆ? ನಾನೂ ನನ್ನ ಹೆಂಡತಿಯೂ ಮುದುಕರು, ವಯಸ್ಸಾದವರು'' ಎಂದು ಆ ದೇವದೂತನನ್ನು ಕೇಳಿದನು.

ಅದಕ್ಕೆ ಆ ದೇವದೂತನು " ನಾನು ದೇವರ ಸನ್ನಿಧಿಯಲ್ಲಿರುವ ದೇವದೂತ. ನನ್ನ ಹೆಸರು ಗಬ್ರಿಯೇಲ್. ಆತನು ನಿನಗೆ ಈ ಸುವಾರ್ತೆ ಯನ್ನು ತಿಳಿಸುವುದಕ್ಕಾಗಿ ನನ್ನನ್ನು ಕಳಿಸಿದ್ದಾನೆ. ಈ ಮಾತಿನಲ್ಲಿ ನಿನಗೆ ನಂಬಿಕೆಯಿಲ್ಲದುದರಿಂದ, ನಾನು ಹೇಳಿದುದೆಲ್ಲಾ ನಡೆಯುವವರೆಗೂ ನೀನು ಮೂಗನಾಗಿರು " ಎಂದನು.

ಹೀಗೆ ಈಕಡೆ ಇವರು ಮಾತನಾಡುತ್ತಿರಲು ಆಕಡೆ ದೇವಸ್ಥಾನದ ಹೊರ ಅಂಗಳದಲ್ಲಿ ನಿಂತವರು “ ಜಕರೀಯನು ಏಕೆ ಇಷ್ಟು ವೇಳೆ ಒಳಗೆ ಇದ್ದಾನೆ? ದೇವರ ಎದುರಿಗೆ ಧೂಪ ಹಾಕುವುದಕ್ಕೆ ಎಷ್ಟು ಹೊತ್ತು ಬೇಕು ? ” ಎಂದು ಮಾತನಾಡಿಕೊಂಡರು. ಅಷ್ಟರಲ್ಲಿ ಜಕರೀಯನೇ ಹೊರಗೆ ಬಂದು ಬರಿಯ ಕೈಸನ್ನೆಮಾಡುತ್ತಾ ಮೂಗನಾಗಿಯೇ ಇದ್ದನು. ಅವನಿಗೆ ದೇವಾಲಯದಲ್ಲಿ ಏನೋ ದಿವ್ಯದರ್ಶನವಾಗಿರ ಬೇಕೆಂದು ಅವರು ತಿಳಿದುಕೊಂಡರು.

ದೇವರು ತಾನು ಹೇಳಿಕಳಿಸಿದಂತೆಯೆ ಜಕರೀಯನಿಗೂ ಎಲಿಸಬೆತ ಳಿಗೂ ಒಬ್ಬ ಮಗನನ್ನು ದಯೆಪಾಲಿಸಿದನು. ಮಗುವಿಗೆ ಎಂಟು ದಿವಸ ವಾದಾಗ ಬಂಧುಬಳಗವೆಲ್ಲಾ ಬಂದು ಸೇರಿ, ಮಗುವಿಗೆ ಏನು ಹೆಸರಿಡುವು ದೆಂದು ಯೋಚಿಸಿದರು.

“ಮಗುವನ್ನೂ ಜಕರೀಯನೆಂದೇ ಕರೆಯೋಣ” ಎಂದು ಅನೇಕರು ಅಭಿಪ್ರಾಯಪಟ್ಟರು. ಆದರೆ ಮಗುವಿನ ತಾಯಿ “ ಅದಾಗದು. ಇವನಿಗೆ ಯೋಹಾನನೆಂದು ಹೆಸರಿಡಬೇಕು ” ಎಂದಳು. “ ಆದರೆ, ನಿಮ್ಮ ಮನೆ ಯಲ್ಲಿ ಯಾರಿಗೂ ಆ ಹೆಸರು ಇಟ್ಟಿಲ್ಲವಲ್ಲ” ಎಂದು ಬಂದ ಬಂಧುಬಳಗ ಹೇಳಿದರು. “ ಮಗುವಿಗೆ ಏನು ಹೆಸರು ಇಡೋಣ? ” ಎಂದು ಅವರು ಜಕರೀಯನಿಗೆ ಸನ್ನೆಮಾಡಿ ಕೇಳಿದರು.

ಆಗ ಜಕರೀಯನು ಒಂದು ಹಲಗೆಯನ್ನು ತೆಗೆದುಕೊಂಡು ಅದರ ಮೇಲೆ “ ಇವನ ಹೆಸರು ಯೋಹಾನ್ ” ಎಂದು ಬರೆದನು. ಅವರಿಗೆಲ್ಲಾ ಆಶ್ಚರ್ಯವಾಯಿತು. ಏಕೆಂದರೆ, ಮಗುವಿಗೆ ಆ ಹೆಸರಿಡಬೇಕೆಂದು ದೇವದೂತನು ಹೇಳಿದ್ದುದನ್ನು ಅವನು ಅವರಿಗೆ ತಿಳಿಸಿರಲಿಲ್ಲ.

ಹೀಗೆ ಜಕರೀಯನು ಮಗುವಿನ ಹೆಸರನ್ನು ಬರೆದೊಡನೆಯೆ ಅವನ ಮೂಗತನ ಮಾಯವಾಯಿತು. ಅವನು ದೇವರನ್ನು ಬಾಯಿ ತುಂಬ ಹೊಗಳಿ ಸ್ತೋತ್ರಮಾಡಿದನು. ಆಗ, ದೇವದೂತನು ಬಂದುದೇ ಮೊದ ಲಾದ ಎಲ್ಲಾ ವಿಚಾರವನ್ನೂ ತಿಳಿದು, “ ಇದು ಎಂತಹ ಅದ್ಭುತ ವಾದ ಮಗು! ” ಎಂದು ಯೂದಾಯದವರೆಲ್ಲರೂ ಆಶ್ಚರ್ಯಪಟ್ಟರು.

ಮಗು ಎತ್ತರವಾಗಿ ಬಲವಾಗಿ ಬೆಳೆಯಿತು.

## ಯೋಹಾನನ ಕಾರ್ಯ

ಬುದ್ಧಿ ಬಂದ ಮೇಲೆ ಯೋಹಾನನು ಮನೆಯನ್ನು ಬಿಟ್ಟು ಕಾಡುಗಳಲ್ಲಿ ವಾಸಮಾಡಿದನು, ನಿರ್ಜನವಾದ ಬೆಂಗಾಡುಗಳಲ್ಲಿ ಅಲೆದಾಡಿದನು. ಉದ್ದವಾದ ಕೂದಲಿನ ಒಂಟೆಯ ಚರ್ಮವನ್ನು ಹೊದೆದು, ಮಿಡತೆಗಳನ್ನು ತಿನ್ನುವನು, ಕಾಡು ಜೇನು ಕುಡಿಯುವನು. ತಲೆಯ ತುಂಬ ಇಳಿಗೂದಲು ಬೆಳಸಿದ್ದನು. ಹೀಗೆ ಅಲೆದ ಅನಂತರ ಬೆಂಗಾಡಿನಿಂದ ನಾಡುಗಳಿಗೆ ಬಂದು, ಮುಂದೆ ಬರುವ ಯೇಸುವಿನ ವಿಚಾರವಾಗಿ ಜನಕ್ಕೆ ಬೋಧಿಸುತ್ತಿದ್ದನು.

ಯೋಹಾನನು ತಾನು ವಾಸಿಸುತ್ತಿದ್ದ ಬೆಂಗಾಡನ್ನು ಬಿಟ್ಟು ಯೋರ್ದನ್ ಎಂಬ ನದಿಯ ತೀರಕ್ಕೆ ಬರುವನು. ಅಲ್ಲಿ ಅವನ ಉಪದೇಶವನ್ನು ಕೇಳುವುದಕ್ಕಾಗಿ ಯೆರೂಸಲೇಮಿನವರೂ ಯೂದಾಯದವರೂ ಗುಂಪು ಗುಂಪಾಗಿ ಬರುವರು. ಆಗ ಯೋಹಾನನು "ಮುಂದೆ ಬರುವ ಮಹಾಕ್ರೋಧಕ್ಕೆ ಸಿಕ್ಕಿ ನಾಶವಾಗದಂತೆ ನಿಮ್ಮನ್ನು ಎಚ್ಚರಿಸಲು ದೇವರು ನನ್ನನ್ನು ಕಳಿಸಿದ್ದಾನೆ" ಎನ್ನುವನು. "ನಿಮ್ಮ ಪೂರ್ವಿಕರು ಸತ್ಪುರುಷರಾಗಿದ್ದ ಮಾತ್ರಕ್ಕೇ ನೀವು ತಪ್ಪಿಸಿಕೊಳ್ಳುವಂತಿಲ್ಲ. ನಿಮ್ಮ ಹಿಂದಿನವರು ದೇವರ ಸೇವೆ ಮಾಡಿದ ಮಾತ್ರಕ್ಕೇ ನೀವು ದೇವರ ಕೃಪೆಗೆ ಪಾತ್ರರಾಗುವಂತಿಲ್ಲ. ಪ್ರತಿಯೊಬ್ಬನೂ ಒಂದೊಂದು ಮರವಿದ್ದಂತೆ ಇರಬೇಕು. ತನ್ನ ತನ್ನ ಸ್ಥಳದಲ್ಲಿ ನಿಂತು, ತನ್ನ ತನ್ನ ಹಣ್ಣುಗಳನ್ನು ಬಿಟ್ಟು, ತನ್ನಿಂದ ಆದಮಟ್ಟಿಗೆ ದೇವರ ಸೇವೆಮಾಡಬೇಕು. ಒಳ್ಳೆಯ ಹಣ್ಣು ಬಿಡದ ಮರವನ್ನು ಕಡಿದು ಕಟ್ಟಿಗೆಯಾಗಿ ಉರಿಸುವರು. ಆದ್ದರಿಂದ ನೀವು ಒಬ್ಬರಿಗೆ ಒಬ್ಬರು ದಯೆ ತೋರಬೇಕು, ಪ್ರೀತಿ ತೋರಬೇಕು. ಅನ್ನವಿಲ್ಲದವರಿಗೆ ಅನ್ನ ಕೊಡಬೇಕು, ಬಟ್ಟೆಯಿಲ್ಲದವರಿಗೆ ಬಟ್ಟೆ ಕೊಡಬೇಕು. ಸುಳ್ಳಾಡಬಾರದು, ಕದಿಯಬಾರದು, ಅಹಂಕಾರದಿಂದ ಮೆರೆಯಬಾರದು. ದೇವರಲ್ಲಿ ನಿಮಗೆ ಪ್ರೀತಿಯಿದೆಯೆಂಬುದನ್ನು ನೀವು ಬದುಕುವ ರೀತಿಯಲ್ಲಿ ತೋರಿಸಬೇಕು" ಎಂದು ಹೇಳುವನು.

ಅವನ ಮಾತನ್ನು ಕೇಳಿದವರು ಪಾಪಕ್ಕೆ ಅಸಹ್ಯಪಡುವರು, ಸನ್ಮಾರ್ಗದಲ್ಲಿ ನಡೆಯಲು ಇಷ್ಟಪಡುವರು. ದುರ್ಮಾರ್ಗದಲ್ಲಿ ನಡೆದರೆ

ಮುಂದೆ ದೇವರ ಕ್ರೋಧಕ್ಕೆ ಈಡಾಗಬೇಕಾಗುವುದೆಂದು ಅಂಜುವರು. ಅಂಜಿ, ಯೋಹಾನನ ಹತ್ತಿರ ಬಂದು ತಾವು ಮಾಡಿದ ಪಾಪವನ್ನೆಲ್ಲಾ ಅವನಿಗೆ ತಿಳಿಸಿ ಪಶ್ಚಾತ್ತಾಪಪಡುವರು. ಆಗ ಯೋಹಾನನು ಅವರನ್ನು ಯೋರ್ದನ್ ನದಿಗೆ ಕರೆದುಕೊಂಡು ಹೋಗಿ ಅವರಿಗೆ ದೀಕ್ಷಾಸ್ನಾನ ಮಾಡಿಸುವನು.

ಹೀಗೆ ಜನರ ಹೃದಯದ ಕೊಳೆಗಳನ್ನು ತನ್ನ ದೀಕ್ಷಾಸ್ನಾನದಿಂದ ಯೋಹಾನನು ಕಳೆಯುವುದನ್ನು ಕಂಡವರನೇಕರು ಅವನೇ ಕ್ರಿಸ್ತನಿರ ಬೇಕೆಂದು ಮಾತನಾಡಿಕೊಂಡರು. ಏಕೆಂದರೆ ಮೋಶೆ ಎಂಬವನ ಕಾಲ ದಿಂದ ಬಂದ ಪ್ರವಾದಿಗಳೆಲ್ಲರೂ “ ಕ್ರಿಸ್ತನು ಬರುತ್ತಾನೆ. ಬಂದು, ಜನರ ಹೃದಯದ ಕೊಳೆಗಳನ್ನು ಕಳೆದು ಉದ್ಧಾರಮಾಡುತ್ತಾನೆ ” ಎಂದು ಹೇಳಿದ್ದರು. ಆದ್ದರಿಂದ ಕೆಲವರು “ ಇವನೇ ಕ್ರಿಸ್ತ ಅಹುದು ” ಎಂದರು. ಇತರರು ತಲೆಯಲ್ಲಾಡಿಸಿ “ಯೆಹೂದ್ಯರನ್ನು ಉದ್ಧಾರಮಾಡಲು ಬರುವ ವನು ಇವನಂತೆ ಬಡಕಲು ವೇಷದಿಂದ ಬರುವುದಿಲ್ಲ. ರಾಜಾಧಿರಾಜನಂತೆ ಬರುವನು ” ಎಂದರು.

ಆದರೆ ಯೋಹಾನನು ಮಾತ್ರ “ ನಾನು ಬೆಂಗಾಡಿನಲ್ಲಿ ಕೂಗುವ ಒಂದು ಕೂಗು. ನಾನು ಕ್ರಿಸ್ತನಲ್ಲ. ನನ್ನ ಅನಂತರ ಒಬ್ಬನು ಬರುವನು. ಅವನ ಪಾದರಕ್ಷೆಗಳ ಕಟ್ಟನ್ನು ಕಳಚುವುದಕ್ಕೂ ನಾನು ಅರ್ಹನಲ್ಲ. ನಾನು ನೀರಿನಿಂದ ನಿಮಗೆ ಸ್ನಾನಮಾಡಿಸುತ್ತೇನೆ. ಮುಂದೆ ಬರುವ ಅವನು ನನಗಿಂತ ದೊಡ್ಡವನು; ನಿಮಗೆ ಬೆಂಕಿಯಿಂದ ಸ್ನಾನಮಾಡಿ ಸುತ್ತಾನೆ. ಆತನ ಕೈಯಲ್ಲಿ ಮೊರವಿದೆ. ತನ್ನ ಕಣದಲ್ಲಿಯ ಕಾಳಿನ ರಾಶಿ ಯನ್ನು ತೂರಿ, ಗಟ್ಟಿ ಗೋಧಿಯನ್ನು ಕಣಜಕ್ಕೆ ತುಂಬುವನು; ಹೊಟ್ಟನ್ನು ಆರಿಸಲಾಗದ ಬೆಂಕಿಯಲ್ಲಿ ಸುಡುವನು” ಎಂದು ಹೇಳುತ್ತಾ, ಜನರಿಗೆ ದೀಕ್ಷಾಸ್ನಾನ ಮಾಡಿಸಿ ಅವರನ್ನು ಉತ್ತಮಗೊಳಿಸುತ್ತಿದ್ದನು.

ಹೀಗೆ ಯೋಹಾನನು ಕ್ರಿಸ್ತನ ಆಗಮನಕ್ಕೆ ಜನರನ್ನು ಸಿದ್ಧ ಗೊಳಿಸುತ್ತಿದ್ದನು.

# ಮರಿಯಳ ಮಗ ಯೇಸು

## ಮರಿಯಳಿಗೆ ದೇವರ ವರ

ದೇವದೂತ ಗಬ್ರಿಯೇಲನು, ಜಕರೀಯನಿಗೆ ಅಂದು ದೇವಾಲಯದಲ್ಲಿ ಪ್ರತ್ಯಕ್ಷನಾದ ಆರು ತಿಂಗಳ ಮೇಲೆ, ಪುನಃ ದೇವರ ಆಜ್ಞೆಯಂತೆ ನಜರೇತ್ ನಗರದಲ್ಲಿದ್ದ ಮರಿಯ ಎಂಬ ಕನ್ನಿಕೆಗೆ ಪ್ರತ್ಯಕ್ಷನಾದನು.

ಮರಿಯಳು ಕೂಡ ಜಕರೀಯನಂತೆಯೇ ದೇವದೂತನನ್ನು ಕಂಡು ಹೆದರಿದಳು. ಗಬ್ರಿಯೇಲನು ಜಕರೀಯನ ಭಯವನ್ನು ಹೋಗಲಾಡಿಸಿದಂತೆಯೇ ಮರಿಯಳನ್ನೂ ಕುರಿತು "ಹೆದರಬೇಡ, ಮರಿಯ. ನಿನ್ನ ಮೇಲೆ ದೇವರು ಕೃಪೆಮಾಡಿದ್ದಾನೆ. ನಿನಗೆ ಒಬ್ಬ ಮಗನಾಗುವನು. ಅವನು ಯೇಸು ಎಂದು ಹೆಸರಾಗುವನು ಅವನು ಮಹಾಪುರುಷನಾಗುವನು, ದೇವರ ಮಗನೆಂದು ಪ್ರಸಿದ್ಧನಾಗುವನು. ದೇವರ ದಯೆಯಿಂದ ಅವನು ರಾಜನಾಗುವನು. ಅವನ ರಾಜ್ಯಭಾರಕ್ಕೆ ಚ್ಯುತಿಬರುವುದಿಲ್ಲ" ಎಂದನು.

ಅದಕ್ಕೆ ಕನ್ಯೆಯಾದ ಮರಿಯಳು "ಇದು ಹೇಗಾದೀತು? ನನಗೆ ಮದುವೆಯೆ ಆಗಿಲ್ಲವಲ್ಲ!" ಎಂದಳು.

ಆಗ ಗಬ್ರಿಯೇಲನು "ಮರಿಯ, ನಿನಗೆ ಕಷ್ಟವೆಂದು ಕಂಡುಬಂದುದು ದೇವರಿಗೆ ಕಷ್ಟವಲ್ಲ. ಆತನು ಸರ್ವಶಕ್ತ. ಹಿಂದೆ ಎಲಿಸಬೆತಳಿಗೆ ಮಗನಾಗುವನೆಂಬುದನ್ನು ತಿಳಿಸಲು ದೇವರು ನನ್ನನ್ನು ಕಳಿಸಿದ್ದನು. ಈಗ, ನಿನಗೊಬ್ಬ ಮಗನಾಗುವನೆಂಬುದನ್ನು ತಿಳಿಸಲು ಪುನಃ ನನ್ನನ್ನು ಕಳಿಸಿರುವನು. ಇಷ್ಟು ಹೇಳಿದುದು ಸಾಕು'' ಎಂದನು

ಮರಿಯಳು ದೇವರ ಇಷ್ಟದಂತಾಗಲಿಯೆಂದಳು. ದೇವದೂತನು ಮರೆಯಾದನು.

ಅನಂತರ ಮರಿಯಳು ತ್ವರೆಯಿಂದ ಯೆರೂಸಲೇಮನ್ನು ಬಿಟ್ಟು ಮಲೆನಾಡಿಗೆ ಹೋದಳು. ಅಲ್ಲಿ ಎಲಿಸಬೆತ್ ಮತ್ತು ಜಕರೀಯರ ಮನೆಯಲ್ಲಿ ಮೂರು ತಿಂಗಳು ವಾಸಿಸಿದಳು. ಮರಿಯಳೂ ಎಲಿಸಬೆತಳೂ ಓರಗೆಯಲ್ಲಿ ಅಕ್ಕತಂಗಿಯರ ಮಕ್ಕಳು. ಮೂರು ತಿಂಗಳಾದಮೇಲೆ ಮರಿಯಳು

ತನ್ನ ಮನೆಗೆ ಹಿಂದಿರುಗಿದಳು. ಅವಳಿಗೆ ಮದುವೆಯಾಯಿತು. ಅವಳ ಗಂಡನ ಹೆಸರು ಯೋಸೇಫ್. ಅವನು ತೀರ ಬಡವ. ಬಡಗಿಯ ಕೆಲಸ ದಿಂದ ಅವನ ಜೀವನ.

### ಯೇಸುವಿನ ಜನನ

ಆ ಕಾಲದಲ್ಲಿ ಯೆಹೂದ್ಯರು ರೋಮಕರ ಅಡಿಯಾಳುಗಳಾಗಿದ್ದರು. ಯೆಹೂದ್ಯರನ್ನು ಜಯಿಸಿದ್ದ ರೋಮಕರ ರಾಜನಿಗೆ ಕೈಸರ್ ಎಂದು ಹೆಸರಿತ್ತು. "ಯೆಹೂದ್ಯರ ಹೆಸರನ್ನೆಲ್ಲಾ ಒಂದು ಪುಸ್ತಕದಲ್ಲಿ ಬರೆಯ ಬೇಕು. ಅದರಲ್ಲಿ ಅವರ ವಂಶವನ್ನೂ ಅವರ ಐಶ್ವರ್ಯವನ್ನೂ ಕಾಣಿಸ ಬೇಕು. ಪ್ರತಿ ಯೆಹೂದ್ಯನೂ ತನ್ನ ಪೂರ್ವಿಕರು ಇದ್ದ ಊರಿಗೆ ಹೋಗಿ ಅಲ್ಲಿ ತನ್ನ ಹೆಸರನ್ನು ಬರೆಯಿಸಬೇಕು" ಎಂದು ಕೈಸರನು ಒಂದು ಆಜ್ಞೆ ಹೊರಡಿಸಿದನು

ಕೈಸರನ ಆಜ್ಞೆಯನ್ನು ಪಾಲಿಸಲು ಮರಿಯ ಯೋಸೇಫರು ನಜ ರೇತಿನಿಂದ ಬೆತ್ಲೆಹೇಮ್ ಎಂಬ ಹಳ್ಳಿಗೆ ಹೋಗಬೇಕಾಯಿತು. ಏಕೆಂದರೆ ಯೋಸೇಫನು ಯೆಹೂದ್ಯನಾದ ದಾವೀದನೆಂಬವನ ವಂಶದವನು. ದಾವೀದನು ಬೆತ್ಲೆಹೇಮಿನಲ್ಲಿ ಹಿಂದೆ ಕುರಿ ಮೇಯಿಸುತ್ತಿದ್ದನು.

ಹೀಗೆ ಅವರು ಬೆತ್ಲೆಹೇಮಿಗೆ ಬರುವ ವೇಳೆಗೆ ಅಲ್ಲಿ ಜನಸಂದಣಿ ಬಹಳವಾಗಿತ್ತು. ಮರಿಯ ಯೋಸೇಫರಿಗೆ ಇಳಿದುಕೊಳ್ಳಲು ಎಲ್ಲೂ ಸ್ಥಳಸಿಕ್ಕಲಿಲ್ಲ. ಹಾಗೆಯೇ ತಂಗುವ ಸ್ಥಳ ಹುಡುಕುತ್ತಾ ಅವರು ಒಂದು ಗುಡಿಸಲಿಗೆ ಬಂದರು. ಅಲ್ಲಿ ಎತ್ತು ಕುದುರೆಗಳಿಗೆ ಹುಲ್ಲು ತಿನ್ನಿಸುವ ಒಂದು ತೊಟ್ಟಿಯಿತ್ತು. ಅವರಿಬ್ಬರೂ ಆ ಗುಡಿಸಲಿನಲ್ಲಿಯೇ ತಂಗಿದರು.

ಅವರು ಅಲ್ಲಿ ಇರುವಾಗಲೇ ದೇವರು ಮರಿಯಳಿಗೆ ತಾನು ಹೇಳಿದ್ದ ಮಗುವನ್ನು ಕೊಟ್ಟನು. ಮಗುವನ್ನು ಮಲಗಿಸಲು ಮೃದುವಾದ ಬಟ್ಟೆ ಕೂಡ ಅವರ ಹತ್ತಿರವಿರಲಿಲ್ಲ. ಮರಿಯಳು ಇದ್ದ ಬಟ್ಟೆಗಳಲ್ಲಿಯೆ ಮಗುವನ್ನು ಸುತ್ತಿ ಹುಲ್ಲುತೊಟ್ಟಿಯ ಹುಲ್ಲಿನಲ್ಲಿ ಮಲಗಿಸಿದಳು.

ಅದೇ ಕಾಲದಲ್ಲಿ ಒಂದು ರಾತ್ರಿ ಕೆಲವರು ಕುರುಬರು ಬೆಟ್ಟಗಳ ಮೇಲೆ ಕುರಿ ಕಾಯುತ್ತಿದ್ದರು. ಆಗ ಅವರಿಗೆ ಒಬ್ಬ ದೇವದೂತನು

ಪ್ರತ್ಯಕ್ಷನಾಗಿ, "ಹೆದರಬೇಡಿರಿ. ದೇಶಕ್ಕೆಲ್ಲಾ ಸಂತೋಷವುಂಟು ಮಾಡುವ ಸುವಾರ್ತೆಯನ್ನು ನಾನು ನಿಮಗೆ ತಂದಿದ್ದೇನೆ. ಇದೇ ಬೆತ್ಲೆಹೇಮಿನಲ್ಲಿ ಕ್ರಿಸ್ತನು ಹುಟ್ಟಿಬಂದಿರುವನು. ಅವನು ನಿಮ್ಮಪಾಪಗಳನ್ನು ಕಳೆದು ನಿಮ್ಮನ್ನು ಉದ್ಧಾರಮಾಡುವನು. ಆ ಮಗುವನ್ನು ಬಟ್ಟೆಯಲ್ಲಿ ಸುತ್ತಿ ಹುಲ್ಲುತೊಟ್ಟಿಯಲ್ಲಿ ಮಲಗಿಸಿರುವರು. ಹೋಗಿ ಕಾಣಿರಿ" ಎಂದನು. ಅದೇ ಗಳಿಗೆಯಲ್ಲಿ ಒಂದು ಅಖಂಡವಾದ ಬೆಳಕು ಇಳಿದಂತೆ ಅನೇಕ ದೇವದೂತರು ಕಾಣಿಸಿಕೊಂಡು ದೇವರ ಮಹಿಮೆಯನ್ನು ಹಾಡಿ ಹೊಗಳಿದರು, ದೇಶಕ್ಕೆ ಹಿತಸುಖಗಳಾಗಲೆಂದು ಹರಸಿದರು. ಅನಂತರ ಆ ದೇವದೂತರೆಲ್ಲರೂ ಕಣ್ಮರೆಯಾದರು.

ಅವರು ಮರೆಯಾದ ಮೇಲೆ ಆ ಕುರುಬರು ಎದ್ದು ದೇವದೂತರು ತಂದ ಸುವಾರ್ತೆಯಂತೆ ಕ್ರಿಸ್ತನನ್ನು ಕಾಣಬೇಕೆಂದು ಬೆತ್ಲೆಹೇಮಿಗೆ ಹೋದರು. ಅಲ್ಲಿ, ಅವರು ಹೇಳಿದಂತೆಯೇ ಹುಲ್ಲುತೊಟ್ಟಿಯಲ್ಲಿ ಮಲಗಿದ್ದ ಮಗುವನ್ನು ಕಂಡರು. ಕಂಡು, ತಾವು ಕಂಡುದನ್ನೂ ದೇವದೂತರು ಹೇಳಿದುದನ್ನೂ ಎಲ್ಲರಿಗೂ ತಿಳಿಸುತ್ತಾ ಹೋದರು. ಅದುವರೆಗೆ ಕಾಣದ ಅಂತಹ ಅದ್ಭುತವನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು.

ಮರಿಯಳು ಮಾತ್ರ ತಾನು ದೇವದೂತನನ್ನು ಕಂಡುದನ್ನು ಯಾರೊಡನೆಯೂ ಹೇಳಲಿಲ್ಲ. ಅದನ್ನೆಲ್ಲಾ ಮನಸ್ಸಿನಲ್ಲಿಯೇ ಇಟ್ಟುಕೊಂಡು ಆ ಮಗುವನ್ನು ಎಚ್ಚರದಿಂದ ಕಾಪಾಡುತ್ತಿದ್ದಳು. ಅದು ತನ್ನ ಮಗುವೆನ್ನುವುದಕ್ಕಿಂತ ದೇವರ ಮಗುವೆನ್ನುವುದೇ ಸರಿಯೆಂದು ಅವಳಿಗೆನ್ನಿಸುತ್ತಿತ್ತು.

## ದೇವಾಲಯದಲ್ಲಿ ಮಗು ಯೇಸು

ಮಗುವಿಗೆ ಎಂಟುದಿವಸವಾದಾಗ ಯೇಸುವೆಂದೇ ನಾಮಕರಣ ಮಾಡಿದರು. ಅನಂತರ ಸೂತಕದ ದಿವಸಗಳು ಮುಗಿದ ಮೇಲೆ ಮಗುವನ್ನು ಯೆರೂಸಲೇಮಿನ ದೇವಸ್ಥಾನಕ್ಕೆ ಕರೆದೊಯ್ದರು.

ಆಗ ಯೆರೂಸಲೇಮ್ ನಗರದಲ್ಲಿ ಸಿಮೆಯೋನ್ ಎಂಬ ಒಬ್ಬ ಸತ್ಪುರುಷನಿದ್ದನು. ಹಿಂದಿನ ಪ್ರವಾದಿಗಳೆಲ್ಲರೂ ಮುಂದೆ ಬರುವನೆಂದು

ಭವಿಷ್ಯ ನುಡಿದಿದ್ದ ಕ್ರಿಸ್ತನನ್ನು ಕಾಣಲು ಅವನು ಕಾಯುತ್ತಿದ್ದನು. ಕ್ರಿಸ್ತನನ್ನು ಕಾಣುವವರೆಗೆ ತನಗೆ ಸಾವು ಬರುವುದಿಲ್ಲವೆಂದು ಅವನಿಗೆ ಸ್ಪಷ್ಟವಾಗಿತ್ತು. ಸಿಮೆಯೋನನು ದೇವಾಲಯದ ಅರ್ಚಕ. ಅದರಿಂದ, ಮರಿಯ ಯೋಸೇಫರು ಮಗು ಯೇಸುವನ್ನು ದೇವಾಲಯಕ್ಕೆ ಕರೆ ತಂದಾಗ, ಸಿಮೆಯೋನನು ಆ ಮಗುವನ್ನು ಎತ್ತಿಕೊಂಡು, "ದೇವರೆ, ನಿನ್ನ ಮಾತು ನಿಜವಾಯಿತು. ನಾನು ಸಾಯುವ ಮೊದಲು ಕ್ರಿಸ್ತನನ್ನು ಕಣ್ಣಾರೆ ಕಂಡೆ. ಈ ಜಗತ್ತಿನ ಬೆಳಕನ್ನು, ಈ ಪಾವನಮೂರ್ತಿಯನ್ನು ಕಂಡುದಾಯಿತು; ಇನ್ನು ನಾನು ನಿಶ್ಚಿಂತೆಯಿಂದ ಸಾಯಬಹುದು" ಎಂದು, ಮರಿಯ ಯೋಸೇಫರನ್ನು ಹರಸಿ, ಮಗುವನ್ನು ಮರಿಯಳ ಕೈಗೆ ಕೊಟ್ಟನು. ಆ ಮಗು ಮುಂದೆ ಮಾಡುವ ಮಹಾಕಾರ್ಯಗಳನ್ನು ಅವರಿಗೆ ತಿಳಿಸಿದನು.

ಹೀಗೆ ಸಿಮೆಯೋನನು ಮಾತನಾಡುತ್ತಿರುವಾಗಲೇ ಆ ದೇವಾಲಯಕ್ಕೆ ಅನ್ನಾ ಎಂಬ ಎಂಬತ್ತುನಾಲ್ಕು ವರ್ಷದ ಮುದುಕಿಯೊಬ್ಬಳು ಬಂದಳು. ಅವಳು ಉಪವಾಸಗಳನ್ನು ಮಾಡಿ ಹಗಲೂ ರಾತ್ರಿ ದೇವರ ಸೇವೆಮಾಡುತ್ತಿದ್ದವಳು. ಮುಂದಾಗುವುದನ್ನು ನೋಡಿ ಹೇಳುವ ಸಾಮರ್ಥ್ಯ ಆಕೆಗೆ ಬಹಳವಾಗಿತ್ತು. ಅವಳು ಕೂಡ ಆ ಮಗು ಮುಂದೆ ಮಾಡುವ ಮಹಾಕಾರ್ಯಗಳನ್ನು ತಿಳಿಸಿದಳು.

ಅನಂತರ ಮರಿಯ ಯೋಸೇಫರು ನಜರೇತಿಗೆ ಹಿಂದಿರುಗಿದರು. ಅಲ್ಲಿ ಮಗು ಆರೋಗ್ಯವಾಗಿ ಬೆಳೆಯುತ್ತಿತ್ತು.

## ಹೆರೋದನ ಪೀಡೆ

ಆ ಕಾಲದ ಯೆಹೂದ್ಯರಲ್ಲಿ ಕೆಲವರು ಜ್ಞಾನಿಗಳಿದ್ದರು. ಅವರು ತಮ್ಮ ಹಳೆಯ ಗ್ರಂಥಗಳನ್ನೆಲ್ಲಾ ಓದಿದ್ದರು. ಯೆಹೂದ್ಯರನ್ನು ಉದ್ಧರಿಸಲು ಬರುವ ಕ್ರಿಸ್ತನು ಹುಟ್ಟುವ ದಿಕ್ಕಿನಲ್ಲಿ ಒಂದು ತಾರೆ ಮಹಾ ಪ್ರಕಾಶದಿಂದ ಬೆಳಗುವುದೆಂದು ಅವರು ತಿಳಿದಿದ್ದರು. ಆ ನಕ್ಷತ್ರವನ್ನು ನೋಡುವ ಕಾಲ ಬಂದೀತೇ ಎಂದು ಬಹುವರುಷಗಳಿಂದ ಕಾಯುತ್ತಿದ್ದರು. ವರುಷಗಳೇನೋ ಕಳೆದು ಹೋದುವು. ಯೆಹೂದ್ಯರೂ ತಮ್ಮ ನಾಡನ್ನು

ಕಳೆದುಕೊಂಡು ನಿಲ್ಲಲು ನೆರಳಿಲ್ಲದವರಾದರು, ಕೈಸರನಿಗೆ ಗುಲಾಮ ರಾದರು. ಕೈಸರನ ಪ್ರತಿನಿಧಿಯಾಗಿ ಅವರನ್ನು ಆಳುತ್ತಿದ್ದ ಹೆರೋದನು ಅವರನ್ನು ಬಹುವಿಧವಾಗಿ ಪೀಡಿಸುತ್ತಿದ್ದನು.

ಒಂದು ರಾತ್ರಿ ಒಬ್ಬ ಜ್ಞಾನಿ ಎಂದಿನಂತೆ ಆಕಾಶವನ್ನು ಕಣ್ಣಿನಿಂದ ಅಳೆದುಹೋಗುತ್ತಿದ್ದಾಗ ಒಂದು ನಕ್ಷತ್ರವನ್ನು ಕಂಡು ಅವನ ಮೈ ಜುಮ್ಮೆಂದಿತು. ಆ ನಕ್ಷತ್ರದ ಬೆಳಕಿನಲ್ಲಿ ಮಿಕ್ಕ ನಕ್ಷತ್ರಗಳು ಬಣ್ಣಗೆಟ್ಟಿದ್ದುವು, ಸಣ್ಣಗಾಗಿದ್ದುವು ಕರಿಮೋಡದ ಮರೆಯಿಂದ ಹೊರಗೆ ಉಕ್ಕುವ ಸೂರ್ಯಪ್ರಭೆಯಂತೆ ಆ ನಕ್ಷತ್ರದ ಬೆಳಕು ಪೂರ್ವದಿಕ್ಕಿನ ಕಡೆಗೆ ಚಾಚಿತ್ತು. ನೋಡುತ್ತಿದ್ದಂತೆಯೇ ಆ ನಕ್ಷತ್ರ ಚಲಿಸಿದಂತಾಯಿತು. ಅದರ ಕಿರಣಗಳು ದಾರಿ ತೋರಿಸುವ ಗೆರೆಗಳಂತಾದವು ತಾವು ಬಹುದಿನದಿಂದ ಎದುರುನೋಡುತ್ತಿದ್ದ ನಕ್ಷತ್ರವೇ ಅದೆಂದು ಆ ಜ್ಞಾನಿಗೆ ಗೊತ್ತಾಯಿತು. ಆಗ ಅವನು ತನ್ನ ಜೊತೆಗೆ ಇತರ ಜ್ಞಾನಿಗಳನ್ನೂ ಕರೆದುಕೊಂಡು ಆ ನಕ್ಷತ್ರ ತೋರಿಸಿದ ದಿಕ್ಕಿಗೆ ನಡೆದನು. ಪ್ರತಿರಾತ್ರಿಯೂ ಆ ನಕ್ಷತ್ರ ಅವರಿಗೆ ದಾರಿತೋರಿಸಿ ಅವರನ್ನು ಕರೆದುಕೊಂಡು ಹೋಗುತ್ತಿತ್ತು.

ಹೀಗೆಯೇ ಅವರು ನಡೆದು ಯೆರೂಸಲೇಮಿಗೆ ಬಂದರು. ಅಲ್ಲಿ "ಯೆಹೂದ್ಯರ ರಾಜನಾಗಲು ಹುಟ್ಟಿರುವವನು ಎಲ್ಲಿ? ಅವನನ್ನು ತೋರಿಸುವ ನಕ್ಷತ್ರವನ್ನು ಪೂರ್ವದಲ್ಲಿ ಕಂಡು ಅವನನ್ನು ಆರಾಧಿಸಲು ಇಲ್ಲಿಗೆ ಬಂದಿದ್ದೇವೆ" ಎಂದರು.

ಆ ಮಾತು ಹಾಗೆಯೇ ಹರಡಿ ಹೆರೋದನ ಕಿವಿಗೂ ಮುಟ್ಟಿತು. ಯೆಹೂದ್ಯರ ರಾಜನೊಬ್ಬನು ಹುಟ್ಟಿರುವುದು ನಿಜವಾದರೆ ತನ್ನ ಅಧಿಕಾರ ಕೊನೆಗಾಣುವುದೆಂದು ಅವನು ಅಂಜಿದನು. ಆದರೂ ತನ್ನ ಅಂಜಿಕೆಯನ್ನು ತೋರಿಸಿಕೊಳ್ಳದೆ, ಮುಖ್ಯ ಅರ್ಚಕರನ್ನೂ ಶಾಸ್ತ್ರಿಗಳನ್ನೂ ಕರೆದು "ಆ ರಾಜನು ಎಲ್ಲಿ ಹುಟ್ಟಿರಬಹುದು?" ಎಂದು ಕೇಳಿದನು. ಅವರು ಹಳೆಯ ಗ್ರಂಥಗಳನ್ನು ತಿರುವಿಹಾಕಿ, "ಬೆತ್ಲೆಹೇಮಿನಲ್ಲಿ ಹುಟ್ಟುವನೆಂದು ಭವಿಷ್ಯ ಹೇಳಿದ್ದಾರೆ" ಎಂದರು. ಆಗ ಹೆರೋದನು ಯೆರೂಸಲೇಮಿಗೆ ಬಂದಿದ್ದ ಆ ಜ್ಞಾನಿಗಳನ್ನು ಕರೆಸಿ, "ನೀವು ಬೆತ್ಲೆಹೇಮಿಗೆ ಹೋಗಿ ಆ ಮಗುವನ್ನು ಹುಡುಕಿರಿ. ಅದನ್ನು ಕಂಡಾಗ, ನನಗೆ ಬಂದು

ತಿಳಿಸಿರಿ. ನಾನೂ ಆ ಮಗುವನ್ನು ಆರಾಧಿಸಬೇಕು" ಎಂದು ಹೇ ದನು.

ಹೆರೋದನು ಮಹಾಕಪಟಿ. ಬಾಯಲ್ಲಿ ಹಾಗೆ ಹೇಳಿದನೆ ಹೊರತು, ಆ ಮಗು ಸಿಕ್ಕಿದರೆ ಅದನ್ನು ಕೊಲ್ಲಬೇಕೆಂದು ಅವನು ಆಗಲೆ ಮನಸ್ಸು ಮಾಡಿದ್ದನು.

ಆ ಜ್ಞಾನಿಗಳು ಹೆರೋದನನ್ನು ಬೀಳ್ಕೊಂಡು ಯೆರೂಸಲೇಮನ ಬಿಟ್ಟು ಪೂರ್ವಕ್ಕೆ ಹೋದರು. ಬೆತ್ಲೆಹೇಮಿಗೆ ಬರುವವರೆಗೂ ಆ ನಕ್ಷತ್ರ ನಿಲ್ಲಲಿಲ್ಲ, ಇನ್ನೂ ಮುಂದೆ ಮುಂದೆ ಹೋಯಿತು. ಅಲ್ಲದೆ, "ಬನ್ನಿ ಬನ್ನಿ! ಬನ್ನಿ!" ಎಂಬ ಒಂದು ಸಣ್ಣ ಧ್ವನಿ ಬೇರೆ ಅವರ ಕಿವಿಗೆ ಕೇಳಿಸ ತ್ತಿತ್ತು. ಆ ಬೆಳಕನ್ನು ಕಂಡು, ಆ ಶಬ್ದವನ್ನು ಕೇಳಿ, ಅವರು ಎಷ್ಟು ದೂರ ಬೇಕಾದರೂ ಹೋಗಲು ಸಿದ್ಧರಾಗಿದ್ದರು. ಆದರೆ ಅವರು ಬೆತ್ಲೆ ಹೇಮನ್ನು ಸೇರಿದಾಗ ನಕ್ಷತ್ರ ನಿಂತಿತು. ಆ ಮಗುವಿದ್ದ ಗುಡಿಸಿ ಮೇಲೆ ಸರಿಯಾಗಿ ನಿಂತಿತು.

ಆಗ ಆ ಜ್ಞಾನಿಗಳು ಒಳಗೆ ಹೋಗಿ ಆ ಮಗುವನ್ನೂ ತಾಯಿ ಮರಿಯಳನ್ನೂ ಕಂಡು ಮೊಣಕಾಲೂರಿ ನಮಸ್ಕಾರಮಾಡಿದರು. ತಾವ ತಂದ ಅಮೂಲ್ಯವಾದ ಸುಗಂಧದ್ರವ್ಯಗಳಿಂದ ಅವನನ್ನು ಆರಾಧಿಸಿದರು

ಅದೇ ರಾತ್ರಿ ದೇವರು ಅವರಿಗೆ ಕನಸಿನಲ್ಲಿ ಕಾಣಿಸಿಕೊಂಡ "ಹೆರೋದನ ಬಳಿಗೆ ಹೋಗಬೇಡಿ" ಎಂದನು. ಅದರಂತೆಯೇ ಆ ಜ್ಞಾನಿಗಳು ಬಂದ ದಾರಿಯನ್ನು ಬಿಟ್ಟು ಬೇರೆ ದಾರಿಯಲ್ಲಿ ತಮ್ಮ ಊರಿ ಹೋದರು.

ಹೀಗೆ ಆ ಜ್ಞಾನಿಗಳು ತನ್ನ ಆಜ್ಞೆಯಂತೆ ನಡೆಯದೆ ತಮ್ಮ ಊರಿಗೆ ಹೊರಟುಹೋದುದನ್ನು ಕೇಳಿ ಹೆರೋದನಿಗೆ ಮಹಾಕೋಪ ಬಂದಿತು. ಬೆತ್ಲೆಹೇಮಿಗೆ ಹೋಗಿ ಎರಡು ವರುಷಕ್ಕೆ ಮೀರಿದ ಮಕ್ಕ ಳೆಲ್ಲರನ್ನೂ ಕೊಂದು ಬರಬೇಕೆಂದು ತನ್ನ ಸೈನಿಕರನ್ನು ಕಳಿಸಿದನು ಈ ರೀತಿಯಿಂದ ಯೇಸುವನ್ನೂ ತೀರಿಸಿಬಿಡಬಹುದೆಂದು ಅವನು ಎಂದು ಕೊಂಡಿದ್ದನು.

ಆದರೆ ಹೆರೋದನ ಸೈನಿಕರು ಬರುವುದಕ್ಕೆ ಮೊದಲೇ ದೇವರು ಕನಸಿನಲ್ಲಿ ಯೋಸೇಫನಿಗೆ ಕಾಣಿಸಿಕೊಂಡು, "ಹೆರೋದನಿಂದ ನಿನ್ನ ಮಗುವಿಗೆ ಅಪಾಯವಿದೆ. ಅದಕ್ಕಾಗಿ ನಿನ್ನ ಹೆಂಡತಿಯನ್ನೂ ಮಗುವನ್ನೂ ಕರೆದುಕೊಂಡು ಐಗುಪ್ತ ದೇಶಕ್ಕೆ ಹೋಗು. ನಾನು ತಿರುಗಿ ಹೇಳುವ ವರೆಗೆ ಹಿಂದಿರುಗಬೇಡ" ಎಂದನು. ಅದರಂತೆ ಯೋಸೇಫನು ಅದೇ ರಾತ್ರಿ ಹೆಂಡತಿಯೊಡನೆಯೂ ಮಗುವಿನೊಡನೆಯೂ ಐಗುಪ್ತ ದೇಶಕ್ಕೆ ಓಡಿಹೋದನು.

ಕೆಲವು ಕಾಲಾನಂತರ ಹೆರೋದನು ಸತ್ತನು. ಆಗ ದೇವರು ಪುನಃ ಯೋಸೇಫನಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು ಹಿಂದಿರುಗಬಹುದೆಂದು ಅಪ್ಪಣೆ ಕೊಟ್ಟನು. ಅದರಂತೆ ಯೋಸೇಫನು ಹೆಂಡತಿಯೊಡನೆಯೂ ಮಗುವಿನೊಡನೆಯೂ ಇಸ್ರಯೇಲಿಗೆ ಹಿಂದಿರುಗಿದನು. ಆದರೆ ಹೆರೋದನ ಮಗನು ತಂದೆಯ ಬದಲಿಗೆ ಆಳುವನೆಂದು ಕೇಳಿ, ಅಲ್ಲಿ ನಿಲ್ಲಲು ಅಂಜಿ, ನಜರೇತಿನಲ್ಲಿ ಬಂದು ನಿಂತನು.

## ಯೇಸುವಿನ ಹನ್ನೆರಡನೆಯ ವರುಷದಲ್ಲಿ

ಪಸ್ಕಹಬ್ಬವೆಂಬುದು ಯೆಹೂದ್ಯರಿಗೆ ಬಹು ಮುಖ್ಯವಾದ ಹಬ್ಬ.

ಹಿಂದೆ ಯೆಹೂದ್ಯರು ಕಷ್ಟಕಾಲದಲ್ಲಿದ್ದಾಗ ದೇವರು ಅವರನ್ನು ಐಗುಪ್ತ ದೇಶದಿಂದ ಕೆಂಪುಸಮುದ್ರದ ಮಾರ್ಗವಾಗಿ ಕರೆದುತಂದನು. ಆ ಸಹಾಯ ನಡೆದುದು ವರ್ಷದ ಮೊದಲನೆಯ ತಿಂಗಳಿನಲ್ಲಿ. ಆದುದರಿಂದ ಪ್ರತಿ ವರ್ಷದ ಮೊದಲನೆಯ ತಿಂಗಳೂ ಅದರ ನೆನಪಿಗೆ ಹಬ್ಬ ಮಾಡುವುದು ಮೊದಲಾಯಿತು. ಆ ಸಮಯದಲ್ಲಿ ದೇವರಿಗಾಗಿ ಕುರಿಗಳನ್ನೂ ಕರುಗಳನ್ನೂ ಹಣ್ಣುಗಳನ್ನೂ ತಂದು ಒಪ್ಪಿಸುತ್ತಿದ್ದರು. ಆ ಹಬ್ಬ ಸುಮಾರು ಎರಡು ತಿಂಗಳ ಕಾಲ ನಡೆಯುತ್ತಿತ್ತು. ಆ ಕಾಲದಲ್ಲಿ ಕೆಲವು ದಿವಸ ಉಪವಾಸಮಾಡುವರು, ಇನ್ನು ಕೆಲವು ದಿವಸ ಯಥೇಚ್ಛವಾಗಿ ಊಟಮಾಡುವರು. ಆ ಹಬ್ಬ ಮುಗಿಯುವ ವರೆಗು "ನಾವು ಹಿಂದೆ ಗುಲಾಮರಾಗಿದ್ದೆವು. ದೇವರ ದಯೆಯಿಂದ ನಮ್ಮ ದಾಸ್ಯ ಹೋಯಿತು" ಎಂದು ದೇವರ ಮಹಿಮೆಯನ್ನು ಹೊಗಳುವರು. ಆ ಹಬ್ಬ

ಬಂದಾಗ ಯೆಹೂದ್ಯರೆಲ್ಲರೂ ಯೆರೂಸಲೇಮಿನಲ್ಲಿ ಬಂದು ಸೇರು ತ್ತಿದ್ದರು.

ಯೇಸುವಿಗೆ ಹನ್ನೆರಡು ವರ್ಷವಾದಾಗಲೂ ಆ ಹಬ್ಬ ಬಂದಿತು. ಆಗ ಮರಿಯ ಯೋಸೇಫರು ಯೇಸುವನ್ನೂ ಕರೆದುಕೊಂಡು ಹಬ್ಬಕ್ಕಾಗಿ ಯೆರೂಸಲೇಮಿಗೆ ಬಂದರು. ಹಬ್ಬ ಮುಗಿಯುವ ವರೆಗೂ ಅಲ್ಲಿದ್ದು ಅನಂತರ ನಜರೇತಿಗೆ ಹಿಂದಿರುಗಿದರು. ಹಿಂದಿರುಗುವಾಗ ಅವರು ದೊಡ್ಡ ದೊಂದು ಯಾತ್ರಿಕರ ಗುಂಪಿನೊಡನೆ ಹೋದರು. ಅಲ್ಲಿ ಅವರಿವರೊಡನೆ ಮಾತನಾಡುವ ಭರದಲ್ಲಿ ಅವರಿಗೆ ಯೇಸುವಿನ ಯೋಚನೆಯೇ ಬರಲಿಲ್ಲ. ಆ ದಿನ ಸಂಜೆ ದಣಿವಾರಿಸಿಕೊಳ್ಳಲು ಒಂದು ಕಡೆ ತಂಗಿದಾಗ ಮಾತ್ರ ಅವನ ನೆನಪಾಯಿತು. ಅವನ ಸಮವಯಸ್ಸಿನ ಬಾಲಕರ ನಡುವೆ ಯೆಲ್ಲಾ ಹೋಗಿ ಅವನನ್ನು ಹುಡುಕಿದರು. ಆದರೂ ಅವನು ಕಂಡು ಬರಲಿಲ್ಲ. ಆಗ ಮರಿಯ ಯೋಸೇಫರು ಅವನಿಗೆ ಏನಾಯಿತೋ ಎಂದು ಕಳವಳಪಡುತ್ತಾ ಯೆರೂಸಲೇಮಿಗೇ ಮತ್ತೆ ಬಂದರು.

ಯೆರೂಸಲೇಮಿನಲ್ಲಿ ಮೂರು ದಿವಸ ಮನೆಯಿಂದ ಮನೆಗೆ ಅಲೆದು ಮಗನನ್ನು ಹುಡುಕಿದರು. ಆದರೂ ಕಾಣಲಿಲ್ಲ. ಕಡೆಗೆ, ತಮ್ಮ ಮಗ ದೊರಕಬೇಕೆಂದು ಹರಕೆಮಾಡಿಕೊಳ್ಳುವುದಕ್ಕಾಗಿ ದೇವಾಲಯವನ್ನು ಪ್ರವೇಶಿಸಿದಾಗ ಯೇಸುವನ್ನು ಅಲ್ಲಿ ಕಂಡರು.

ಅಲ್ಲಿ ಯೇಸು ವಿದ್ವಾಂಸರ ನಡುವೆ ಕುಳಿತಿದ್ದನು. ಆ ವಿದ್ವಾಂಸರು ಹಬ್ಬಕ್ಕೆ ಬರುವ ಜನರಿಗೆ ಉಪದೇಶಮಾಡತಕ್ಕಂಥವರು. ಅವರ ನಡುವೆ ಕುಳಿತು ಯೇಸು ಮಾತನಾಡುತ್ತಿದ್ದನು. ಅಲ್ಲಿ ನೆರೆದಿದ್ದ ಜ್ಞಾನವೃದ್ಧರೂ ವಯೋವೃದ್ಧರೂ ಆದ ವಿದ್ವಾಂಸರು ಅವನ ಮಾತುಗಳನ್ನು ಕಿವಿ ಗೊಟ್ಟು ಕೇಳುತ್ತಿದ್ದರು. ಅಷ್ಟು ಚಿಕ್ಕ ವಯಸ್ಸಿನವನು ಅಷ್ಟು ತಿಳಿವಳಿಕೆ ಯಿಂದ ಮಾತನಾಡುವುದನ್ನು ಅವರು ಅದು ಮೊದಲು ಕಂಡಿರಲಿಲ್ಲ. ಅವನಿಗೆ ದೇವರೇ ಅಷ್ಟನ್ನೆಲ್ಲಾ ಕಲಿಸಿರಬೇಕೆಂದು ಅವರಿಗೆ ಎನ್ನಿಸುತ್ತಿತ್ತು.

ಹೀಗೆ ವಿದ್ವಾಂಸರು ಕೂಡ ತನ್ನ ಮಗನ ಮಾತಿಗೆ ಮನಸ್ಸು ಕೊಟ್ಟು ಕೇಳುತ್ತಿದ್ದುದನ್ನು ಕಂಡು ಮರಿಯಳು ಬೆರಗಾದಳು. ಮೊದಲು

ಏನು ಹೇಳಲೂ ಅವಳಿಗೆ ತೋರಲಿಲ್ಲ. ಅನಂತರ " ಕಂದ, ನಮಗೇಕೆ ಹೀಗೆ ಕಳವಳವುಂಟುಮಾಡಿದೆ? ನಿನ್ನನ್ನು ಎಲ್ಲೆಲ್ಲೂ ಹುಡುಕಿ ಕಾಣದೆ ದುಃಖಪಡುತ್ತಿದ್ದೆವಲ್ಲ ! " ಎಂದಳು

ಆದಕ್ಕೆ ಯೇಸು " ನನ್ನನ್ನು ಇತರ ಕಡೆಗಳಲ್ಲಿ ಏಕೆ ಹುಡುಕಬೇಕು? ನಾನು ನನ್ನ ತಂದೆಯ ಕೆಲಸದಲ್ಲಿಯೇ ಮಗ್ನನಾಗಿರುವೆನೆಂಬುದು ತಿಳಿಯದೆ ? " ಎಂದನು.

ಜನರನ್ನು ದೇವರ ಕಡೆಗೆ ತಿದ್ದುವುದಕ್ಕಾಗಿ ದೇವರು ತನ್ನನ್ನು ಕಳಿಸಿದನು, ತಾನು ದೇವರ ಮಗ, ತಾನು ಆ ಕಾರ್ಯದಲ್ಲಿ ತೊಡಗಿದ್ದೇನೆ ಎಂದು ಅರ್ಥವಿಟ್ಟು ಅವನು ಆಡಿದುದನ್ನು ಅವಳು ತಿಳಿಯಲಿಲ್ಲ. ಯೋಸೇಫನಿಗೂ ಅದು ಅರ್ಥವಾಗಲಿಲ್ಲ. ಅವರು ಯೇಸುವನ್ನು ಜೊತೆಯಲ್ಲಿ ಕರೆದುಕೊಂಡು ನಜರೇತಿಗೆ ಹಿಂದಿರುಗಿ ಹೋದರು.

ನಜರೇತಿನಲ್ಲಿ ಯೇಸು ತನ್ನ ತಾಯಿತಂದೆಯೊಡನೆ ತನಗೆ ಮೂವತ್ತು ವರ್ಷವಾಗುವವರೆಗೂ ಇದ್ದನು. ಆದರೆ ಆ ನಡುವಿನ ಹದಿನೆಂಟು ವರ್ಷಗಳನ್ನು ಅವನು ಹೇಗೆ ಕಳೆದನೆಂಬುದು ನಮಗೆ ತಿಳಿದು ಬಂದಿಲ್ಲ.

# ದೇವರ ಮಗ ಯೇಸು

## ದೀಕ್ಷಾಸ್ನಾನ, ತಪಸ್ಸು

ಯೇಸು ತನಗೆ ಸುಮಾರು ಮೂವತ್ತು ವರ್ಷವಾದಾಗ ನಜರೇತಿನಿಂದ ಹೊರಟು ಯೋರ್ದನ್ ನದಿಯ ಬಳಿ ಬಂದನು. ಬಂದು, ಯೋಹಾನನಿಂದ ತನಗೂ ದೀಕ್ಷಾಸ್ನಾನವಾಗಬೇಕೆಂದು ಅಪೇಕ್ಷಿಸಿದನು. ಅದಕ್ಕೆ ಯೋಹಾನನು ಸುಲಭವಾಗಿ ಒಪ್ಪಲಿಲ್ಲ. "ನನ್ನಿಂದ ನಿನಗೆ ದೀಕ್ಷಾಸ್ನಾನವಾಗುವುದಕ್ಕಿಂತ ನಿನ್ನಿಂದ ನನಗೆ ಆಗಬೇಕಾದುದೇ ತಕ್ಕುದು" ಎಂದನು. ಆದರೂ ಯೇಸು ದೇವರ ಆಜ್ಞೆಯಂತೆ ಮನುಷ್ಯರನ್ನು ಸನ್ಮಾರ್ಗಕ್ಕೆ ತಿರುಗಿಸಲು ಬಂದವನು ಅಂಥವನು ತಾನು ಮೊದಲು ಸರಿಯಾಗಿ ನಡೆದು, ಅನಂತರ ಇತರರನ್ನು ಹೀಗೆ ನಡೆಯಿರಿ ಎನ್ನುವುದೇ ಯೋಗ್ಯವಾದುದು. ಆದುದರಿಂದ ಅವನು "ನೀನು ಹೇಳುವುದು ಸರಿಯೇ ಆದರೂ ಸದ್ಯಕ್ಕೆ ನೀನೇ ನನಗೆ ದೀಕ್ಷಾಸ್ನಾನ ಮಾಡಿಸು" ಎಂದು ಯೋಹಾನನನ್ನು ಕೇಳಿದನು. ಯೋಹಾನನು ಅದಕ್ಕೆ ಎದುರು ಹೇಳದೆ ಅವನನ್ನು ಯೋರ್ದನಿಗೆ ಕರೆದುಕೊಂಡುಹೋಗಿ ಸ್ನಾನಕೊಟ್ಟನು. ಸ್ನಾನವಾಗುವಾಗ ಯೇಸು ತನ್ನ ತಂದೆಯಾದ ದೇವರನ್ನು ಪ್ರಾರ್ಥಿಸುತ್ತಿದ್ದನು.

ಯೇಸು ಯೋಹಾನನ ಕೈಯಲ್ಲಿ ದೀಕ್ಷಾಸ್ನಾನವನ್ನು ಪಡೆದು ಯೋರ್ದನಿನಿಂದ ಮೇಲೆ ಬರುವಾಗ ಆಕಾಶದಲ್ಲಿ ಒಂದು ಮಹಾಪ್ರಭೆ ಕಾಣಿಸಿಕೊಂಡಿತು. ಆ ಪ್ರಭೆ ಒಂದು ಪಾರಿವಾಳದ ರೂಪವನ್ನು ತಾಳಿ, ಯೇಸುವಿನ ಮೇಲೆ ಇಳಿದುಬಂದಿತು. ಆಗ "ಇವನು ನನ್ನ ಪ್ರೀತಿಗೆ ಪಾತ್ರನಾದ ನನ್ನ ಪ್ರಿಯ ಪುತ್ರ" ಎಂದು ಗಗನದಿಂದ ದೇವರ ವಾಣಿ ಕೇಳಿಸಿತು.

ಅದಾದ ಮೇಲೆ ಯೇಸು ನಿರ್ಜನವಾದ ಬೆಂಗಾಡಿಗೆ ಹೋದನು. ಅಲ್ಲಿ ಒಂಟಿಯಾಗಿ ನಲವತ್ತು ದಿನಗಳ ಕಾಲ ಇದ್ದನು. ಸಂಪೂರ್ಣವಾಗಿ ಉಪವಾಸವನ್ನು ಆಚರಿಸುತ್ತಾ ದೇವರೊಡನೆ ಮಾತನಾಡುತ್ತಿದ್ದನು.

ನಲವತ್ತು ದಿವಸಗಳಾದ ಬಳಿಕ ಉಪವಾಸವನ್ನು ಮುಗಿಸಿ ಆಹಾರಕ್ಕೋಸ್ಕರ ಬೆಂಗಾಡಿನಿಂದ ಹೊರಗೆ ಬಂದನು.

## ಸೈತಾನನ ಸೋಲು

ಆಗ ಸೈತಾನನು ಅವನಿಗೆ ಎದುರಾದನು. ಜನರನ್ನು ಪಾಪ ಮಾಡುವಂತೆ ಪ್ರೇರಿಸುವವನೇ ಈ ಸೈತಾನನು. ಜನರನ್ನು ಪುಣ್ಯಮಾಡದಂತೆ ಪ್ರೇರಿಸುವವನೇ ಈ ಸೈತಾನನು. ಯೇಸುವು ತನ್ನ ತಪಸ್ಸನ್ನು ಮುಗಿಸಿ ಹೊರಡುವುದನ್ನು ಕಂಡು, ಅವನು ಜಗದ ಜನರನ್ನು ದೇವರ ಕಡೆಗೆ ಒಲಿಸಿಯಾನೆಂದು ಸೈತಾನನು ಹೆದರಿದನು. ಯೇಸುವಿನಿಂದ ಲೋಕಕಲ್ಯಾಣವಾಗದಂತೆ ತಡೆಯಲು ಸೈತಾನನು ಯತ್ನಿಸಿದನು. ಸಾಧ್ಯವಾದರೆ ಯೇಸುವಿನ ಮನಸ್ಸನ್ನೇ ದೇವರ ಕಡೆಯಿಂದ ತಿರುಗಿಸಿ ತನ್ನ ಕಡೆಗೆ ಒಲಿಸಿಕೊಳ್ಳಬೇಕೆಂದು ಸೈತಾನನು ಪ್ರಯತ್ನಪಟ್ಟನು.

ಯೇಸುವನ್ನು ಕೆಡಿಸಬೇಕೆಂಬ ಉದ್ದೇಶದಿಂದ ಆ ಪಾಪಶಕ್ತಿಯಾದ ಸೈತಾನನು ಅವನಿಗೆ ಎದುರಾಗಿ ಬಂದು, "ಆಹಾರ ಬೇಕೆಂದು ಹೊರಟಿರುವೆಯಲ್ಲ! ನೀನು ದೇವರ ಮಗನೆಂಬುದು ಸತ್ಯವಾದರೆ ಈ ಕಲ್ಲುಗಳನ್ನು ರೊಟ್ಟಿಗಳಾಗುವಂತೆ ಮಾಡು" ಎಂದನು.

ಅದಕ್ಕೆ ಯೇಸು "ತಿನ್ನಲು ರೊಟ್ಟಿ ಸಂಪಾದಿಸುವುದಕ್ಕಿಂತ ದೇವರು ನಿಯಮಿಸಿದ ಕೆಲಸವನ್ನು ಮಾಡುವುದೇ ಮುಖ್ಯವಾದುದು" ಎಂದನು. ಸೈತಾನನ ಉದ್ದೇಶ ಯೇಸುವಿಗೆ ತಿಳಿಯದೆ ಹೋಗಲಿಲ್ಲ.

ಬಳಿಕ ಸೈತಾನನು ಯೇಸುವನ್ನು ಯೆರೂಸಲೇಮಿಗೆ ಕರೆದುಕೊಂಡು ಹೋದನು. ಅಲ್ಲಿ ಒಂದು ಎತ್ತರವಾದ ದೇವಾಲಯದ ತುದಿಯನ್ನು ಅವನಿಗೆ ತೋರಿಸಿ, "ನೀನು ದೇವರ ಮಗನೆಂಬುದು ಸತ್ಯವಾದರೆ, ಇದೋ ಇಲ್ಲಿಂದ ಕೆಳಗೆ ಬೀಳು. ನಿನ್ನ ದೇವರು ಕಳುಹಿಸುವ ದೇವದೂತರು ನಿನ್ನನ್ನು ಬೀಳದಂತೆ ಆತುಕೊಂಡು ಕಾಪಾಡುವರು" ಎಂದನು.

"ಅಪಾಯಕ್ಕೆ ಮುಖ ಕೊಟ್ಟು ಹೋಗಿ, ದೇವರು ನಮ್ಮನ್ನು ಅಪಾಯದಿಂದ ರಕ್ಷಿಸುವನೇ ಎಂದು ಪರೀಕ್ಷಿಸುವುದು ತಕ್ಕುದಲ್ಲ" ಎಂದು ಯೇಸು ಸೈತಾನನಿಗೆ ಉತ್ತರಕೊಟ್ಟನು.

ಅನಂತರ, ಸೈತಾನನು ಯೇಸುವನ್ನು ಒಂದು ದೊಡ್ಡ ಬೆ
ಮೇಲೆ ಕರೆದೊಯ್ದನು. ಕೆಳಗಡೆ ಸಕಲ ಐಶ್ವರ್ಯದಿಂದ ಸಮ್ಮ
ವಾಗಿ ವಿಸ್ತಾರವಾದ ನಾಡು ಕಂಗೊಳಿಸುತ್ತಿತ್ತು. ಸೈತಾನನು ಅದ
ಯೇಸುವಿಗೆ ತೋರಿಸಿ, "ನೀನು ದೇವರನ್ನು ಬಿಟ್ಟು ನನಗೆ ಮ
ಕಾಲೂರಿ ಪೂಜೆಮಾಡಿದರೆ, ಈ ಕಂಡುಬರುವ ಎಲ್ಲಾ ಸಂಪತ್ತ
ನಿನಗೆ ವಶಪಡಿಸುತ್ತೇನೆ" ಎಂದು ಆಸೆ ತೋರಿಸಿದನು.

ಆದರೂ ಯೇಸು ಆಸೆಗೆ ವಶನಾಗಲಿಲ್ಲ "ನನ್ನ ಕಣ್ಣೆದು
ನಿಲ್ಲಬೇಡ, ಸೈತಾನ್. ನಿನ್ನ ಸ್ವಾಮಿಯಾದ ದೇವರೊಬ್ಬನಿಗೆ ಮ
ನಿನ್ನ ಪೂಜೆ ಸಲ್ಲತಕ್ಕದು—ಎಂಬುದು ನಮ್ಮ ಹಿರಿಯರ ವಚ
ಎಂದನು.

ಆಗ ಸೈತಾನನಿಗೂ ಮನದಟ್ಟಾಯಿತು, ಯೇಸು ದೇವರ
ದೃಢವಾಗಿ ನಂಬಿರುವನೆಂದು. ಸೈತಾನನು ಬಾಲ ಮುದುರಿಕೊಂ
ಮರೆಯಾದನು. ಆಗ ದೇವದೂತರು ಪ್ರತ್ಯಕ್ಷವಾದರು, ಯೇಸುವ
ಉಪಚರಿಸಿದರು.

## ಮೊದಲ ಶಿಷ್ಯರು

ಸ್ವಲ್ಪ ಕಾಲದಲ್ಲಿಯೇ ಯೇಸು ಯೋರ್ದನ್ ನದಿಯ
ಬಂದನು. ಅಲ್ಲಿ ಯೋಹಾನನು ಯೇಸುವನ್ನು ಕಂಡು "ಇದೋ
ಇವನೇ ನೋಡಿ, ದೇವರ ಯಜ್ಞಪಶು, ಲೋಕದ ಜನರ ಪಾಪವ
ಹೊತ್ತು ಕಳೆಯತಕ್ಕವನು" ಎಂದನು.

ಮಾರನೆಯ ದಿನ ಯೋಹಾನನು ಪುನಃ ಯೇಸುವನ್ನು ತೋ
"ಇವನೇ ದೇವರ ಯಜ್ಞಪಶು" ಎಂದನು. ಆಗ ಯೋಹಾನನ ಇಬ್ಬ
ಶಿಷ್ಯರು ಅಲ್ಲಿ ನಿಂತಿದ್ದರು. ಅವರು ಯೇಸುವನ್ನು ಹಿಂಬಾಲಿಸಿದ
ಯೇಸು, ಅವರು ತನ್ನ ಹಿಂದೆ ಬರುವುದನ್ನು ಕಂಡು, "ಏನು ಬೇಕು
ಎಂದನು. "ಗುರುವೆ, ನಿನ್ನ ವಾಸ ಎಲ್ಲಿ?" ಎಂದರವರು. ಯೇ
"ಬಂದು ನೋಡಿ" ಎಂದನು. ಅವರು ಅವನ ವಾಸಸ್ಥಳಕ್ಕೆ ಬಂ
ಆ ದಿನ ಅವನೊಡನೆಯೆ ನಿಂತರು. ಆಗ ಸಂಜೆಯಾಗಿತ್ತು.

ಆ ಇಬ್ಬರಲ್ಲಿ ಒಬ್ಬನ ಹೆಸರು ಆಂದ್ರೆ. ಅವನು ತನ್ನ ಸಹೋದರನಾದ ಸೀಮೋನನನ್ನು ಕಂಡು, " ಕ್ರಿಸ್ತನು ಸಿಕ್ಕಿದನು. ನಮ್ಮನ್ನು ಕಾಪಾಡಲು ಬರಬೇಕಾಗಿದ್ದ ರಕ್ಷಕನು ಸಿಕ್ಕಿದನು " ಎಂದನು. ಆಂದ್ರೆಯು ಸೀಮೋನನನ್ನು ಯೇಸುವಿನ ಬಳಿಗೆ ಕರೆತಂದನು. ಯೇಸುವು " ನೀನು ಸೀಮೋನನು. ಮುಂದೆ ನಿನ್ನನ್ನು ಪೇತ್ರನೆನ್ನುವರು " ಎಂದು ಅವನನ್ನು ಮಾತನಾಡಿಸಿದನು

ಮಾರನೆಯ ದಿನ ಯೇಸು ಗಲಿಲಾಯಕ್ಕೆ ಹೊರಟನು. ಆಗ ಫಿಲಿಪ್ಪನು ಸಿಕ್ಕಿದನು. ಯೇಸು " ನನ್ನ ಹಿಂದೆ ಬಾ " ಎಂದು ಅವನನ್ನು ಕರೆದನು. ಫಿಲಿಪ್ಪನು ಆಂದ್ರೆ ಮತ್ತು ಪೇತ್ರರ ಊರಿನವನು.

ಫಿಲಿಪ್ಪನು ನತಾನಯೇಲನನ್ನು ಹುಡುಕಿ, " ಮೋಶೆಯೂ ಪ್ರವಾದಿಗಳೂ ಕುರಿತು ಹೇಳಿದವನು ದೊರಕಿದನು ಅವನು ನಜರೇತಿನ ಯೋಸೇಫನ ಮಗನಾದ ಯೇಸು " ಎಂದನು ಅದಕ್ಕೆ ನತಾನಯೇಲನು " ನಸರೇತಿನಿಂದ ಒಳ್ಳೆಯದು ಏನು ಬಂದೀತು ? " ಎಂದನು. " ಆದರೂ ಬಂದು ನೋಡು " ಎಂದು ಫಿಲಿಪ್ಪನು ಅವನನ್ನು ಯೇಸುವಿನ ಬಳಿಗೆ ಕರೆದೊಯ್ದನು. ಯೇಸು ನತಾನಯೇಲನನ್ನು ದೂರದಿಂದಲೇ ನೋಡಿ " ಇವನೀಗ ನಿಜವಾದ ಇಸ್ರಯೇಲದವನು ಇವನಲ್ಲಿ ಕಪಟವಿಲ್ಲ " ಎಂದನು. " ನೀನು ನನ್ನನ್ನು ಹೇಗೆ ಬಲ್ಲೆ ?" ಎಂದ, ನತಾನಿಯೇಲ್. ಅದಕ್ಕೆ ಯೇಸು " ಫಿಲಿಪ್ಪನು ನಿನ್ನನ್ನು ಕರೆಯುವುದಕ್ಕೆ ಮುಂಚೆ ನೀನು ಅಂಜೂರದ ಮರದ ಕೆಳಗಿದ್ದಾಗ ನೋಡಿದ್ದೆ " ಎನ್ನಲು, ನತಾನಯೇಲನು " ಗುರುವೆ, ನೀನೀಗ ದೇವರ ಮಗ. ನೀನೀಗ ಇಸ್ರಯೇಲದ ರಾಜ " ಎಂದನು. ಆಗ ಯೇಸು "ನಿನ್ನನ್ನು ಅಂಜೂರದ ಮರದ ಕೆಳಗೆ ನೋಡಿದೆನೆಂದಾಗ ನಿನಗೆ ನಂಬಿಕೆಯುಂಟಾಯಿತು. ಇದಕ್ಕಿಂತ ಹೆಚ್ಚಿನ ಕಾರ್ಯಗಳನ್ನು ನೀನು ನೋಡುವೆ " ಎಂದನು.

## ಯೇಸುವಿನ ಮೊದಲನೆಯ ಅದ್ಭುತಕಾರ್ಯ

ಮೂರನೆಯ ದಿನ ಗಲಿಲಾಯದ ಕಾನಾ ನಗರದಲ್ಲಿ ಒಂದು ಮದುವೆ ನಡೆಯಿತು. ಯೇಸುವಿನ ತಾಯಿ ಹೋಗಿದ್ದಳು. ಯೇಸುವನ್ನೂ ಅವನ ಶಿಷ್ಯರನ್ನೂ ಕರೆದಿದ್ದರು ಆಗ ಮದುವೆಯ ಮನೆಯಲ್ಲಿ ದ್ರಾಕ್ಷಾ

ರಸ ಸಾಲದೆ ಬಂದಿತು. ಅದನ್ನು ಯೇಸುವಿನ ತಾಯಿ ಅವನಿಗೆ ತಿಳಿಸಿದಳು. ಯೇಸು "ನನ್ನ ಗೊಡವೆ ನಿನಗೇಕೆ? ನನ್ನ ಸಮಯ ಇನ್ನೂ ಬಂದಿಲ್ಲ" ಎಂದನು. ಅವನ ತಾಯಿ "ಅವನು ಹೇಳಿದುದನ್ನು ಮಾಡಿರಿ" ಎಂದು ಅಲ್ಲಿಯ ಕೆಲಸಗಾರರಿಗೆ ಹೇಳಿದಳು.

ಆ ಮನೆಯಲ್ಲಿ ನೀರು ತುಂಬುವ ಆರು ಕಲ್ಲಿನ ಪಾತ್ರೆಗಳಿತ್ತು. ಯೇಸು ಅದರ ತುಂಬಾ ನೀರು ತುಂಬಿಸಿ, "ಈಗ ಇದರಿಂದ ತೋಡಿಕೊಂಡು ಊಟದ ಪಾರುಪತ್ಯಗಾರನಿಗೆ ಕೊಡು" ಎಂದನು. ಅವರು ಹಾಗೆಯೆ ಮಾಡಿದರು.

ಊಟದ ಪಾರುಪತ್ಯಗಾರನು ಅದನ್ನು ರುಚಿ ನೋಡಿದನು ನೀರು ನೀರಾಗಿರಲಿಲ್ಲ, ದ್ರಾಕ್ಷಾರಸವಾಗಿತ್ತು. ಅವನು ಮದುಮಗನನ್ನು ಕರೆದು, "ಸಾಮಾನ್ಯವಾಗಿ ಒಳ್ಳೆಯ ದ್ರಾಕ್ಷಾರಸವನ್ನು ಮೊದಲುಕೊಟ್ಟು ಕಡೆಕಡೆಗೆ ಕೆಟ್ಟುದನ್ನು ಕೊಡುವುದು ಪದ್ಧತಿ. ಆದರೆ ನೀನು ಉತ್ತಮವಾದ ದ್ರಾಕ್ಷಾರಸವನ್ನು ಕಡೆಯುವರೆಗೂ ಇಟ್ಟಿದ್ದೆ" ಎಂದನು.

ಗಲಿಲಾಯದ ಕಾನಾ ನಗರದಲ್ಲಿ ಯೇಸು ಮಾಡಿದ ಇದು ಅವನ ಮೊದಲ ದಿವ್ಯಕೃತ್ಯ. ಇದರಿಂದ ಅವನ ಮಹಿಮೆ ಗೊತ್ತಾಯಿತು. ಅವನ ಶಿಷ್ಯರು ಅವನನ್ನು ನಂಬಿದರು.

ಇದಾದ ಬಳಿಕ ಯೇಸು ಕಪೆರ್‌ನೌಮಿಗೆ ಹೋದನು. ಅಲ್ಲಿ ತನ್ನ ತಾಯೊಡನೆಯೂ ಸೋದರರೊಡನೆಯೂ ಶಿಷ್ಯರೊಡನೆಯೂ ಇದ್ದನು. ಆದರೂ ಬಹಳ ದಿವಸ ಅಲ್ಲಿ ಇರಲಿಲ್ಲ.

## ಯೆರೂಸಲೇಮಿನಲ್ಲಿ ಯೇಸು

ಪಸ್ಕಹಬ್ಬ ಹತ್ತಿರ ಬಂದಿತು. ಯೇಸು ಯೆರೂಸಲೇಮಿಗೆ ಹೋದನು. ಅಲ್ಲಿನ ದೇವಾಲಯದಲ್ಲಿ ದನ ಕುರಿ ಪಾರಿವಾಳಗಳನ್ನು ಮಾರುವವರು ಅವನ ಕಣ್ಣಿಗೆ ಬಿದ್ದರು; ರೋಮಕರ ನಾಣ್ಯವನ್ನೂ ಯೆಹೂದ್ಯರ ನಾಣ್ಯವನ್ನೂ ಕೊಟ್ಟು ತೆಗೆಯುವವರು ಅವನ ಕಣ್ಣಿಗೆ ಬಿದ್ದರು. ಆಗ ಯೇಸು ಸಣ್ಣ ಹಗ್ಗದಿಂದ ಕೊರಡೆಮಾಡಿ ಆ ವ್ಯಾಪಾರಿಗಳನ್ನು ಹೊಡೆದು ಹೊರಗೋಡಿಸಿದನು. ದನ ಕುರಿಗಳನ್ನೂ ಓಡಿಸಿ

ಬಿಟ್ಟನು. ನಾಣ್ಯ ಬದಲಾಯಿಸುವವರ ಹಣವನ್ನೆಲ್ಲಾ ತೆಗೆದು ಚೆಲ್ಲಿ ಬಿಟ್ಟನು. ಪಾರಿವಾಳ ಮಾರುವವರನ್ನು ಕುರಿತು "ಇದನ್ನೆಲ್ಲಾ ಆಚೆ ಕೊಂಡು ಹೋಗಿರಿ. ನನ್ನ ತಂದೆಯ ಮನೆಯನ್ನು ನಂತೆಯ ಮಾಳ ಮಾಡಬೇಡಿರಿ" ಎಂದನು. ದೇವರ ಮನೆಯ ಮೇಲಿನ ಅಭಿಮಾನ ದಿಂದ ಯೇಸು ಪರವಶನಾದನು.

ಆಗ ಯೆಹೂದ್ಯರು "ಇಷ್ಟೆಲ್ಲಾ ಮಾಡುವ ಅಧಿಕಾರ ನಿನಗೆ ಇರುವುದಕ್ಕೆ ಏನು ಗುರುತು?" ಎಂದರು. ಯೇಸು "ಈ ದೇವಾಲಯ ವನ್ನು ಕೆಡವಿಬಿಡಿರಿ. ಇನ್ನು ಮೂರು ದಿನದಲ್ಲಿ ಇದನ್ನು ಕಟ್ಟುತ್ತೇನೆ" ಎಂದನು. ಅದಕ್ಕೆ ಯೆಹೂದ್ಯರು "ಈ ಕಟ್ಟಡ ಕಟ್ಟುವುದಕ್ಕೆ ನಲುವತ್ತಾರುವರ್ಷ ಹಿಡಿಯಿತು. ನೀನು ಇದನ್ನು ಮೂರು ದಿನಗಳಲ್ಲಿ ಕಟ್ಟುವೆಯೋ?" ಎಂದರು.

ಯೇಸು ತನ್ನ ದೇಹವೆಂಬ ದೇವಾಲಯವನ್ನು ಕುರಿತು ಮಾತ ನಾಡಿದನೆಂದು ಅವರಿಗೆ ತಿಳಿಯಲಿಲ್ಲ. ಮುಂದೆ, ಮೂರು ವರ್ಷಗಳ ಅನಂತರ, ಯೇಸು ಶಿಲುಬೆಯ ಮೇಲೆ ಮಡಿದು ಮೂರು ದಿವಸಗಳ ಮೇಲೆ ಪುನಃ ಬದುಕಿ ಬಂದಾಗ ಅವನ ಶಿಷ್ಯರಿಗೆ ಈ ಮಾತು ನೆನಪಾ ಯಿತು.

ಯೆರೂಸಲೇಮಿನಲ್ಲಿ ಯೇಸು ಪಸ್ಕಹಬ್ಬದ ಸಮಯದಲ್ಲಿ ಮಾಡಿದ ದಿವ್ಯಕೃತ್ಯಗಳನ್ನು ಕಂಡು ಅನೇಕರು ಅವನನ್ನು ನಂಬಿದರು. ಆದರೆ ಅವನು ಮಾತ್ರ ಅವರನ್ನು ನಂಬಲಿಲ್ಲ. ಜನರ ಆಂತರ್ಯ ಎಂತಹ ದೆಂಬುದು ಅವನಿಗೆ ತಿಳಿದಿತ್ತು.

## ಯೇಸುವಿನ ಬಗ್ಗೆ ಯೋಹಾನನ ಸಾಕ್ಷಿ

ಅನಂತರ ಯೇಸುವೂ ಅವನ ಶಿಷ್ಯರೂ ಯೂದಾಯ ದೇಶಕ್ಕೆ ಬಂದು ತಂಗಿದರು. ಯೇಸು ಅಲ್ಲಿನವರಿಗೆ ದೀಕ್ಷಾಸ್ನಾನ ಮಾಡಿಸು ತ್ತಿದ್ದನು. ಅತ್ತ ಯೋಹಾನನು ಐನೋನ್ ಎಂಬಕಡೆ ತಾನೂ ಜನರಿಗೆ ದೀಕ್ಷಾಸ್ನಾನ ಮಾಡಿಸುತ್ತಿದ್ದನು.

ಆಗ ಯೋಹಾನನ ಶಿಷ್ಯರು ಕೆಲವರು "ಗುರುವೆ, ಅಂದು ಯೋರ್ದನಿನ ಬಳಿಯಲ್ಲಿ ನೀನು ಒಬ್ಬನಿಗಾಗಿ ಸಾಕ್ಷಿ ಹೇಳಿದೆಯಲ್ಲಾ

ಆತನೂ ದೀಕ್ಷಾಸ್ನಾನ ಮಾಡಿಸುತ್ತಾನೆ. ಎಲ್ಲರೂ ಅವನ ಬಳಿಗೇ ಹೋಗುತ್ತಾರೆ" ಎಂದರು.

ಅದಕ್ಕೆ ಯೋಹಾನನು "ದೇವರು ಕೊಟ್ಟ ಹೊರತು ಯಾರೂ ಏನೂ ಪಡೆಯಲಾರರು. ನಾನು ಕ್ರಿಸ್ತನಲ್ಲ, ಅವನಿಗೆ ಮುಂಚಾಗಿ ಬಂದವನು — ಎಂದು ನಾನೇ ಹಿಂದಿನಿಂದ ಹೇಳಿಕೊಂಡಿದ್ದೇನೆ. ಮದುಮಗಳನ್ನು ಉಳ್ಳವನೇ ಮದುಮಗನು. ಮದುಮಗನ ಸ್ನೇಹಿತನು ಅವನ ಧ್ವನಿಯನ್ನು ಕೇಳಿ ಅವನು ಬಂದನೆಂದು ಹಿಗ್ಗುವನು. ಇದರಿಂದ ನನಗೆ ತುಂಬಾ ಸಂತೋಷ. ಅವನು ಮುಂದೆ ಬರಬೇಕು, ನಾನು ಹಿಂದೆ ನಿಲ್ಲಬೇಕು. ಮೇಲಿನಿಂದ ಬಂದವನೇ ಎಲ್ಲರಿಗಿಂತ ಮೇಲಾದವನು. ನೆಲದಲ್ಲಿ ಹುಟ್ಟಿದವನು ನೆಲಕ್ಕೆ ಕುರಿತುದನ್ನು ಹೇಳಿಯಾನು. ಮೇಲಿನಿಂದ ಬಂದವನು ತಾನು ಕಂಡುದನ್ನೂ ಕೇಳಿದುದನ್ನೂ ಸಾಕ್ಷಿಯಾಗಿ ಹೇಳುವನು. ಆದರೆ ಯಾರೂ ಅವನನ್ನು ನಂಬರು. ಅವನನ್ನು ನಂಬಿದವರು ದೇವರು ಇರುವುದು ಸತ್ಯವೆಂಬುದನ್ನು ಸ್ಥಿರಪಡಿಸುವರು. ದೇವರು ಆರನ್ನಾದರೂ ಕಳಿಸಿದರೆ, ಅವನ ಮಾತು ದೇವರ ಮಾತು. ಏಕೆಂದರೆ ದೇವತ್ವವನ್ನು ಕೊಡುವುದರಲ್ಲಿ ದೇವರಿಗೆ ಕೈಹಿಡಿತವಿಲ್ಲ. ತಂದೆಗೆ ಮಗನ ಮೇಲೆ ಪ್ರೀತಿ. ಅವನು ಸರ್ವಸ್ವವನ್ನೂ ಇವನ ಕೈಗೆ ಕೊಟ್ಟಿದ್ದಾನೆ ಈ ಮಗನನ್ನು ನಂಬಿದವನು ನಿತ್ಯಜೀವಿಯಾಗುವನು. ನಂಬದವನು ದೇವರ ಕೋಪಕ್ಕೆ ಗುರಿಯಾಗುವನು" ಎಂದನು.

ಯೋಹಾನನಿಗಿಂತ ತಾನು ಹೆಚ್ಚು ಜನರಿಗೆ ದೀಕ್ಷಾಸ್ನಾನಮಾಡಿಸುವುದನ್ನೂ ಹೆಚ್ಚು ಶಿಷ್ಯರನ್ನು ಪಡೆಯುವುದನ್ನೂ ಕುರಿತು ಫರಿಸಾಯರೂ ಆಡಿಕೊಂಡರೆಂದು ಯೇಸುವಿಗೆ ತಿಳಿಯಿತು. ಆಗ ಅವನು ಯೂದಾಯದೇಶವನ್ನು ಬಿಟ್ಟುಹೋದನು.

## ಸಮಾರಿಯಾ ಸೀಮೆಯಲ್ಲಿ ಯೇಸು

ಆ ವೇಳೆಗೆ, ಯೇಸುವನ್ನು ಕೊಲ್ಲಲು ಬಯಸಿದ್ದ ಹೆರೋದನು ಸತ್ತು ಅವನ ಮಗನಾದ ಹೆರೋದನು ಯೂದಾಯಕ್ಕೆ ಉಪರಾಜ

ನಾಗಿದ್ದನು. ಅವನು ತನ್ನ ಅಣ್ಣನ ಹೆಂಡತಿಯಾದ ಹೆರೋದ್ಯಳೊಡನೆ ಸಂಸಾರಮಾಡುತ್ತಿದ್ದನು. ಅಲ್ಲದೆ ಇನ್ನೂ ಇತರ ದುಷ್ಕೃತ್ಯಗಳನ್ನೂ ಮಾಡುತ್ತಿದ್ದನು. ಅದಕ್ಕಾಗಿ ಯೋಹಾನನು ಹೆರೋದನನ್ನು ಗದರಿಸಿ ಕೊಂಡನು. ಆಗ ಹೆರೋದನು ಯೋಹಾನನನ್ನು ಹಿಡಿತರಿಸಿ ಸೆರೆಯಲ್ಲಿರಿಸಿದನು.

ಯೋಹಾನನು ಸೆರೆಸಿಕ್ಕಿದುದು ಯೇಸುವಿಗೆ ತಿಳಿಯಿತು. ಆತನು ಗಲಿಲಾಯಕ್ಕೆ ಹೊರಟನು.

ಗಲಿಲಾಯಕ್ಕೆ ಹೋಗಬೇಕಾದರೆ ಸಮಾರಿಯಾ ಸೀಮೆಯನ್ನು ಹಾಯಬೇಕು ಯೇಸು ಹಾಗೆ ಅದನ್ನು ಹಾಯುವಾಗ ಸಿಖರೆಂಬ ಊರಿನಲ್ಲಿದ್ದ ಒಂದು ಹಳೆಯ ಬಾವಿಯ ಬಳಿ ಬಂದು, ಕಟ್ಟೆಯ ಮೇಲೆ ಕುಳಿತನು ಆಗ ಸುಮಾರು ಮಧ್ಯಾಹ್ನವಾಗಿತ್ತು ಅವನ ಶಿಷ್ಯರು ಊಟ ತರುವುದಕ್ಕೆ ಊರಿಗೆ ಹೋಗಿದ್ದರು.

ಆಗ ಅಲ್ಲಿಗೆ ಸಮಾರಿಯುದ ಹೆಣ್ಣುಮಗಳೊಬ್ಬಳು ನೀರು ಸೇದಲು ಬಂದಳು. "ಕುಡಿಯಲು ಕೊಂಚ ನೀರು ಕೊಡು, ತಾಯಿ" ಎಂದು ಯೇಸು ಅವಳನ್ನು ಕೇಳಿದನು. ಅದಕ್ಕೆ ಆಕೆ "ನೀನು ಯೆಹೂದ್ಯನಾಗಿ ಸಮಾರಿಯಾದವಳನ್ನು ನೀರು ಕೇಳಬಹುದೆ?" ಎಂದಳು. ಆ ಕಾಲದಲ್ಲಿ ಯೆಹೂದ್ಯರಿಗೂ ಸಮಾರಿಯಾದವರಿಗೂ ಸಂಪರ್ಕವಿರಲಿಲ್ಲ.

ಆಗ ಯೇಸು "ಅಮ್ಮಾ, ದೇವರ ವರದ ವಿಷಯ ನಿನಗೆ ತಿಳಿದಿದ್ದರೆ, ನಿನ್ನನ್ನು ನೀರು ಕೇಳುವ ಇವನಾರೆಂದು ನಿನಗೆ ಗೊತ್ತಿದ್ದರೆ, ನೀನೂ ಇವನನ್ನು ಬೇಡುತ್ತಿದ್ದೆ. ಇವನು ನಿನಗೆ ಜೀವಕೊಡುವ ನೀರು ಕೊಡುತ್ತಿದ್ದ" ಎಂದನು.

ಅದಕ್ಕೆ ಆಕೆ "ಸ್ವಾಮಿ, ನೀರು ಸೇದುವುದಕ್ಕೆ ನಿನ್ನಲ್ಲಿ ಏನೂ ಇಲ್ಲ. ಬಾವಿ ಆಳವಾಗಿದೆ. ನೀನು ಈ ಜೀವಕೊಡುವ ನೀರನ್ನು ತೆಗೆಯುವುದು ಎಲ್ಲಿಂದ? ಈ ಬಾವಿಯನ್ನು ಹಿಂದೆ ನಮ್ಮ ಹಿರಿಯನಾದ ಯಾಕೋಬನು ತೆಗೆಸಿದನು. ಈ ನೀರನ್ನು ಅವನೂ ಅವನ ಮಕ್ಕಳೂ ದನಕರುಗಳೂ ಕುಡಿದಿದ್ದಾರೆ. ಅವನಿಗಿಂತ ನೀನು ದೊಡ್ಡವನೆ?" ಎಂದಳು.

ಆಗ ಯೇಸು ಅವಳನ್ನು ಕುರಿತು "ಈ ನೀರನ್ನು ಕುಡಿದವರಿಗೆ ಪುನಃ ದಾಹವುಂಟು ಆದರೆ ನಾನು ಕೊಡುವ ನೀರು ಕುಡಿದವನು ಪುನಃ ದಾಹಪಡನು. ನಾನು ಕೊಡುವ ನೀರು ಅವನಲ್ಲಿ ಉಕ್ಕುವ ಚಿಲುಮೆಯಾಗಿ ಅವನಿಗೆ ನಿತ್ಯಜೀವವನ್ನು ಕೊಡುವುದು" ಎಂದನು.

ಆಗ ಆಕೆ "ಸ್ವಾಮಿ, ನನಗೆ ಆ ನೀರು ಕೊಡು; ಇನ್ನು ಮುಂದೆ ನನಗೆ ದಾಹವಾಗದಿರಲಿ. ನಾನು ಇಲ್ಲಿಗೆ ನೀರೆಳೆಯಲು ಬರುವುದು ತಪ್ಪಲಿ" ಎಂದಳು.

ಅದಕ್ಕೆ ಯೇಸು "ಹೋಗಿ ನಿನ್ನ ಗಂಡನನ್ನು ಕರೆದುಕೊಂಡು ಬಾ" ಎಂದನು.

"ನನಗೆ ಗಂಡನಿಲ್ಲ" ಎಂದಳವಳು.

"ಗಂಡನಿಲ್ಲವೆಂದು ಸರಿಯಾಗಿ ಹೇಳಿದೆ. ನಿನಗೆ ಐದು ಜನ ಗಂಡಂದಿರು ಇದ್ದರು. ಈಗ ಇರುವವನು ನಿನ್ನ ಗಂಡನಲ್ಲ. ನೀನು ಹೇಳಿದುದು ಸರಿಯೇ" ಎಂದನು ಯೇಸು.

"ಸ್ವಾಮಿ, ನೀನು ಪ್ರವಾದಿ. ನಮ್ಮ ಹಿರಿಯರು ಈ ಬೆಟ್ಟದಲ್ಲಿ ದೇವರನ್ನು ಆರಾಧಿಸುತ್ತಿದ್ದರು ಆದರೆ ಆರಾಧಿಸತಕ್ಕ ಸ್ಥಳ ಯೆರೂಸಲೇಮಿನಲ್ಲಿದೆಯೆಂದು ಹೇಳುವೆಯಲ್ಲ?" ಎಂದಳು ಆ ಹೆಣ್ಣು.

"ತಾಯಿ, ದೇವರ ಆರಾಧನೆಗೆ ಈ ಬೆಟ್ಟಕ್ಕೂ ಬರಬೇಕಾಗಿಲ್ಲ, ಯೆರೂಸಲೇಮಿಗೂ ಹೋಗಬೇಕಾಗಿಲ್ಲ. ಅಂಥ ಕಾಲ ಬರುತ್ತಿದೆ. ನೀವು ಅರಿಯದ ಯಾವುದನ್ನೋ ಆರಾಧಿಸುವಿರಿ. ನಾವು ಅರಿತುದನ್ನು ಆರಾಧಿಸುವೆವು. ಆದರೆ ನಿಜವಾದ ದೇವರನ್ನು ತಿಳಿದು ಆರಾಧಿಸುವ ಸಮಯ ಸಮೀಪಿಸುತ್ತಿದೆ" ಎಂದು ಯೇಸು ಹೇಳಿದನು.

ಅದಕ್ಕೆ ಅವಳು "ಕ್ರಿಸ್ತನು ಬರುವನೆಂದು ಕೇಳಿದ್ದೇನೆ. ಆತನು ಬಂದಾಗ ನಮಗೆ ಎಲ್ಲವನ್ನೂ ತಿಳಿಸುವನು" ಎಂದಳು.

ಆಗ ಯೇಸು "ನಿನ್ನ ಹತ್ತಿರ ಮಾತನಾಡುತ್ತಿರುವ ನಾನೇ ಅವನು" ಎಂದನು.

ಆ ವೇಳೆಗೆ ಅವನ ಶಿಷ್ಯರು ಊರಿನಿಂದ ಹಿಂತಿರುಗಿ ಬಂದರು. ಆ ಹೆಂಗುಸಿನೊಡನೆ ಅವನು ಮಾತನಾಡುತ್ತಿದ್ದುದನ್ನು ಕಂಡು ಆಶ್ಚರ್ಯಪಟ್ಟರು. ಆದರೂ "ನಿನಗೇನು ಬೇಕು? ಅವಳೊಡನೆ ಏಕೆ ಮಾತನಾಡುವೆ?" ಎಂದು ಯಾರೂ ಎನ್ನಲಿಲ್ಲ.

ಅನಂತರ ಆ ಸಮಾರಿಯದ ಹೆಣ್ಣು ತನ್ನ ಗಡಿಗೆಯನ್ನು ಅಲ್ಲಿಯೇ ಬಿಟ್ಟು ನಗರಕ್ಕೆ ಹೋದಳು. "ನಾನು ಮಾಡಿದುದನ್ನೆಲ್ಲಾ ಕಂಡಂತೆ ತಿಳಿಸಿದವನನ್ನು ನೋಡಿ, ಬನ್ನಿ. ಆತನೇ ಅಲ್ಲವೆ ಕ್ರಿಸ್ತನು?" ಎಂದು ನಗರದವರನ್ನು ಕರೆದಳು. ಆ ನಗರದವರು ಯೇಸುವಿನ ಬಳಿಗೆ ಬಂದರು.

ಅಷ್ಟರಲ್ಲಿ ಯೇಸುವಿನ ಶಿಷ್ಯರು "ಊಟಮಾಡು, ಗುರುವೇ" ಎಂದು ಬೇಡಿದರು.

ಅದಕ್ಕೆ ಯೇಸು "ಆಹಾರ ನನ್ನಲ್ಲಿ ಉಂಟು. ಅದನ್ನು ನೀವು ಅರಿಯಿರಿ" ಎಂದನು.

"ಯಾರಾದರೂ ಏನಾದರೂ ತಿನ್ನಲು ತಂದುಕೊಟ್ಟರೊ?" ಎಂದು ಶಿಷ್ಯರು ಮಾತನಾಡಿಕೊಂಡರು.

ಆಗ ಯೇಸು "ನನ್ನನ್ನು ಕಳಿಸಿದವನ ಸಂಕಲ್ಪವನ್ನು ನಡಸುವುದೆ ನನಗೆ ಆಹಾರ. ಆತನ ಕಾರ್ಯವನ್ನು ಪೂರೈಸುವುದೇ ನನಗೆ ಆಹಾರ. ಇನ್ನು ನಾಲ್ಕು ತಿಂಗಳಾದ ಮೇಲೆ ಸುಗ್ಗಿ ಬರುತ್ತದೆಂದು ನೀವು ಹೇಳುವುದಿಲ್ಲವೆ? ಇದೋ, ಕಣ್ಣೆತ್ತಿ ವಿವಿಧ ದೇಶಗಳನ್ನು ನೋಡಿರಿ. ಅವು ಬೆಳ್ಳಗಾಗಿ ಕುಯಿಲಿಗೆ ಬಂದಿವೆ. ಕುಯಿಲು ಕುಯಿದವನಿಗೆ ಕೂಲಿ ದೊರಕುತ್ತದೆ, ನಿತ್ಯಜೀವಕ್ಕೆ ಬೇಕಾದ ಫಲ ದೊರಕುತ್ತದೆ. ಬಿತ್ತಿದವನೂ ಕುಯಿದವನೂ ಇಬ್ಬರೂ ಸಂತೋಷಪಡಬಹುದು. ಬಿತ್ತುವವನೊಬ್ಬ, ಕುಯ್ಯುವವನು ಬೇರೊಬ್ಬ—ಎಂಬ ಮಾತು ನಿಜ. ನೀವು ಬಿತ್ತದುದನ್ನು ಕುಯ್ಯುವುದಕ್ಕಾಗಿ ನಿಮ್ಮನ್ನು ಕಳಿಸುತ್ತಿದ್ದೇನೆ. ದುಡಿದವರು ಬೇರೆಯವರು. ನೀವೂ ಆ ದುಡಿತಕ್ಕೆ ಸೇರಿದ್ದೀರಿ" ಎಂದನು.

ಆ ವೇಳೆಗೆ, ಆ ಹೆಂಗುಸಿನ ಮಾತನ್ನು ಕೇಳಿ ಸಮಾರಿಯದವರಲ್ಲಿ ಅನೇಕರಿಗೆ ಯೇಸುವಿನಲ್ಲಿ ನಂಬಿಕೆ ಹುಟ್ಟಿತ್ತು. ಅವರೆಲ್ಲರೂ ಅವನ

ಬಳಿಗೆ ಬಂದು ಅವನು ಅಲ್ಲಿಯೇ ತಂಗಬೇಕೆಂದು ಬೇಡಿದರು. ಯೇಸುವೂ ಎರಡು ದಿವಸ ಅಲ್ಲಿ ತಂಗಿದನು. ಅನೇಕರು ಅವನ ಮಾತನ್ನೇ ಕೇಳಿ ಅವನಲ್ಲಿ ನಂಬಿಕೆಯಿಟ್ಟರು. ಅವರು ಆ ಸಮಾರಿಯದ ಹೆಂಗುಸನ್ನು ಕುರಿತು, "ಈತನು ಲೋಕವನ್ನು ಉದ್ಧಾರಮಾಡುವವನೆಂದು ನಾವು ನಂಬಿದ್ದೇವೆ. ನೀನು ಹೇಳಿದುದರಿಂದ ಮಾತ್ರವೇ ನಾವು ನಂಬುತ್ತಿಲ್ಲ. ನಾವೇ ಕಿವಿಯಾರೆ ಕೇಳಿ ನಂಬಿದ್ದೇವೆ" ಎಂದರು.

### ಯೇಸುವಿನ ಎರಡನೆಯ ಅದ್ಭುತಕಾರ್ಯ

ಎರಡು ದಿನಗಳಾದ ಮೇಲೆ, ಯೇಸು ಅಲ್ಲಿಂದ ಹೊರಟು ಗಲಿಲಾಯಕ್ಕೆ ಹೋದನು. ಪಸ್ಕಹಬ್ಬದ ಕಾಲದಲ್ಲಿ ಅವನು ಮಾಡಿದ ಮಹಾಕಾರ್ಯಗಳನ್ನು ಗಲಿಲಾಯದವರು ತಿಳಿದಿದ್ದರು. ಅವರು ಕೂಡ ಹಬ್ಬದ ದಿವಸ ಯೆರೂಸಲೇಮಿಗೆ ಹೋಗಿದ್ದರು. ಆದ್ದರಿಂದ ಗಲಿಲಾಯದವರು ಯೇಸುವನ್ನು ಬರಮಾಡಿಕೊಂಡರು.

ಯೇಸು ಪುನಃ ಗಲಿಲಾಯದ ಕಾನಾನಗರಕ್ಕೆ ಬಂದನು. ಅಲ್ಲಿಯೇ ಹಿಂದೆ ಅವನು ನೀರನ್ನು ದ್ರಾಕ್ಷಾರಸಮಾಡಿದುದು. ಈ ಸಲ ಯೇಸು ಬಂದಾಗ ಗಲಿಲಾಯದಲ್ಲಿ ಒಬ್ಬ ಪ್ರಧಾನನಿದ್ದ. ಯೇಸು ಬಂದುದನ್ನು ತಿಳಿದು, ಸಾಯುವ ಸ್ಥಿತಿಯಲ್ಲಿದ್ದ ತನ್ನ ಮಗನನ್ನು ಬದುಕಿಸಬೇಕೆಂದು ಅವನು ಯೇಸುವನ್ನು ಬೇಡಿಕೊಂಡನು. "ಅದ್ಭುತಕಾರ್ಯಗಳನ್ನೂ ಸೂಚನೆಗಳನ್ನೂ ಕಂಡ ಹೊರತು ಇವರು ನಂಬುವುದಿಲ್ಲವಲ್ಲಾ" ಎಂದು ಯೇಸು ಪೇಚಾಡಿದನು. ಆದರೂ "ದೇವ, ನನ್ನ ಮಗ ಸಾಯುವ ಮುಂಚೆ ಬಾ" ಎಂದು ಆ ಪ್ರಧಾನಿ ಬೇಡಿದನು. ಆಗ ಯೇಸು "ಹೋಗು. ನಿನ್ನ ಮಗ ಬದುಕಿದನು" ಎಂದನು. ಪ್ರಧಾನಿಯು ಯೇಸುವಿನ ಮಾತಿನಲ್ಲಿ ನಂಬಿಕೆಯಿರಿಸಿ ಹೋದನು. ಯೇಸು ಆ ಮಾತನಾಡಿದ ಹೊತ್ತಿನಿಂದ ತನ್ನ ಮಗ ಗುಣಮುಖವಾದನೆಂದು ಮನೆಗೆ ಹೋದಾಗ ಪ್ರಧಾನಿಗೆ ತಿಳಿಯಿತು. ಅವನು ಯೇಸುವಿನಲ್ಲಿ ನಂಬಿಕೆಯಿಟ್ಟನು, ಅವನ ಮನೆಯವರೂ ನಂಬಿದರು.

ಇದು ಯೂದಾಯದಿಂದ ಗಲಿಲಾಯಕ್ಕೆ ಬಂದು ಯೇಸು ನಡಸಿದ ಎರಡನೆಯ ಅದ್ಭುತಕಾರ್ಯ. ಇದರಿಂದ ಯೇಸುವಿನ ಹೆಸರು ದೇಶ

ದಲ್ಲೆಲ್ಲಾ ಹಬ್ಬಿತು. ಅವನು ಅಲ್ಲಿಯ ಸಭಾಮಂದಿರಗಳಲ್ಲಿ ಬೋಧಿಸು ವನು, ಎಲ್ಲರೂ ಅವನನ್ನು ಹೊಗಳುವರು.

## ತನ್ನ ಊರಿನಲ್ಲಿ ಯೇಸು

ಯೇಸು ನಜರೇತಿಗೆ ಬಂದನು. ಅಲ್ಲಿಯೇ ಅವನು ಬೆಳೆದುದು. ತನ್ನ ಪದ್ಧತಿಯಂತೆ, ಸಬ್ಬತ್ ದಿನದಲ್ಲಿ, ಅಲ್ಲಿಯ ಸಭಾಮಂದಿರಕ್ಕೆ ಹೋಗಿ ಓದಲು ನಿಂತನು. ಪ್ರವಾದಿಯಾದ ಯೆಶಾಯನ ಪುಸ್ತಕದ ಸುರುಳಿಯನ್ನು ಅವನ ಕೈಯಲ್ಲಿಟ್ಟರು.

"ದೈವತ್ವ ನನ್ನಲ್ಲಿದೆ. ಬಡವರಿಗೆ ಸುವಾರ್ತೆಯನ್ನು ಸಾರುವುದಕ್ಕಾಗಿ ನನಗೆ ಅಭಿಷೇಕಮಾಡಿದನು ಕುಗ್ಗಿದವರಿಗೆ ಹಿಗ್ಗು ಕೊಡುವುದಕ್ಕೂ, ಸೆರೆ ಸಿಕ್ಕಿದವರಿಗೆ ಮೋಕ್ಷ ಸಾರುವುದಕ್ಕೂ, ಕುರುಡರಿಗೆ ಕಣ್ಣು ಕೊಡುವುದಕ್ಕೂ, ನೊಂದವರನ್ನು ನಲಿಸುವುದಕ್ಕೂ ನನ್ನನ್ನು ಕಳಿಸಿದನು" ಎಂದು ಅವನು ಬಿಚ್ಚಿದ ಭಾಗದಲ್ಲಿ ಬರೆದಿತ್ತು.

ಯೇಸು ಪುಸ್ತಕವನ್ನು ಮುಚ್ಚಿಕೊಟ್ಟು ಕುಳಿತನು. ಸಭಾ ಮಂದಿರದಲ್ಲಿ ಎಲ್ಲರ ಕಣ್ಣೂ ಅವನ ಮೇಲೆಯೆ ಇತ್ತು. "ಈ ದಿವಸ ಈ ಮಾತು ನಿಮ್ಮ ಕಿವಿಗೆ ಬಿದ್ದು ಈ ಪವಿತ್ರ ಪುಸ್ತಕದ ಮಾತು ಸಫಲವಾಗುವುದು" ಎಂದು ಯೇಸು ಮೊದಲುಮಾಡಿದನು. ಆಗ ಎಲ್ಲರೂ ಅವನನ್ನು ಹೊಗಳಿದರು. ಅವನ ಮುಖದಿಂದ ಬಂದ ಇಂಪಾದ ಮಾತುಗಳನ್ನು ಕೇಳಿ ಆಶ್ಚರ್ಯಪಟ್ಟರು. "ಇವನು ಯೋಸೇಫನ ಮಗನಲ್ಲವೇ ?" ಎಂದು ಮಾತನಾಡಿಕೊಂಡರು.

ಆಗ ಯೇಸು "ವೈದ್ಯ, ನಿನ್ನನ್ನು ಮೊದಲು ಗುಣಪಡಿಸಿಕೊ— ಎಂಬ ಗಾದೆಯನ್ನು ನನಗೆ ನೀವು ಹೇಳೀರಿ. 'ಕಪೆರ್‌ನೌಮಿನಲ್ಲಿ ನೀನು ಮಾಡಿದ ಅದ್ಭುತಕಾರ್ಯಗಳನ್ನು ಕೇಳಿದ್ದೇವೆ; ಅಂಥವನ್ನು ನಿನ್ನ ಸ್ವದೇಶದಲ್ಲಿಯೂ ಮಾಡು' ಎಂದೀರಿ. ಆಗಲಿ, ಆಗಲಿ, ಯಾವ ಪ್ರವಾದಿಯನ್ನೂ ಅವನ ಸ್ವದೇಶದಲ್ಲಿ ಒಪ್ಪಿಕೊಂಡುದಿಲ್ಲ. ಹಿಂದೆ ನಡೆದುದನ್ನು ಕೇಳಿರಿ. ಎಲೀಯನ ಕಾಲದಲ್ಲಿ ಮೂರು ವರ್ಷ ಆರು ತಿಂಗಳು ಮಳೆ ಬರಲಿಲ್ಲ. ಬರ ಬಂದಿತು. ಆಗ ಇಸ್ರಯೇಲ ಜನರಲ್ಲಿ ಎಷ್ಟೋ ವಿಧವೆ

ಯರಿದ್ದರು. ಅವರು ಯಾರ ಬಳಿಗೂ ದೇವರು ಎಲೀಯನನ್ನು ಕಳ
ಲಿಲ್ಲ; ಸೀದೋನ್‌ದೇಶದ ಒಬ್ಬ ವಿಧವೆಯ ಬಳಿಗೆ ಮಾತ್ರ ಕಳಿಸಿದನ
ಎಲೀಷನೆಂಬ ಪ್ರವಾದಿಯ ಕಾಲದಲ್ಲಿ ಇಸ್ರಯೇಲ್ ಜನರಲ್ಲಿ ಕು
ರೋಗಿಗಳು ಅನೇಕರಿದ್ದರು. ಆದರೂ ಅವರಲ್ಲಿ ಒಬ್ಬನೂ ಶುದ್ಧನಾ
ಲಿಲ್ಲ. ಸುರಿಯದೇಶದ ನಾಮಾನನು ಮಾತ್ರ ಶುದ್ಧನಾದನು" ಎಂ
ಹೇಳಿದನು.

ಆ ಮಾತು ಕೇಳಿ, ಸಭಾಮಂದಿರದಲ್ಲಿ ಎಲ್ಲರೂ ಸಿಟ್ಟಾದರ
ಎದ್ದರು. ಯೇಸುವನ್ನು ಊರಹೊರಗೆ ಅಟ್ಟಿದರು. ತಮ್ಮ ಊರನ
ಕಟ್ಟಿದ್ದ ಗುಡ್ಡದ ಮೇಲಕ್ಕೆ ಅಟ್ಟಿಕೊಂಡು ಹೋಗಿ, ಅಲ್ಲಿಂದ ಅವನನ
ಕೆಳಕ್ಕೆ ತಳ್ಳಬೇಕೆಂದಿದ್ದರು. ಆದರೆ ಯೇಸು ಅವರ ನಡುವೆ ಹಾ
ಹೋಗಿ ತನ್ನ ದಾರಿ ತಾನು ಹಿಡಿದನು.

## ಕಪೆರ್‌ನೌಮಿನಲ್ಲಿ ಯೇಸು

ಯೇಸು ನಜರೇತನ್ನು ಬಿಟ್ಟು ಸಮುದ್ರತೀರದಲ್ಲಿದ್ದ ಕಪೆರ್‌ನೌಮಿ
ಬಂದು ವಾಸಿಸಿದನು. ಅಲ್ಲಿ "ಸಮಯ ಸಮೀಪವಾಗುತ್ತಿದೆ. ದೇವ
ರಾಜ್ಯ ಬಳಿಸಾರುತ್ತಿದೆ. ಮಾಡಿದ ಪಾಪಕ್ಕೆ ಪಶ್ಚಾತ್ತಾಪಪಡಿ
ಸುವಾರ್ತೆಯನ್ನು ನಂಬಿರಿ" ಎಂದು ಬೋಧಿಸತೊಡಗಿದನು.

ಗಲಿಲಾಯ ಸಮುದ್ರದ ಬಳಿ ತಿರುಗಾಡುತ್ತಿರುವಾಗ, ಯೇ
ಇಬ್ಬರು ಬೆಸ್ತರನ್ನು ಕಂಡನು. ಅವರು ಅಣ್ಣ ತಮ್ಮಂದಿರು. ತಮ್ಮ
ಹೆಸರು ಅಂದ್ರೆ. ಅಣ್ಣನ ಹೆಸರು ಸೀಮೋನ; ಇವನೆ ಮುಂದೆ ಪೇ
ನೆನ್ನಿಸಿಕೊಂಡವನು. ಯೇಸು ಅವರನ್ನು ಕುರಿತು "ನನ್ನ ಹಿಂದೆ ಬನ್ನಿ
ಮನುಷ್ಯರನ್ನು ಹಿಡಿಯುವ ಬೆಸ್ತರಾಗುವಿರಿ" ಎಂದನು. ಅವ
ಒಡನೆಯೇ ಬಲೆಗಳನ್ನು ಬಿಟ್ಟು ಅವನನ್ನು ಹಿಂಬಾಲಿಸಿದರು.

ಕೊಂಚ ಮುಂದೆ ಹೋದಾಗ, ಯೇಸು ಇನ್ನಿಬ್ಬರು ಅಣ್ಣ ತಮ್ಮ
ದಿರನ್ನು ಕಂಡನು. ಅವರು ಜೆಬೆದಾಯನೆಂಬವನ ಮಕ್ಕಳಾ
ಯಾಕೋಬ ಮತ್ತು ಯೋಹಾನ ಎಂಬವರು. ಅವರು ತಮ್ಮ ದೋ
ಯಲ್ಲಿ ಕುಳಿತು ಬಲೆ ಸರಿಮಾಡುತ್ತಿದ್ದರು. ಯೇಸು ಅವರನು

ಕರೆದನು. ಅವರು ಕೂಡ ತಂದೆಯನ್ನೂ ಕೂಲಿಯುವರನ್ನೂ ದೋಣಿಯಲ್ಲಿ ಬಿಟ್ಟು ಯೇಸುವಿನ ಹಿಂದೆ ಹೊರಟರು.

ಎಲ್ಲರೂ ಕಪೆರ್‌ನೌಮಿಗೆ ಬಂದರು. ಅಲ್ಲಿಯ ಸಭಾಮಂದಿರಗಳಲ್ಲಿ ಯೇಸು ಸಬ್ಬತ್ ದಿನಗಳಲ್ಲಿ ಬೋಧೆಮಾಡಿದನು. ಅವನ ಉಪದೇಶಕ್ಕೆ ಜನ ಬೆರಗಾದರು. ಅವನು ಪುಸ್ತಕ ಓದಿದ ಪಂಡಿತರಂತೆ ಬೋಧೆ ಮಾಡದೆ ಅಧಿಕಾರವಿರುವವನಂತೆ ಮಾತನಾಡುತ್ತಿದ್ದನು.

ಆ ಸಭಾಮಂದಿರದಲ್ಲಿ ದೆವ್ವ ಹಿಡಿದವನೊಬ್ಬನಿದ್ದನು. ಅವನು ಯೇಸುವನ್ನು ಕಂಡು, "ಓ ನಜರೇತಿನ ಯೇಸು, ನಿನ್ನ ಗೊಡವೆ ನಮಗೇಕೆ? ನಮ್ಮನ್ನು ನಾಶಗೊಳಿಸಲು ಬಂದೆಯಾ? ನೀನು ಆರೆಂಬುದು ನನಗೆ ಗೊತ್ತು. ನಿನ್ನನ್ನು ದೇವರು ಆರಿಸಿ ಕಳಿಸಿದನು" ಎಂದು ಕಿರಿಚಿಕೊಂಡನು. ಯೇಸು ಅವನನ್ನು ಗದರಿಸಿ, "ಬಾಯಿ ಮುಚ್ಚು. ಅವನನ್ನು ಬಿಟ್ಟು ಹೋಗು" ಎಂದನು. ಆ ದೆವ್ವ ಕೂಗಿಕೊಳ್ಳುತ್ತಾ ಅವನನ್ನು ಬಿಟ್ಟು ಹೋಯಿತು.

ಆಗ ಎಲ್ಲರೂ ಬೆರಗಾದರು, ಎಲ್ಲರೂ ಹೆದರಿದರು. "ಇದೇನಿದು? ಇದೇನು ಹೊಸ ತತ್ತ್ವ? ದೆವ್ವಗಳಿಗೆ ಕೂಡ ಹೇಗೆ ಆಜ್ಞೆಮಾಡುತ್ತಾನೆ! ಅವು ಕೂಡ ಇವನ ಮಾತನ್ನು ಹೇಗೆ ಕೇಳುತ್ತವೆ!" ಎಂದು ಮಾತನಾಡಿಕೊಂಡರು. ಕೂಡಲೇ ಯೇಸುವಿನ ಮಹಿಮೆ ಗಲಿಲಾಯಸೀಮೆಯಲ್ಲೆಲ್ಲಾ ಹಬ್ಬಿ ಹರಡಿತು.

ಯೇಸು ಸಭಾಮಂದಿರದಿಂದ ಹೊರಟು ನೇರಾಗಿ ಸೀಮೋನ ಆಂದ್ರೆಯರ ಮನೆಗೆ ಬಂದನು. ಯಾಕೋಬ ಯೋಹಾನರೂ ಬಂದರು. ಸೀಮೋನನ ಅತ್ತೆ ಜ್ವರ ಬಂದು ಮಲಗಿದ್ದಳು. ಅದು ಯೇಸುವಿಗೆ ತಿಳಿಯಿತು. ಅವನು ಅವಳ ಬಳಿ ಸಾರಿ, ಕೈ ಹಿಡಿದು ಮೇಲೆತ್ತಿದನು. ಜ್ವರ ಬಿಟ್ಟುಹೋಗಲೆಂದು ಆಜ್ಞೆಮಾಡಿದನು. ತತ್‌ಕ್ಷಣ ಜ್ವರ ಬಿಟ್ಟು ಹೋಯಿತು. ಆಕೆ ಎದ್ದು ಯೇಸುವಿಗೆ ಉಪಚಾರ ಮಾಡಿದಳು.

ಸೂರ್ಯ ಮುಳುಗಿ ಸಂಜೆಯಾಯಿತು. ರೋಗಿಗಳನ್ನೂ ದೆವ್ವ ಹಿಡಿದವರನ್ನೂ ಅವನ ಹತ್ತಿರ ಕರೆತಂದರು. ಊರಿಗೆ ಊರೇ ಮನೆ ಬಾಗಿಲಲ್ಲಿ ನೆರೆಯಿತು. ಅವನು ಅನೇಕ ರೋಗಿಗಳನ್ನು ಗುಣಪಡಿಸಿದನು,

ದೆವ್ವಗಳನ್ನು ಓಡಿಸಿದನು. "ನೀನೀಗ ದೇವರ ಮಗ" ಎಂದು ದೆವ್ವಗಳು ಕೂಗಿಕೊಂಡು ಓಡಿಹೋದವು. ಅವನು ಅವುಗಳನ್ನು ಮಾತನಾಡಗೊಡದೆ ಗದರಿಸಿಕೊಂಡನು.

ಬೆಳಗಿನ ಜಾವ ಅಷ್ಟುಹೊತ್ತಿಗೇ ಎದ್ದು, ಯೇಸು ನಿರ್ಜನವಾದ ಸ್ಥಳಕ್ಕೆ ಹೋಗಿ ದೇವರನ್ನು ಪ್ರಾರ್ಥಿಸಿದನು. ಸೀಮೋನನೂ ಅವನ ಸಂಗಡಿಗರೂ ಯೇಸುವನ್ನು ಹಿಂಬಾಲಿಸಿದರು. ಅವನನ್ನು ಕಂಡಾಗ "ನಿನ್ನನ್ನು ಎಲ್ಲರೂ ಹುಡುಕುತ್ತಾರೆ" ಎಂದರು. ಜನರು ಕೂಡ ಗುಂಪು ಗುಂಪಾಗಿ ಅವನನ್ನು ಹುಡುಕಿಕೊಂಡು ಬಂದು ಅಡ್ಡಗಟ್ಟಿ ನಿಲ್ಲಿಸಿದರು. ಅವನು ಅವರನ್ನು ಬಿಟ್ಟುಹೋಗಲು ಆಗಲಿಲ್ಲ. ಯೇಸು ಅವರನ್ನು ಕುರಿತು "ನಾವು ನೆರೆಹೊರೆಯ ನಗರಗಳಿಗೂ ಪಟ್ಟಣಗಳಿಗೂ ಹೋಗೋಣ. ದೇವರ ರಾಜ್ಯದ ಸುವಾರ್ತೆಯನ್ನು ನಾನು ಅಲ್ಲಿ ಬೋಧಿಸಬೇಕು. ನಾನು ಬಂದಿರುವುದು ಈ ಉದ್ದೇಶಕ್ಕಾಗಿಯೇ" ಎಂದನು.

ಯೇಸು ಗಲಿಲಾಯದ ಸುತ್ತಾ ಸಂಚರಿಸಿದನು. ಅವರ ಸಭಾ ಮಂದಿರಗಳಲ್ಲಿ ಬೋಧಿಸಿದನು. ದೇವರ ರಾಜ್ಯದ ಸುವಾರ್ತೆಯನ್ನು ಸಾರಿದನು. ಸಿರಿಯಾ ದೇಶದಲ್ಲೆಲ್ಲಾ ಅವನ ಹೆಸರು ಹಬ್ಬಿತು. ಅಸ್ವಸ್ಥರು, ವಿವಿಧ ರೋಗಿಗಳು, ದೆವ್ವ ಹಿಡಿದವರು, ಮೂರ್ಛೆ ಬೀಳುವವರು, ಹುಚ್ಚರು, ಪಾರ್ಶ್ವವಾಯು ಬಂದವರು ಎಲ್ಲರೂ ಅವನ ಬಳಿ ಬಂದರು. ಯೇಸು ಎಲ್ಲರನ್ನೂ ಗುಣಪಡಿಸಿದನು. ಗಲಿಲಾಯ, ದೆಕಪೊಲಿ, ಯೆರೂಸಲೇಮ್, ಯೂದಾಯ ಎಂಬ ಸ್ಥಳಗಳಿಂದಲೂ ಯೋರ್ದನ್ ನದಿಯ ಆಚೆಕಡೆಯಿಂದಲೂ ಜನ ಗುಂಪುಗುಂಪಾಗಿ ಅವನ ಹಿಂದೆ ಹೋದರು.

# ಬೆಟ್ಟದ ಮೇಲಿನ ಬೋಧೆ

ಜನರ ಗುಂಪನ್ನು ಕಂಡು, ಯೇಸು ಒಂದು ಬೆಟ್ಟದ ಮೇಲೆ ಹೋಗಿ ಕುಳಿತುಕೊಂಡನು. ಅವನ ಶಿಷ್ಯರೂ ಕುಳಿತುಕೊಂಡರು. ಆಗ ಯೇಸು ಅವರಿಗೆ ಬೋಧೆಮಾಡಿದನು :

"ಅಹಂಕಾರವಿಲ್ಲದವರು ಧನ್ಯರು; ಪರಲೋಕದ ರಾಜ್ಯ ಅವರದು. ವಿನಯವಂತರು ಧನ್ಯರು; ಅವರೇ ನೆಲದ ಒಡೆಯರಾಗುವರು. ದುಃಖ ಪಡುವವರು ಧನ್ಯರು, ಅವರನ್ನು ಸಂತೈಸಲಾಗುವುದು. ನ್ಯಾಯಕ್ಕಾಗಿ ಹಾರೈಸುವವರು ಧನ್ಯರು; ಅವರಿಗೆ ನ್ಯಾಯ ಪೂರ್ತಿಯಾಗಿ ದೊರಕು ವುದು. ದಯಾವಂತರು ಧನ್ಯರು; ಅವರಿಗೆ ದಯೆ ದೊರಕುವುದು. ಪರಿ ಶುದ್ಧ ಹೃದಯರು ಧನ್ಯರು; ಅವರು ದೇವರನ್ನು ಕಾಣುವರು ಶಾಂತಿ ಸ್ಥಾಪಕರು ಧನ್ಯರು, ಅವರನ್ನು ದೇವರ ಮಕ್ಕಳೆಂದು ಕರೆಯುವರು. ಬಂದ ಹಿಂಸೆಯನ್ನು ಧರ್ಮಕ್ಕಾಗಿ ತಾಳುವವರು ಧನ್ಯರು; ಪರಲೋಕದ ರಾಜ್ಯ ಅವರದು.

"ಜನರು ನನಗೋಸ್ಕರವಾಗಿ ನಿಮ್ಮನ್ನು ನಿಂದಿಸಿ, ಹಿಂಸಿಸಿ, ಅನ್ಯಾಯವಾಗಿ ಇಲ್ಲಸಲ್ಲದುದನ್ನು ನಿಮ್ಮ ಮೇಲೆ ಹೊರಿಸಿದಾಗ ನೀವು ಧನ್ಯರು. ಅದಕ್ಕಾಗಿ ಸಂತೋಷಪಡಿರಿ, ಉಲ್ಲಾಸಪಡಿರಿ. ಪರಲೋಕದಲ್ಲಿ ನೀವುಪಡೆಯುವ ಫಲ ಹಿರಿದು. ನಿಮಗಿಂತ ಮೊದಲು ಬಂದ ಪ್ರವಾದಿ ಗಳನ್ನೂ ಹೀಗೆಯೇ ಗೋಳುಗುಟ್ಟಿಕೊಂಡರು.

"ನೀವು ಭೂಮಿಗೆ ಉಪ್ಪಿನ ಹಾಗೆ ಇದ್ದೀರಿ. ಉಪ್ಪು ಸಪ್ಪೆಯಾದರೆ ಅದಕ್ಕೆ ರುಚಿ ಏತರಿಂದ ಬರಬೇಕು? ಉಪ್ಪಿನ ರುಚಿ ಇಲ್ಲದಿದ್ದರೆ ಅದು ಏನೂ ಕೆಲಸಕ್ಕೆ ಬಾರದುದು, ಆಚೆ ಎಸೆದು ಜನರ ಕಾಲುತುಳಿತಕ್ಕೆ ಸಿಕ್ಕಲು ಯೋಗ್ಯವಾದುದು.

"ನೀವು ಜಗತ್ತಿನ ಬೆಳಕು. ಬೆಟ್ಟದ ಮೇಲಿನ ಪಟ್ಟಣವನ್ನು ಮುಚ್ಚಿಡಲಾಗುವುದಿಲ್ಲ. ಹಣತೆಯನ್ನು ಹಚ್ಚಿ ಬಟ್ಟಲ ಕೆಳಗೆ ಮುಚ್ಚಿಡು ವುದಿಲ್ಲ; ಮನೆಯವರಿಗೆಲ್ಲಾ ಬೆಳಕಾಗಲೆಂದು ಕಂಬದ ಮೇಲೆ ಇರಿಸು ವರು. ಅದರಂತೆಯೇ ನಿಮ್ಮ ಬೆಳಕೂ ಜನರ ಎದುರಿಗೆ ಬೆಳಗಲಿ. ನಿಮ್ಮ

ಸತ್ಕಾರ್ಯಗಳನ್ನು ಅವರು ಕಾಣಲಿ, ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡಲಿ.

"ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ನಾಶಮಾಡಲು ನಾನು ಬಂದೆನೆಂದು ತಿಳಿಯಬೇಡಿರಿ. ನಾನು ನಾಶಮಾಡಲು ಬಂದಿಲ್ಲ, ನೆರವೇರಿಸಲು ಬಂದಿದ್ದೇನೆ. ನಾನು ನಿಮಗೆ ಸತ್ಯವಾಗಿ ಹೇಳುತ್ತೇನೆ: ಮೋಶೆಯ ಧರ್ಮಶಾಸ್ತ್ರವು ನೆರವೇರುವ ವರೆಗೆ, ಭೂಮಿ ಆಕಾಶಗಳು ನಾಶವಾಗುವ ವರೆಗೆ, ಅದರೊಳಗಿನ ಒಂದು ಸೊನ್ನೆಯಾಗಲಿ ಗುಡಿಸಾಗಲಿ ಅಳಿಯಲಾರದು. ಆ ಆಜ್ಞೆಗಳಲ್ಲಿ ಅತಿ ಸಣ್ಣದಾದುದೊಂದನ್ನು ಮುರಿದವನು, ಮುರಿಯುವಂತೆ ಬೋಧಿಸಿದವನು, ಪರಲೋಕದಲ್ಲಿ ಅತಿ ಹೀನನೆನ್ನಿಸಿಕೊಳ್ಳುವನು. ಆದರೆ ಅದನ್ನು ಪಾಲಿಸಿ, ಪಾಲಿಸಬೇಕೆಂದು ಬೋಧಿಸುವವನು, ಪರಲೋಕದಲ್ಲಿ ದೊಡ್ಡವನೆನ್ನಿಸಿಕೊಳ್ಳುವನು. ಯೆಹೂದ್ಯ ಶಾಸ್ತ್ರಿಗಳ ಮತ್ತು ಫರಿಸಾಯರ ಧರ್ಮಕ್ಕಿಂತ ನಿಮ್ಮ ಧರ್ಮ ಹೆಚ್ಚಿನದಾದ ಹೊರತು ನಿಮಗೆ ಪರಲೋಕ ಪ್ರಾಪ್ತಿಯಾಗಲಾರದು.

"ಕೊಲ್ಲಕೂಡದು, ಕೊಂದವನು ನ್ಯಾಯವಿಚಾರಣೆಗೆ ಗುರಿಯಾಗುವನು—ಎಂದು ಹಿಂದಿನವರಿಗೆ ಹೇಳಿದರೆಂದು ಕೇಳಿದ್ದೀರಿ. ಆದರೆ, ತನ್ನ ಸೋದರನ ಮೇಲೆ ಸಿಟ್ಟಾಗುವವನೂ ವಿಚಾರಣೆಗೆ ಗುರಿಯಾಗುವನೆಂದು ನಾನು ಹೇಳುತ್ತೇನೆ. ತನ್ನ ಸೋದರನನ್ನು ಛೀ ಎನ್ನುವವನು ವಿಚಾರಣೆಗೆ ಗುರಿಯಾಗುವನು. ತನ್ನ ಸೋದರನನ್ನು ಮೂರ್ಖನೆನ್ನುವವನು ನರಕದ ಬೆಂಕಿಗೆ ತುತ್ತಾಗುವನು. ಆದ್ದರಿಂದ, ದೇವರ ಬಲಿಪೀಠದ ಮುಂದೆ ಬಲಿಯನ್ನು ಕೊಡಲು ನಿಂತಾಗ, ನಿನ್ನ ಸೋದರನಿಗೂ ನಿನಗೂ ಇರುವ ಮನಸ್ತಾಪ ನೆನಪಾದರೆ, ಬಲಿಯನ್ನು ಬಲಿಪೀಠದ ಮೇಲೆ ಬಿಡು; ಮೊದಲು ಹೋಗಿ ನಿನ್ನ ಸೋದರನೊಡನೆ ಸಮಾಧಾನ ಮಾಡಿಕೊ. ಅನಂತರ ಬಂದು ನಿನ್ನ ಕಾಣಿಕೆಯನ್ನು ಒಪ್ಪಿಸು.

"ಇನ್ನೂ ಅವಕಾಶವಿರುವಾಗಲೇ ನಿನ್ನ ಎದುರಾಳಿಯೊಡನೆ ಒಪ್ಪಂದಮಾಡಿಕೊ. ಇಲ್ಲದಿದ್ದರೆ ಅವನು ನಿನ್ನನ್ನು ನ್ಯಾಯಾಧಿಪತಿಯ ಬಳಿಗೆ ಎಳೆದಾನು. ನ್ಯಾಯಾಧಿಪತಿ ನಿನ್ನನ್ನು ತಕ್ಕ ಅಧಿಕಾರಿಗೆ ಒಪ್ಪಿಸಿ

ಯಾನು. ಅವನು ನಿನ್ನನ್ನು ಸೆರೆ ಹಾಕಿಯಾನು. ಸಲ್ಲಿಸಬೇಕಾದುದನ್ನು ಕಡೆಕಾಸುಮುಟ್ಟ ಸಲ್ಲಿಸಿದ ಹೊರತು ನೀನು ಅಲ್ಲಿಂದ ಹೊರಗೆ ಬರಲಾರೆ.

"ವ್ಯಭಿಚಾರ ಮಾಡಕೂಡದೆಂದು ಹಿಂದಿನವರಿಗೆ ಹೇಳಿದುದನ್ನು ಕೇಳಿದ್ದೀರಿ. ಆದರೆ, ಹೆಣ್ಣನ್ನು ಮೋಹದಿಂದ ನೋಡಿದವನು ತನ್ನ ಮನಸ್ಸಿನಲ್ಲಿ ಆಗಲೇ ವ್ಯಭಿಚಾರಮಾಡಿರುವನೆಂದು ನಾನು ಹೇಳುತ್ತೇನೆ. ನಿನ್ನ ಬಲಗಣ್ಣಿನಿಂದ ಪಾಪವಾಗುವುದಾದರೆ ಅದನ್ನು ಕಿತ್ತುಬಿಸುಡು. ಇಡಿಯ ದೇಹ ನರಕಕ್ಕೆ ತುತ್ತಾಗುವುದಕ್ಕಿಂತ ಒಂದು ಅಂಗ ನಾಶವಾಗುವುದೇ ವಾಸಿ. ನಿನ್ನ ಬಲಗೈಯಿಂದ ಪಾಪವಾಗುವುದಾದರೆ, ಅದನ್ನು ಕತ್ತರಿಸಿ ದೂರ ಬಿಸಾಡು. ಇಡಿಯ ದೇಹ ನರಕಕ್ಕೆ ಈಡಾಗುವುದಕ್ಕಿಂತ ಒಂದು ಅಂಗ ನಾಶವಾಗುವುದೇ ಮೇಲು.

"ಮದುವೆಯಾದ ಹೆಂಡತಿಯನ್ನು ಬಿಟ್ಟುಬಿಡುವವನು ಆಕೆಗೆ ಬಿಡುಗಡೆಯ ಪತ್ರವನ್ನು ಕೊಡಬೇಕೆಂದು ಕೇಳಿದ್ದೀರಿ. ಆದರೆ ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಡುವವನು ಅವಳು ವ್ಯಭಿಚಾರಿಣಿಯಾಗುವುದಕ್ಕೆ ಕಾರಣನಾಗುವನೆಂದು ನಾನು ಹೇಳುತ್ತೇನೆ. ಅಲ್ಲದೆ, ಗಂಡನು ಬಿಟ್ಟವಳನ್ನು ಮದುವೆಯಾಗುವವನು ಕೂಡ ವ್ಯಭಿಚಾರಿಯಾಗುತ್ತಾನೆ.

"ಸುಳ್ಳು ಆಣೆ ಇಡಬಾರದು, ದೇವರ ಎದುರಿಗೆ ಇಟ್ಟ ಆಣೆಯನ್ನು ನಡಸಬೇಕು—ಎಂದೂ ನೀವು ಕೇಳಿದ್ದೀರಿ. ಆದರೆ ಆಣೆಯನ್ನೇ ಇಡಬೇಡಿರೆಂದು ನಾನು ಹೇಳುತ್ತೇನೆ. ಆಕಾಶದ ಮೇಲೆ ಆಣೆಯಿಡಬೇಡಿ; ಅದು ದೇವರ ಸಿಂಹಾಸನ. ಭೂಮಿಯ ಮೇಲೆ ಆಣೆಯಿಡಬೇಡಿ; ಅದು ದೇವರ ಪಾದಪೀಠ. ಯೆರೂಸಲೇಮಿನ ಮೇಲೆ ಆಣೆಯಿಡಬೇಡಿ; ಅದು ಹಿರಿಯರಸನ ಪಟ್ಟಣ. ನಿಮ್ಮ ತಲೆಯ ಮೇಲೆಯೂ ಆಣೆಯಿಡಬೇಡಿ; ಒಂದು ಬಿಳಿಯ ಕೂದಲನ್ನಾಗಲಿ ಕರಿಯ ಕೂದಲನ್ನಾಗಲಿ ನೀವು ಸೃಷ್ಟಿಮಾಡಲಾರಿರಿ. ಹೌದಾದರೆ ಹೌದೆನ್ನಿರಿ, ಇಲ್ಲವಾದರೆ ಇಲ್ಲವೆನ್ನಿರಿ; ಅಷ್ಟೆ. ಇದಕ್ಕೆ ಮೀರಿದುದು ಪಾಪವಾಗುವುದು.

"ಕಣ್ಣಿಗೆ ಪ್ರತಿಯಾಗಿ ಕಣ್ಣು ತೆಗೆ, ಹಲ್ಲಿಗೆ ಬದಲಾಗಿ ಹಲ್ಲು ತೆಗೆ ಎಂದೂ ಕೇಳಿದ್ದೀರಿ. ಆದರೆ ಪಾಪವನ್ನು ಪ್ರತಿಭಟಿಸಬೇಡಿರೆಂದು ನಾನು ಹೇಳುತ್ತೇನೆ. ನಿಮ್ಮ ಬಲಕೆನ್ನೆಗೆ ಒಬ್ಬನು ಹೊಡೆದರೆ, ಇನ್ನೊಂದು ಕೆನ್ನೆಯನ್ನೂ ತಿರುಗಿಸಿ ತೋರಿಸಿರಿ. ಒಬ್ಬನು ನಿಮ್ಮೊಡನೆ ವ್ಯಾಜ್ಯವಾಡಿ ಒಳಅಂಗಿಯನ್ನು ಕಿತ್ತುಕೊಂಡರೆ, ಹೊರಅಂಗಿಯನ್ನೂ ಅವನಿಗೆ ಕೊಡಿರಿ. ಬಲವಂತದಿಂದ ಒಂದು ಮೈಲಿ ನಡಸಿದರೆ, ಅವನೊಡನೆ ಎರಡು ಮೈಲಿ ನಡೆಯಿರಿ. ಬೇಡುವವನಿಗೆ ನೀಡು. ಕಡ ಕೇಳಲು ಬಂದವನಿಂದ ಮುಖ ತಿರುವಿಕೊಳ್ಳಬೇಡ.

"ನೆರೆಯವನನ್ನು ಪ್ರೀತಿಸಬೇಕು, ಶತ್ರುವನ್ನು ದ್ವೇಷಿಸಬೇಕು— ಎಂದು ಹೇಳಿರುವುದನ್ನೂ ಕೇಳಿದ್ದೀರಿ. ಆದರೆ 'ಶತ್ರುಗಳನ್ನು ಪ್ರೀತಿಸಿರಿ, ದ್ವೇಷಿಸಿದವರಿಗೆ ದಯೆ ತೋರಿರಿ, ಗೋಳುಹುಯ್ದು ನಿಂದಿಸುವವರಿಗಾಗಿ ಪ್ರಾರ್ಥನೆ ಮಾಡಿರಿ, ಇದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಗೆ ನೀವು ತಕ್ಕ ಮಕ್ಕಳಾಗುವಿರಿ. ಆತನು ಒಳ್ಳೆಯವರು ಕೆಟ್ಟವರು ಇಬ್ಬರಿಗೂ ಸೂರ್ಯನ ಬೆಳಕನ್ನು ಕೊಟ್ಟು ಮಳೆ ಸುರಿಸುವುದಿಲ್ಲವೆ?' ಎಂದು ನಾನು ಹೇಳುತ್ತೇನೆ. ಪ್ರೀತಿಸಿದವರನ್ನು ಮಾತ್ರ ನೀವು ಪ್ರೀತಿಸಿದರೆ ಏನು ಫಲ ಬಂದಿತು? ಪತಿತರು ಕೂಡ ಹಾಗೆ ಮಾಡುವುದಿಲ್ಲವೇ! ನಿಮ್ಮ ಸೋದರರನ್ನು ಮಾತ್ರ ನೀವು ಮರ್ಯಾದಿಸಿದರೆ, ನೀವೇನು ಹೆಚ್ಚು ಮಾಡಿದಂತಾಯಿತು? ಇತರ ಸಾಮಾನ್ಯರೂ ಹೀಗೆ ಮಾಡುವುದಿಲ್ಲವೆ? ಆದುದರಿಂದ, ಪರಲೋಕದಲ್ಲಿರುವ ನಿಮ್ಮ ತಂದೆಯು ಪರಿಪೂರ್ಣಗುಣವುಳ್ಳವನಾಗಿರುವಂತೆ ನೀವೂ ಆಗಿರಿ.

"ನಿಮ್ಮ ಧರ್ಮಕಾರ್ಯಗಳನ್ನು ಜನರೆದುರಿಗೆ, ಅವರು ಕಾಣುವುದಕ್ಕಾಗಿ, ಮಾಡದಂತೆ ಎಚ್ಚರದಿಂದಿರಿ. ಇಲ್ಲದಿದ್ದರೆ ಪರಲೋಕದಿಂದ ನಿಮಗೆ ಪ್ರತಿಫಲ ದೊರಕದೆ ಹೋಗುವುದು. ಆದ್ದರಿಂದ, ದಾನಕೊಡುವಾಗ ತುತ್ತೂರಿಯೂದುತ್ತಾ ಬರಬೇಡಿ. ಜನರ ಹೊಗಳಿಕೆಗಾಗಿ ಕಪಟಿಗಳು ಸಭಾಮಂದಿರಗಳಲ್ಲೂ ಬೀದಿಗಳಲ್ಲೂ ಹೀಗೆ ಮಾಡುವರು. ಅವರಿಗೆ ಬರಬೇಕಾದ ಫಲವನ್ನು ಅವರು ಪಡೆದಿದ್ದಾರೆ, ನಿಜ. ಆದರೆ ನೀವು ದಾನ ಕೊಡುವಾಗ, ಬಲಗೈ ಕೊಡುವುದು ಎಡಗೈಗೆ ತಿಳಿಯದಿರಲಿ.

ದಾನ ರಹಸ್ಯವಾಗಿರಲಿ ರಹಸ್ಯಗಳನ್ನು ಕಾಣುವ ನಿಮ್ಮ ತಂದೆ ನಿಮಗೆ ಫಲ ಕೊಡುವನು.

"ಪ್ರಾರ್ಥನೆ ಮಾಡುವಾಗ ಕಪಟಿಗಳಂತೆ ಮಾಡಬೇಡಿರಿ. ಜನಗಳು ತಮ್ಮನ್ನು ನೋಡಲೆಂದು ಸಭಾಮಂದಿರಗಳಲ್ಲೂ ಬೀದಿಯ ಮೂಲೆಗಳಲ್ಲೂ ನಿಂತು ಪ್ರಾರ್ಥನೆಮಾಡುವುದರಲ್ಲಿ ಅವರಿಗೆ ಪ್ರೀತಿ. ಅವರ ಫಲ ಅವರಿಗೆ ಬಂದಿದೆ, ನಿಜ ಆದರೆ, ನೀವು ಪ್ರಾರ್ಥನೆ ಮಾಡುವಾಗ ಕೋಣೆಯೊಳಗೆ ಹೋಗಿರಿ, ಬಾಗಿಲನ್ನು ಮುಚ್ಚಿರಿ, ರಹಸ್ಯವಾಗಿ ತಂದೆಗೆ ಪ್ರಾರ್ಥನೆ ಮಾಡಿರಿ. ರಹಸ್ಯವನ್ನು ಕಾಣುವ ತಂದೆ ಅದಕ್ಕೆ ಫಲ ಕೊಡುವನು. ಅಲ್ಲದೆ, ಪ್ರಾರ್ಥನೆ ಮಾಡುವಾಗ ಅಜ್ಞಾನಿಗಳಂತೆ ಅತಿಯಾಗಿ ಮಾತನಾಡಬೇಡಿ ಅತಿಯಾಗಿ ಮಾತನಾಡಿದರೆ ಕೇಳಿಸುವುದೆಂದು ಅವರು ಎಂದುಕೊಂಡಿದ್ದಾರೆ. ನೀವೂ ಅವರಂತೆ ಆಗಬೇಡಿ. ನಿಮಗೇನು ಅವಶ್ಯವೆಂಬುದು ನೀವು ಕೇಳುವುದಕ್ಕಿಂತ ಮೊದಲೇ ನಿಮ್ಮ ತಂದೆಗೆ ಗೊತ್ತು. ಆದುದರಿಂದ, 'ಪರಲೋಕದಲ್ಲಿರುವ ಓ ನಮ್ಮ ತಂದೆ, ನಿನ್ನ ಹೆಸರು ಪವಿತ್ರವಾದುದಾಗಲಿ. ನಿನ್ನ ರಾಜ್ಯ ಬರಲಿ. ನಿನ್ನ ಸಂಕಲ್ಪವು ಪರಲೋಕದಲ್ಲಿ ನಡೆಯುವಂತೆ ಭೂಮಿಯಲ್ಲಿಯೂ ನಡೆಯಲಿ. ನಮ್ಮ ಅನುದಿನದ ಅನ್ನವನ್ನು ಈ ದಿನವೂ ದಯೆಪಾಲಿಸು. ತಪ್ಪು ಮಾಡಿದವರನ್ನು ನಾವು ಮನ್ನಿಸುತ್ತೇವೆ, ನಮ್ಮ ತಪ್ಪುಗಳನ್ನು ನೀನೂ ಮನ್ನಿಸು. ದುರಾಸೆಗೆ ನಮ್ಮನ್ನು ದೂಡಬೇಡ ಪಾಪದಿಂದ ನಮ್ಮನ್ನು ದೂರಮಾಡು' ಎಂದು ಪ್ರಾರ್ಥಿಸಿರಿ. ಜನರ ತಪ್ಪುಗಳನ್ನು ನೀವು ಕ್ಷಮಿಸಿದರೆ ನಿಮ್ಮ ತಪ್ಪುಗಳನ್ನು ನಿಮ್ಮ ತಂದೆ ಕ್ಷಮಿಸುವನು. ಜನರ ತಪ್ಪುಗಳನ್ನು ನೀವು ಕ್ಷಮಿಸದಿದ್ದರೆ ನಿಮ್ಮ ತಪ್ಪುಗಳನ್ನು ನಿಮ್ಮ ತಂದೆಯೂ ಕ್ಷಮಿಸುವುದಿಲ್ಲ.

"ಉಪವಾಸ ಮಾಡಿದರೆ, ಕಪಟಿಗಳಂತೆ ಮುಖ ಸಪ್ಪಗೆ ಮಾಡಬೇಡಿ. ಜನರ ಕಣ್ಣಿಗೆ ಉಪವಾಸಮಾಡಿದವರಂತೆ ಕಾಣುವುದಕ್ಕಾಗಿ ಅವರಂತೂ ಮುಖಗಳನ್ನು ವಿರೂಪಮಾಡಿಕೊಳ್ಳುವರು. ಅವರ ಫಲ ಅವರಿಗೆ ಬಂದಿದೆ, ನಿಜ. ಆದರೆ ನೀವು ಉಪವಾಸ ಮಾಡಿದಾಗ ತಲೆಗೆ ಎಣ್ಣೆ ಹಚ್ಚಿಕೊಳ್ಳಿ, ಮುಖ ತೊಳೆದುಕೊಳ್ಳಿ. ಉಪವಾಸ ಮಾಡು

ವವರಂತೆ ಜನರಿಗೆ ಕಾಣಿಸಿಕೊಳ್ಳಬೇಡಿ. ರಹಸ್ಯವಾಗಿ ನಡೆದುದು ತಂದೆಗೆ ತಿಳಿಯುವುದು. ಆತನು ಅದಕ್ಕೆ ಪ್ರತಿಫಲ ಕೊಡುವನು.

"ಭೂಮಿಯಲ್ಲಿ ಗಂಟುಮಾಡಿ ಮಡಗಬೇಡಿರಿ. ತುಕ್ಕುಹಿಡಿದೀತು, ನುಸಿ ಹೊಡೆದೀತು, ಕಳ್ಳರು ಕನ್ನ ಕೊರೆದು ಕದ್ದಾರು. ಅದಕ್ಕೆ ಬದಲು ಪರಲೋಕದಲ್ಲಿ ಗಂಟುಮಾಡಿ ಮಡಗಿರಿ. ಅಲ್ಲಿ ತುಕ್ಕು ಹಿಡಿಯದು, ನುಸಿ ಹೊಡೆಯದು, ಕಳ್ಳರು ಕನ್ನ ಕೊರೆದು ಕದಿಯರು. ಗಂಟುಮಾಡಿ ಮಡಗಿದ ಕಡೆಯೇ ಮನಸ್ಸು ಇರುವುದು.

"ದೇಹಕ್ಕೆ ಕಣ್ಣು ದೀಪ. ಕಣ್ಣು ನೆಟ್ಟಗಿದ್ದರೆ ದೇಹದ ತುಂಬಾ ಬೆಳಕು. ಕಣ್ಣು ಕೆಟ್ಟುದಾದರೆ ದೇಹದ ತುಂಬಾ ಕತ್ತಲೆ. ಹೀಗೆ ಕತ್ತಲೆಯೇ ನಿಮ್ಮ ಒಳಗಿರುವ ಬೆಳಕಾದರೆ, ಅಲ್ಲಿರುವ ಕತ್ತಲೆ ಇನ್ನು ಎಂಥದಿರಬಹುದು!

"ಇಬ್ಬರು ಯಜಮಾನರ ಸೇವೆಮಾಡುವುದು ಆರಿಂದಲೂ ಆಗದು. ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು, ಅಥವಾ ಒಬ್ಬನಿಗೆ ಹೊಂದಿಕೊಂಡು ಇನ್ನೊಬ್ಬನನ್ನು ತಿರಸ್ಕರಿಸುವನು. ದೇವರನ್ನೂ ಧನವನ್ನೂ ಒಟ್ಟಿಗೇ ಸೇವಿಸುವುದಾಗದು ಆದುದರಿಂದ 'ಬದುಕಬೇಕು; ಏನು ತಿನ್ನಲಿ? ಬೆಚ್ಚಗಿರಬೇಕು, ಏನು ಹೊದೆಯಲಿ?' ಎಂಬ ಚಿಂತೆ ಬೇಡವೆಂದು ನಾನು ಹೇಳುತ್ತೇನೆ ಅನ್ನಕ್ಕಿಂತಲೂ ಪ್ರಾಣ ದೊಡ್ಡದಲ್ಲವೆ? ಬಟ್ಟೆಗಿಂತ ದೇಹ ಮೇಲಲ್ಲವೆ? ಹಾರುವ ಹಕ್ಕಿಗಳನ್ನು ನೋಡಿರಿ; ಅವು ಬಿತ್ತುವುದಿಲ್ಲ, ಕುಯ್ಯುವುದಿಲ್ಲ, ಕಣಜಕ್ಕೆ ಕಾಳು ಕೂಡಿಸುವುದಿಲ್ಲ; ಪರಲೋಕದಲ್ಲಿರುವ ನಿಮ್ಮ ತಂದೆಯು ಅವುಗಳ ಹೊಟ್ಟೆ ತುಂಬುತ್ತಾನೆ. ಅವುಗಳಿಗಿಂತ ನೀವು ಹೆಚ್ಚಿನವರಲ್ಲವೆ? ಚಿಂತೆಮಾಡುವುದರಿಂದ ಯಾರ ಎತ್ತರವಾದರೂ ಒಂದು ಮೊಳ ಬೆಳೆದೀತೆ? ಬಟ್ಟೆಬರೆಯ ಚಿಂತೆ ನಿಮಗೇಕೆ? ಕಾಡಿನ ಹೂಗಳು, ನೋಡಿ, ಹೇಗೆ ಬೆಳೆಯುತ್ತವೆ! ಅವು ದುಡಿಯುವುದಿಲ್ಲ, ನೂಲುವುದಿಲ್ಲ. ಆದರೂ ಅವುಗಳಂತೆ ಉಡುಪು ಪಡೆದವರು ಇಲ್ಲ. ಅಡವಿಯ ಹುಲ್ಲು ಈದಿನ ಇರುತ್ತದೆ, ನಾಳೆ ಒಲೆಗೆ ಹೋಗುತ್ತದೆ. ಅಂಥದಕ್ಕೇ ದೇವರು ಹೀಗೆ ಉಡಿಸಿದರೆ, ನಿಮಗೆ ಇನ್ನೂ ಹೆಚ್ಚು ಉಡಿಸುವನಲ್ಲವೆ? ನಿಮಗೆ ನಂಬಿಕೆ ಎಷ್ಟು ಕಡಮೆ! ತಿನ್ನಲು ಏನು? ಕುಡಿ

ಯಲು ಏನು? ಉಡಲು ಏನು? ಎಂದು ಚಿಂತೆಮಾಡಬೇಡಿರಿ. ಅಜ್ಞಾನಿಗಳು ಕೂಡ ಇದನ್ನೇ ಹುಡುಕುವರು. ಇದು ಎಲ್ಲಾ ನಿಮಗೆ ಅವಶ್ಯವೆಂಬುದು ನಿಮ್ಮ ತಂದೆಗೆ ಗೊತ್ತು. ಆದುದರಿಂದ ಮೊದಲು ಪರಲೋಕದ ರಾಜ್ಯವನ್ನೂ ಆತನ ಧರ್ಮವನ್ನೂ ಹುಡುಕಿರಿ; ಅನಂತರ ಇವೆಲ್ಲಾ ತಾವಾಗಿಯೇ ಬಂದು ಸೇರುವುವು. ಆದುದರಿಂದ ನಾಳೆಯ ಚಿಂತೆ ನಿಮಗೆ ಬೇಡ. ನಾಳೆಯ ಚಿಂತೆ ನಾಳೆಗೇ ಇರಲಿ ಈ ಹೊತ್ತಿನ ಪಾಡು ಈ ಹೊತ್ತಿಗೆ ಸಾಕು

"ಇತರರ ದೋಷಗಳನ್ನು ತೂಗಿ ತೀರ್ಪು ಕೊಡಬೇಡಿರಿ; ಇತರರೂ ನಿಮ್ಮನ್ನು ತೂಗಿ ತೀರ್ಪು ಕೊಡುವುದಿಲ್ಲ. ಏಕೆಂದರೆ ನಿಮ್ಮ ತೀರ್ಮಾನಕ್ಕೆ ಅನುಗುಣವಾಗಿ ನಿಮಗೂ ತೀರ್ಪುಕೊಡುವರು ನೀವು ಅಳೆದ ಅಳತೆಯಲ್ಲಿಯೇ ನಿಮಗೂ ಅಳೆದುಕೊಡುವರು ನಿಮ್ಮ ಕಣ್ಣಿನಲ್ಲಿರುವ ತೊಲೆಯನ್ನು ಕಾಣದೆ ನಿಮ್ಮ ಸೋದರನ ಕಣ್ಣಿನಲ್ಲಿರುವ ರವೆಯನ್ನು ಗಮನಿಸುವುದೇಕೆ? ತನ್ನ ಕಣ್ಣಿನಲ್ಲಿ ತೊಲೆಯಿಟ್ಟುಕೊಂಡು, 'ನಿನ್ನ ಕಣ್ಣಿನಲ್ಲಿರುವ ರವೆಯನ್ನು ತೆಗೆಯುತ್ತೇನೆ' ಎಂದು ತನ್ನ ಸೋದರನಿಗೆ ಹೇಳುವುದಾದರೂ ಹೇಗೆ? ಓ ಕಪಟಿ, ನಿನ್ನ ಕಣ್ಣಿನ ತೊಲೆಯನ್ನು ಮೊದಲು ಕಳೆದುಕೊ; ಅನಂತರ ನಿನ್ನ ಸೋದರನ ಕಣ್ಣಿನ ರವೆಯನ್ನು ಕಳೆಯಲು ನಿನಗೆ ಕಣ್ಣು ಕಾಣಿಸುವುದು.

"ಪವಿತ್ರವಾದುದನ್ನು ನಾಯಿಗಳಿಗೆ ಹಾಕಬೇಡಿ, ಮುತ್ತುಗಳನ್ನು ಹಂದಿಗಳ ಎದುರು ಎಸೆಯಬೇಡಿ; ಅವು ಅವುಗಳನ್ನು ಕಾಲಲ್ಲಿ ತುಳಿದು, ತಿರುಗಿಕೊಂಡು ನಿಮ್ಮನ್ನು ಸೀಳಿಯಾವು.

"ಕೇಳಿರಿ, ಕೊಡುವರು ಹುಡುಕಿರಿ, ದೊರಕುವುದು. ಬಾಗಿಲು ತಟ್ಟಿರಿ, ತೆರೆಯುವರು. ಕೇಳಿದ ಪ್ರತಿಯೊಬ್ಬನೂ ಪಡೆಯುವನು, ಹುಡುಕಿದವನಿಗೆ ಸಿಕ್ಕುವುದು, ಬಾಗಿಲು ತಟ್ಟಿದವನಿಗೆ ಬಾಗಿಲು ತೆರೆಯುವುದು. ತನ್ನ ಮಗನು ರೊಟ್ಟಿ ಕೇಳಿದರೆ ಕಲ್ಲು ಕೊಡುವವನು ಯಾವನು ಇಲ್ಲಿ ಉಂಟು? ಅಥವಾ ಮೀನು ಕೇಳಿದರೆ ಹಾವು ಕೊಡುವವನು ಯಾವನುಂಟು? ನಿಮ್ಮ ಮಕ್ಕಳಿಗೆ ಒಳ್ಳೆಯ ವಸ್ತುಗಳನ್ನು ಕೊಡುವಂಥ ಬುದ್ಧಿಯು ಕೆಟ್ಟವರಾದ ನಿಮಗೇ ಇರುವಾಗ, ಪರಲೋಕದಲ್ಲಿರುವ

ನಿಮ್ಮ ತಂದೆಯು ಕೇಳಿದವರಿಗೆ ಇನ್ನೂ ಏನೇನು ಒಳ್ಳೆಯದು ಕೊಟ್ಟಾನು! ಆದುದರಿಂದ ಜನರು ನಿಮ್ಮಲ್ಲಿ ಹೇಗೆ ನಡೆದುಕೊಳ್ಳಬೇಕೆನ್ನುವಿರೋ ಹಾಗೆ ನೀವೂ ಅವರಲ್ಲಿ ನಡೆದುಕೊಳ್ಳಿರಿ. ಮೋಶೆಯ ಧರ್ಮಶಾಸ್ತ್ರವೂ ಇದೇ, ಪ್ರವಾದಿಗಳ ಮಾತೂ ಇದೇ.

"ಅಗಲ ಕಿರಿದಾದ ಬಾಗಿಲಿನಿಂದ ಒಳಕ್ಕೆ ಹೋಗಿರಿ. ಏಕೆಂದರೆ, ನಾಶಕ್ಕೆ ಒಯ್ಯುವ ಹಾದಿ ವಿಶಾಲವಾದುದು, ಅದರ ಬಾಗಿಲ ಅಗಲ ಹಿರಿದು. ಅಲ್ಲಿ ಅನೇಕರು ಹೋಗುವರು. ಬದುಕಿಗೆ ಹೋಗುವ ದಾರಿ ಇಕ್ಕಟ್ಟು, ಅದರ ಬಾಗಿಲ ಅಗಲ ಕಿರಿದು. ಅದನ್ನು ಕಾಣುವವರು ಕೆಲವು ಜನ ಮಾತ್ರ.

"ಸುಳ್ಳುಗುರುಗಳನ್ನು ನಂಬಿರಿ, ಎಚ್ಚರ. ಹೊರಗೆ ಕುರಿಯ ವೇಷದಲ್ಲಿ ಬಂದರೂ ಒಳಗೆ ಅವರು ಕಿತ್ತುತಿನ್ನುವ ತೋಳಗಳು. ಅವರ ಫಲಗಳಿಂದ ಅವರನ್ನು ತಿಳಿಯಬಹುದು. ಮುಳ್ಳುಗಿಡದಲ್ಲಿ ದ್ರಾಕ್ಷಿ ದೊರಕೀತೆ? ಮದ್ದುಗುಣಿಕೆಯಲ್ಲಿ ಅಂಜೂರ ಆದೀತೆ? ಅದರಂತೆಯೇ ಒಳ್ಳೆಯ ಗಿಡದಲ್ಲಿ ಒಳ್ಳೆಯ ಹಣ್ಣು, ಕೆಟ್ಟ ಗಿಡದಲ್ಲಿ ಕೆಟ್ಟ ಹಣ್ಣು. ಒಳ್ಳೆಯ ಗಿಡ ಕೆಟ್ಟ ಹಣ್ಣು ಕೊಡಲಾರದು, ಹಾಗೆಯೇ ಕೆಟ್ಟ ಗಿಡ ಒಳ್ಳೆಯ ಹಣ್ಣು ಕೊಡಲಾರದು ಒಳ್ಳೆಯ ಹಣ್ಣು ಕೊಡದ ಪ್ರತಿ ಗಿಡವನ್ನೂ ಕಡಿಯಲಾಗುವುದು, ಬೆಂಕಿಯಲ್ಲಿ ಉರಿಸಲಾಗುವುದು ಆದ್ದರಿಂದ, ಅವರ ಫಲಗಳಿಂದ ಅವರನ್ನು ನೀವು ತಿಳಿಯುವಿರಿ.

"ನನ್ನನ್ನು 'ಸ್ವಾಮಿ! ಸ್ವಾಮಿ!' ಎಂದು ಸಂಬೋಧಿಸಿದವರೆಲ್ಲಾ ಪರಲೋಕದ ರಾಜ್ಯವನ್ನು ಪ್ರವೇಶಿಸುವಂತಿಲ್ಲ. ಆದರೆ, ಪರಲೋಕದಲ್ಲಿರುವ ನನ್ನ ತಂದೆಯ ಇಷ್ಟದಂತೆ ನಡೆಯುವವನು ಪರಲೋಕದ ರಾಜ್ಯವನ್ನು ಪ್ರವೇಶಿಸುವನು.

"ಪರಲೋಕದ ರಾಜ್ಯಕ್ಕೆ ಪ್ರವೇಶವಾಗುವ ಆ ದಿನ ಅನೇಕರು 'ಸ್ವಾಮಿ! ಸ್ವಾಮಿ! ನಿನ್ನ ಹೆಸರು ಹೇಳಿ ನಾವು ಬೋಧೆಮಾಡಲಿಲ್ಲವೇ? ನಿನ್ನ ಹೆಸರು ಹೇಳಿ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರು ಹೇಳಿ ಅದ್ಭುತಕಾರ್ಯಗಳನ್ನು ಮಾಡಲಿಲ್ಲವೇ?" ಎನ್ನುವರು. ಆಗ ನಾನು ಅವರನ್ನು ಕುರಿತು 'ನಾನು ನಿಮ್ಮ ಗುರುತು ಕಾಣೆ. ಧರ್ಮವನ್ನು ಮೀರಿ

ನಡೆದವರು ನೀವು. ಇಲ್ಲಿಂದ ತೊಲಗಿ' ಎಂದು ಎಲ್ಲರೆದುರಿಗೂ ಹೇಳಿ ಬಿಡುವೆನು

"ಆದುದರಿಂದ, ಈ ನನ್ನ ಮಾತುಗಳನ್ನು ಕೇಳಿ ಇದರಂತೆ ನಡೆಯುವ ಪ್ರತಿಯೊಬ್ಬನೂ ಬಂಡೆಯ ಮೇಲೆ ಮನೆಕಟ್ಟಿದ ಬುದ್ಧಿವಂತನನ್ನು ಹೋಲುವನು. ಮಳೆ ಬಿತ್ತು, ನೆರೆ ಬಂತು, ಗಾಳಿ ಬೀಸಿ ಮನೆಗೆ ಅಪ್ಪಳಿಸಿತು ; ಆದರೂ ಬಂಡೆಯ ಮೇಲೆ ಕಟ್ಟಿದ್ದರಿಂದ ಅದು ಕದಲಲಿಲ್ಲ. ಈ ನನ್ನ ಮಾತುಗಳನ್ನು ಕೇಳಿ ಇದರಂತೆ ನಡೆಯದ ಪ್ರತಿಯೊಬ್ಬನೂ ಮರಳಿನ ಮೇಲೆ ಮನೆ ಕಟ್ಟಿದ ಬುದ್ಧಿಹೀನನನ್ನು ಹೋಲುವನು. ಮಳೆ ಬಿತ್ತು, ನೆರೆ ಬಂತು, ಗಾಳಿ ಬೀಸಿ ಮನೆಗೆ ಅಪ್ಪಳಿಸಿತು ; ಮರಳಿನಮೇಲೆ ಕಟ್ಟಿದುದರಿಂದ ಅದು ಮುರಿದು ಬಿತ್ತು "

ಹೀಗೆ ಯೇಸು ಮಾತನಾಡಿ ಮುಗಿಸಲು ಜನರೆಲ್ಲಾ ಅವನ ಬೋಧೆಗೆ ಮೆಚ್ಚಿಕೊಂಡರು. ಏಕೆಂದರೆ ಅವನು ಯೆಹೂದ್ಯ ಶಾಸ್ತ್ರಿಗಳಂತೆ ಬೋಧಿಸದೆ ಅಧಿಕಾರವಿದ್ದವನಂತೆ ಬೋಧಿಸುತ್ತಿದ್ದನು. ಅವನು ಬೆಟ್ಟದಿಂದ ಇಳಿದು ಬರುವಾಗ ಜನ ಗುಂಪುಗುಂಪಾಗಿ ಅವನ ಹಿಂದೆ ಹೋದರು.

# ಕ್ರಿಸ್ತನ ಕಾರ್ಯಕಲಾಪ

## ಇತರ ಅದ್ಭುತ ಕಾರ್ಯಗಳು

ದೇವರ ವಾಣಿಯನ್ನು ಕೇಳುವುದಕ್ಕೆ ಬಂದ ಜನಸಂದಣಿ ಹೆಚ್ಚಾಯಿತು. ಆಗ ಯೇಸು ಗೆನೇಜರೆತ್‌ಕೊಳದ ಅಂಚಿನಲ್ಲಿದ್ದನು. ಕೊಳದಲ್ಲಿ ಎರಡು ದೋಣಿಯಿತ್ತು. ಅದರಲ್ಲಿ ಒಂದು ಸೀಮೋನನದು. ಯೇಸು ಅದರಲ್ಲಿ ಕುಳಿತು, ಕೆರೆಯಂಚಿನಿಂದ ಕೊಂಚ ದೂರ ಒಳಕ್ಕೆ ಹೋಗಿ ಅಲ್ಲಿಂದಲೇ ಜನಕ್ಕೆ ಬೋಧೆಮಾಡಿದನು. ಅದು ಮುಗಿದ ಮೇಲೆ, ಆಳವಾದ ಸ್ಥಳಕ್ಕೆ ಹೋಗಿ ಮೀನಿಗಾಗಿ ಬಲೆಬೀಸಬೇಕೆಂದು ಸೀಮೋನನಿಗೆ ಹೇಳಿದನು ರಾತ್ರಿಯೆಲ್ಲಾ ದುಡಿದರೂ ಒಂದು ಮೀನೂ ಸಿಕ್ಕದೆ ಸೀಮೋನನಿಗೆ ಬೇಸರಾಗಿತ್ತು. ಆದರೂ ಯೇಸುವಿನ ಮಾತಿನಂತೆ ಅವನು ಬಲೆ ಬೀಸಿದನು. ಆಗ ಸಿಕ್ಕಿಬಿದ್ದ ಮೀನುಗಳ ಭಾರಕ್ಕೆ ಬಲೆ ಕಿತ್ತುಹೋಯಿತು. ಸೀಮೋನನು ಇತರ ಬೆಸ್ತರನ್ನೂ ಸಹಾಯಕ್ಕೆ ಕರೆದನು. ದೋಣಿ ಮುಳುಗುವಷ್ಟು ಮೀನನ್ನು ಅವರು ತುಂಬಿಕೊಂಡರು. ಆಗ ಸೀಮೋನನು ಯೇಸುವಿನ ಮಹಿಮೆಗೆ ವಿಸ್ಮಯಪಟ್ಟನು. ಅದು ಜೆಬೆದಾಯನ ಮಕ್ಕಳಾದ ಯಾಕೋಬ ಯೋಹಾನರಿಗೂ ತಿಳಿಯಿತು. ಆಗ ಯೇಸು ಸೀಮೋನನಿಗೆ 'ಹೆದರಬೇಡ. ಇಂದಿನಿಂದ ನೀನು ಮನುಷ್ಯರನ್ನು ಹಿಡಿಯುವೆ' ಎಂದನು. ಆಗ ಅವರೆಲ್ಲರೂ ತಮ್ಮ ದೋಣಿಗಳನ್ನು ದಡಕ್ಕೆ ತಂದುಬಿಟ್ಟು ಅವನನ್ನೇ ಹಿಂಬಾಲಿಸಿ ಹೋದರು.

ಅನಂತರ ಒಂದೂರಿನಲ್ಲಿ ಒಬ್ಬ ಕುಷ್ಠರೋಗಿ ಬಂದು, "ಸ್ವಾಮಿ, ನೀನು ಮನಸ್ಸುಮಾಡಿದರೆ ನನ್ನನ್ನು ಪರಿಶುದ್ಧಗೊಳಿಸಬಹುದು" ಎಂದು ಬೇಡಿದನು. ಯೇಸುವಿಗೆ ಅವನ ಮೇಲೆ ಕನಿಕರವಾಯಿತು. ಕೈನೀಡಿ ಅವನನ್ನು ಮುಟ್ಟಿ, "ನೀನು ಪರಿಶುದ್ಧನಾಗೆಂದು ನಾನು ಮನಸ್ಸು ಮಾಡುತ್ತೇನೆ" ಎಂದನು. ಎಂದೊಡನೆಯೆ ಅವನು ಪರಿಶುದ್ಧನಾದನು. ಆಗ ಯೇಸು "ಇದನ್ನು ಯಾರಿಗೂ ಹೇಳಬೇಡ. ಈ ಶುದ್ಧಿಗಾಗಿ ಮೋಶೆ ವಿಧಿಸಿರುವ ಕಾಣಿಕೆಯನ್ನು ಮುಖ್ಯ ಅರ್ಚಕನಿಗೆ ಮುಟ್ಟಿಸು"

ಎಂದನು. ಆದರೂ ಅವನು ಹೋಗಿ ಊರಲ್ಲೆಲ್ಲಾ ಆ ಸುದ್ದಿ ಹರಡಿಬಿಟ್ಟನು. ಯೇಸು ಹೊರಗೆ ತಲೆಯಿಡುವುದೆ ಕಷ್ಟವಾಗಿಬಿಟ್ಟಿತು. ಆದ್ದರಿಂದ ಬೆಂಗಾಡಿಗೆ ಹೋದನು. ಅಲ್ಲಿಗೂ ಜನ ಬಂದು ಮುತ್ತಿದರು. ಯೇಸು ಇನ್ನೂ ಕಾಡಿನೊಳಕ್ಕೆ ಹೋಗಿ ಪ್ರಾರ್ಥನೆಮಾಡಿದನು.

ಕೆಲವು ದಿನ ಕಳೆದು ಯೇಸು ಕಪೆರ್‌ನೌಮಿಗೆ ಬಂದನು. ಅವನು ಬಂದುದನ್ನು ಕೇಳಿದೊಡನೆಯೆ ಜನ ಬಂದು ಮುತ್ತಿದರು. ಅವನು ಇಳಿದಿದ್ದ ಮನೆಯೊಳಗಾಗಲಿ ಬಾಗಿಲ ಬಳಿಯಾಗಲಿ ಸ್ಥಳವಿರಲಿಲ್ಲ. ಆಗ ಪಾರ್ಶ್ವವಾಯುವಿನಿಂದ ನರಳುತ್ತಿದ್ದವನೊಬ್ಬನನ್ನು ಕರೆತಂದರು. ಅವನನ್ನು ಯೇಸುವಿನಿಂದ ಗುಣಪಡಿಸಬೇಕೆಂದು ಬಂದಿದ್ದರು ಯೇಸುವಿನ ಬಳಿ ಹೋಗಲು ಬೇರೆ ಏನೂ ದಾರಿಯಿಲ್ಲದಿರಲು, ಮಾಡಿನ ಮೇಲಿನ ಹೆಂಚನ್ನು ತೆಗೆದು ಅದರ ಮೂಲಕವಾಗಿ ಆ ರೋಗಿಯಿದ್ದ ಹಾಸಿಗೆಯನ್ನು ಯೇಸುವಿನ ಬಳಿ ಇಳಿಸಿದರು.

ಆಗ ಯೇಸು ಅಲ್ಲಿ ಉಪದೇಶಮಾಡುತ್ತಿದ್ದನು. ಅವನ ಸುತ್ತಾ ಫರಿಸಾಯರೂ ಶಾಸ್ತ್ರಿಗಳೂ ಕುಳಿತಿದ್ದರು. ಆ ರೋಗಿಗೆ ತನ್ನಲ್ಲಿ ಇದ್ದ ನಂಬಿಕೆಯನ್ನು ನೋಡಿ, ಯೇಸು "ಅಯ್ಯಾ, ನಿನ್ನ ಪಾಪಗಳನ್ನು ಕ್ಷಮಿಸಲಾಗಿದೆ" ಎಂದನು. ಆಗ, ಬಳಿಯಲ್ಲಿದ್ದ ಶಾಸ್ತ್ರಿಗಳು ಕೆಲವರು "ಇವನೇಕೆ ಹೀಗೆ ಹೇಳುವನು? ದೈವದೂಷಣೆ ಮಾಡುವನೇಕೆ? ದೇವರಲ್ಲದೆ ಬೇರೆ ಯಾರು ಪಾಪಗಳನ್ನು ಕ್ಷಮಿಸಬಲ್ಲವರು?" ಎಂದು ಮನಸ್ಸಿನಲ್ಲಿಯೇ ಎಂದುಕೊಂಡರು. ಯೇಸು ಅವರ ಅಂತರಂಗವನ್ನು ತಿಳಿದು, "ಇವನ ಪಾಪಗಳನ್ನು ಕ್ಷಮಿಸಲಾಗಿದೆ ಎನ್ನುವುದು ಸುಲಭವೋ? ಅಥವಾ ಹಾಸಿಗೆಯನ್ನು ಹೊತ್ತುಕೊಂಡು ನಡೆದು ಹೋಗೆನ್ನುವುದು ಸುಲಭವೊ? ಈ ಮನುಷ್ಯಕುಮಾರನಿಗೆ ಪಾಪಗಳನ್ನು ಕ್ಷಮಿಸುವ ಶಕ್ತಿಯಿದೆಯೆಂಬುದಕ್ಕೆ ಇದೇ ಸಾಕ್ಷಿ" ಎಂದು ಹೇಳಿ, ಆ ರೋಗಿಯನ್ನು ಕುರಿತು, "ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಹೋಗು" ಎಂದನು. ಅದರಂತೆ ಆ ರೋಗಿ ಎಲ್ಲರ ಎದುರಿಗೂ ಎದ್ದು ತನ್ನ ಹಾಸಿಗೆಯನ್ನು ತಾನೇ ಎತ್ತಿಕೊಂಡುಹೋದನು. ಎಲ್ಲರೂ ಬೆರಗಾಗಿ ದೇವರ ಮಹಿಮೆಯನ್ನು ಕೊಂಡಾಡಿದರು.

ಯೇಸು ಅಲ್ಲಿಂದ ಎದ್ದು ಸಮುದ್ರತೀರಕ್ಕೆ ಹೋದನು. ಅಲ್ಲಿಯೂ ಜನ ಅವನನ್ನು ಬಿಡಲಿಲ್ಲ. ಅಲ್ಲಿಯೂ ಅವನು ಉಪದೇಶಮಾಡಿದನು.

### ಯೇಸುವಿನ ಉಪದೇಶದಲ್ಲಿ ಸಾಮತಿ

ಅಲ್ಲಿಂದ ಬರುವಾಗ ಸುಂಕದ ಕಟ್ಟೆಯಲ್ಲಿದ್ದ ಲೇವಿ ಎಂಬ ಸುಂಕದವನನ್ನು ಯೇಸು ಕರೆದನು. ಲೇವಿ ತನ್ನ ಸರ್ವಸ್ವವನ್ನೂ ತೊರೆದು ಯೇಸುವನ್ನು ಹಿಂಬಾಲಿಸಿದನು. ಈ ಲೇವಿ ಒಂದು ದಿನ ಯೇಸುವಿಗಾಗಿ ಒಂದು ಔತಣ ಏರ್ಪಡಿಸಿದನು, ಆಗ ಅನೇಕರು ಸುಂಕದವರೂ ಇತರರೂ ಯೇಸುವಿನ ಪಂಕ್ತಿಯಲ್ಲಿಯೇ ಕುಳಿತರು. ಹೀಗೆ ಯೇಸು ಸುಂಕದವರೊಡನೆಯೂ ಇತರ ಪಾಪಿಗಳೊಡನೆಯೂ ಸಹಭೋಜನ ಮಾಡುವುದನ್ನು ಕಂಡು, " ನಿಮ್ಮ ಗುರು ಸುಂಕದವರೊಡನೆಯೂ ಇತರ ಪಾಪಿಗಳೊಡನೆಯೂ ತಿನ್ನುವುದೇಕೆ? ಕುಡಿಯುವುದೇಕೆ?" ಎಂದು ಫರಿಸಾಯರು ಅವನ ಶಿಷ್ಯರನ್ನು ಕೇಳಿದರು. ಯೇಸು ಅದನ್ನು ಕೇಳಿ, " ಸ್ವಸ್ಥವಾಗಿರುವವರಿಗೆ ವೈದ್ಯರ ಆವಶ್ಯಕತೆಯಿಲ್ಲ, ರೋಗಿಗಳಿಗೆ ವೈದ್ಯ ಬೇಕು. ನಾನು ನೀತಿವಂತರನ್ನು ತಿದ್ದಲು ಬಂದವನಲ್ಲ, ಪಾಪಿಗಳನ್ನು ದೇವರ ಕಡೆಗೆ ನಡೆಸಲು ಬಂದವನು " ಎಂದನು.

ಆ ಕಾಲದಲ್ಲಿ ಯೋಹಾನನ ಶಿಷ್ಯರೂ ಫರಿಸಾಯರೂ ಉಪವಾಸ ಮಾಡುತ್ತಿದ್ದರು ಅವರು ಯೇಸುವಿನ ಬಳಿ ಬಂದು, " ಯೋಹಾನನ ಶಿಷ್ಯರೂ ಫರಿಸಾಯರೂ ಆಗಾಗ್ಗೆ ಉಪವಾಸ ಮಾಡುವರು, ಪ್ರಾರ್ಥಿಸುವರು. ನಿನ್ನ ಶಿಷ್ಯರೇಕೆ ಉಪವಾಸ ಮಾಡುವುದಿಲ್ಲ?" ಎಂದು ಕೇಳಿದರು. ಆದಕ್ಕೆ ಯೇಸು "ಮದುಮಗನು ಜೊತೆಯಲ್ಲಿರುವಾಗ ಮದುವೆಯ ಜನರು ಉಪವಾಸ ಮಾಡಬಲ್ಲರೆ? ಮದುಮಗನ ಒಡನಿರುವವರೆಗೂ ಅವರು ಉಪವಾಸ ಮಾಡಲಾರರು. ಆದರೆ ಮದುಮಗನನ್ನು ಕೊಂಡು ಹೋಗುವ ದಿವಸ ಬರುತ್ತದೆ. ಆ ದಿನಗಳಲ್ಲಿ ಅವರು ಉಪವಾಸಮಾಡುವರು" ಎಂದು ಅವರಿಗೆ ಉತ್ತರಕೊಟ್ಟನು.

ಅಲ್ಲದೆ, " ಹಳೆಯ ಬಟ್ಟೆಯ ಮೇಲೆ ಹೊಸಬಟ್ಟೆಯನ್ನು ಯಾರೂ ತೇಪೆ ಹಾಕುವುದಿಲ್ಲ. ಹಾಕಿದರೆ ಎರಡೂ ಹರಿದುಹೋಗುತ್ತದೆ, ಹೊಸದು

ಹಳೆಯದರೊಡನೆ ಹೊಂದುವುದಿಲ್ಲ. ಹೊಸ ದ್ರಾಕ್ಷಾರಸವನ್ನು ಹಳೆಯ ಬುರುಡೆಗೆ ಹಾಕುವುದಿಲ್ಲ. ಹಾಕಿದರೆ, ಹೊಸ ದ್ರಾಕ್ಷಾರಸಕ್ಕೆ ಬುರುಡೆ ಬಿರಿಯುವುದು, ದ್ರಾಕ್ಷಾರಸ ಚೆಲ್ಲುವುದು. ಹೊಸ ದ್ರಾಕ್ಷಾರಸವನ್ನು ಹೊಸ ಬುರುಡೆಗೆ ಹಾಕಿದರ ಎರಡೂ ಉಳಿಯುವುದು. ಹಳೆಯದನ್ನು ಕುಡಿಯುವವನಾವನೂ ಒಡನೆಯೇ ಹೊಸದಕ್ಕೆ ಇಷ್ಟಪಡುವುದಿಲ್ಲ. ಅವನು 'ಹಳೆಯದೇ ಚೆನ್ನ' ಎನ್ನುವನು" ಎಂದು ಯೇಸು ಅವರಿಗೆ ಒಂದು ಸಾಮತಿ ಹೇಳಿದನು

## ಯೇಸುವಿನ ಮೇಲೆ ಯೆಹೂದ್ಯರ ದ್ವೇಷ

ಅನಂತರ ಯೆಹೂದ್ಯರದೊಂದು ಜಾತ್ರೆ ಬಂತು. ಆಗ ಯೇಸು ಯೆರೂಸಲೇಮಿಗೆ ಹೋದನು ಯೆರೂಸಲೇಮಿನಲ್ಲಿ ಬೇತ್ಸಥಾ ಎಂಬ ಒಂದು ಕೊಳವಿತ್ತು. ಒಮ್ಮೊಮ್ಮೆ ದೇವದೂತನೊಬ್ಬನು ಬಂದಾಗ ಅಲ್ಲಿ ನೀರು ಉಕ್ಕುವುದೆಂದೂ, ಆಗ ಅದರಲ್ಲಿ ಮೊತ್ತಮೊದಲು ಸ್ನಾನ ಮಾಡಿದವನಿಗೆ ಏನು ರೋಗವಿದ್ದರೂ ಗುಣವಾಗುವುದೆಂದೂ ಒಂದು ಪ್ರತೀತಿಯಿತ್ತು. ಅದಕ್ಕಾಗಿ ನಾನಾತೆರದ ರೋಗಿಗಳು ಅಲ್ಲಿ ಕಾಯು ತ್ತಿದ್ದರು. ಅವರಲ್ಲಿ ಒಬ್ಬನು ಮೂವತ್ತೆಂಟುವರ್ಷದಿಂದ ರೋಗಿಯಾಗಿ ದ್ದನು. ದೇವದೂತನು ಬಂದಾಗ ಎದ್ದುಹೋಗಿ ಬೇತ್ಸಥಾ ಕೊಳದಲ್ಲಿ ಸ್ನಾನಮಾಡುವುದಕ್ಕೆ ಆಗದೆ ಕೊರಗುತ್ತಿದ್ದನು. ಯೇಸು ಅವನನ್ನು ಕಂಡು ಕನಿಕರಿಸಿ, "ಎದ್ದು, ನಿನ್ನ ಹಾಸಿಗೆ ಹೊತ್ತುಕೊಂಡು ಹೋಗು" ಎಂದು ಅನುಗ್ರಹಿಸಿದನು. ಅವನು ಹಾಗೆಯೇ ಎದ್ದುಹೋಗಿ, ಗುಣ ಪಡೆದನು. ಅದು ಯೆಹೂದ್ಯ ಶಾಸ್ತ್ರಿಗಳಿಗೆ ತಿಳಿಯಿತು. ಯೇಸು ಆ ರೋಗಿಯನ್ನು ಗುಣಪಡಿಸಿದ ದಿವಸ ಸಬ್ಬತ್‌ದಿನವಾಗಿತ್ತು. ಸಬ್ಬತ್ ದಿನದಲ್ಲಿ ಕೆಲಸಮಾಡಿದುದಕ್ಕಾಗಿ ಅವರಿಗೆ ಯೇಸುವಿನ ಮೇಲೆ ಸಿಟ್ಟು ಬಂದಿತು.

ಇನ್ನೊಂದು ಸಬ್ಬತ್‌ದಿವಸ ಯೇಸು ತನ್ನ ಶಿಷ್ಯರೊಡನೆ ಹೊಲದಲ್ಲಿ ಹಾದುಹೋದನು. ಅವನ ಶಿಷ್ಯರಿಗೆ ಹಸಿವಾಯಿತು. ಅವರು ತೆನೆಯಿಂದ ಕಾಳು ಕಿತ್ತುಕೊಂಡರು. ಆಗ ಕೆಲವರು ಫರಿಸಾಯರು ಅದನ್ನು ಕಂಡು, "ಸಬ್ಬತ್‌ದಿನದಲ್ಲಿ ಮಾಡಬಾರದುದನ್ನು ಏಕೆ ಮಾಡುವಿರಿ?" ಎಂದರು.

ಅದಕ್ಕೆ ಯೇಸು "ಹಿಂದೆ ದಾವೀದನು ತನಗೂ ತನ್ನ ಸಂಗಡದವರಿಗೂ ಹಸಿವಾದಾಗ ಏನುಮಾಡಿದನೆಂಬುದನ್ನು ನೀವು ಓದಿಲ್ಲವೆ? ಅವನು ದೇವಾಲಯದೊಳಗೆ ನುಗ್ಗಿ ಅರ್ಚಕರು ಮಾತ್ರ ತಿನ್ನಬಹುದಾದ ದೇವರ ನೈವೇದ್ಯವನ್ನು ತಾನೂ ತಿಂದು ಜೊತೆಯವರಿಗೂ ತಿನ್ನಿಸಲಿಲ್ಲವೆ?" ಎಂದು ಹೇಳಿ, "ಮನುಷ್ಯನಿಗಾಗಿ ಸಬ್ಬತ್‌ದಿನವು ನಿರ್ಮಿತವಾಯಿತೇ ಹೊರತು, ಸಬ್ಬತ್‌ದಿನಕ್ಕಾಗಿ ಮನುಷ್ಯನನ್ನು ನಿರ್ಮಿಸಲಿಲ್ಲ" ಎಂದನು. ಪುನಃ "ಮನುಷ್ಯಕುಮಾರನು ಸಬ್ಬತ್‌ದಿನಕ್ಕೆ ಒಡೆಯನು" ಎಂದನು.

ಇನ್ನೊಂದು ಸಬ್ಬತ್‌ದಿವಸ ಯೇಸು ಸಭಾಮಂದಿರಕ್ಕೆ ಹೋಗಿ ಉಪದೇಶಮಾಡಿದನು. ಅಲ್ಲಿ ಒಬ್ಬನಿಗೆ ಬಲಗೈ ಒಣಗಿಹೋಗಿತ್ತು. ಸಬ್ಬತ್‌ದಿನದಲ್ಲಿ ಅವನನ್ನೂ ಗುಣಪಡಿಸಿದರೆ ಯೇಸುವಿನಲ್ಲಿ ತಪ್ಪುಹಿಡಿಯಬಹುದೆಂದು ಯೆಹೂದ್ಯಶಾಸ್ತ್ರಿಗಳೂ ಫರಿಸಾಯರೂ ಕಾಯುತ್ತಿದ್ದರು. ಯೇಸುವಿಗೆ ಅವರ ಅಂತರಂಗ ತಿಳಿಯಿತು. ಅವನು ಆ ಒಣಗಿದ ಕೈಯವನನ್ನು ಕರೆದು ಸಭೆಯ ನಡುವೆ ನಿಲ್ಲಿಸಿದನು. ತಾನೂ ಎದ್ದು ನಿಂತು, "ಸಬ್ಬತ್‌ದಿನದಲ್ಲಿ ಒಳ್ಳೆಯದುಮಾಡುವುದು ನ್ಯಾಯವೆ? ನಾಶಪಡಿಸುವುದು ಸರಿಯೆ? ಹೇಳಿ" ಎಂದು ಅವರನ್ನು ಕೇಳಿದನು. ಅವರು ಬಾಯಿ ಮುಚ್ಚಿಕೊಂಡಿದ್ದರು. ಆಗ ಯೇಸು ಅವರನ್ನು ಕುರಿತು "ನಿಮ್ಮಲ್ಲಿ ಯಾರಾದರೂ ಒಬ್ಬರ ಒಂದು ಕುರಿ ಸಬ್ಬತ್‌ದಿನದಲ್ಲಿ ಹಳ್ಳಕ್ಕೆ ಬಿದ್ದರೆ, ನೀವು ಅದನ್ನು ಹಿಡಿದು ಎತ್ತುವುದಿಲ್ಲವೇನು? ಕುರಿಗಿಂತ ಮನುಷ್ಯನು ಉತ್ತಮನಲ್ಲವೇನು? ಆದ್ದರಿಂದಲೇ ಸಬ್ಬತ್‌ದಿನದಲ್ಲಿ ಸತ್ಕಾರ್ಯ ಮಾಡುವುದು ನ್ಯಾಯ" ಎಂದು ಹೇಳಿದನು. ಅವರ ಕಲ್ಲುಮನಸ್ಸನ್ನು ಕಂಡು ಕೋಪದಿಂದ ಸುತ್ತಲೂ ನೋಡಿದನು. ಅನಂತರ ಆ ಒಣಗಿದ ಕೈಯವನಿಗೆ "ಕೈ ನೀಡು" ಎಂದನು. ಅವನು ಕೈ ನೀಡಿದನು, ಅವನ ಕೈ ಸ್ವಸ್ಥವಾಯಿತು.

ಸಬ್ಬತ್‌ದಿನದಲ್ಲಿ ಯೇಸು ಕೆಲಸಮಾಡಿದುದರಿಂದ ಯೆಹೂದ್ಯರು ಅವನನ್ನು ಪೀಡಿಸತೊಡಗಿದರು. ಆದರೆ ಯೇಸು "ನನ್ನ ತಂದೆ ಇದುವರೆಗೂ ಕೆಲಸ ಮಾಡುತ್ತಾನೆ. ನಾನೂ ಕೆಲಸ ಮಾಡುತ್ತೇನೆ" ಎಂದನು. ಆಗ ಯೆಹೂದ್ಯರು ಅವನನ್ನು ಕೊಲ್ಲಬಯಸಿದರು. ಸಬ್ಬತ್ ದಿನವನ್ನು

ಮೀರಿದುದು ಮಾತ್ರವಲ್ಲದೆ, ದೇವರನ್ನು ತನ್ನ ತಂದೆಯೆಂದು ಕರೆದು ತಾನು ಅವನೊಡನೆ ಸರಿಗಟ್ಟಿಕೊಂಡುದಕ್ಕೆ ಅವರು ಸಿಟ್ಟಾದರು. ಅವರಿಗೆ ಹುಚ್ಚು ಹಿಡಿದಂತಾಯಿತು ಆಗ ಅವರು ಯೇಸುವನ್ನು ಏನು ಮಾಡುವುದೆಂದು ಒಬ್ಬರೊಡನೊಬ್ಬರು ಯೋಚಿಸಿದರು. ಕೂಡಲೆ ಹೋಗಿ ಹೆರೋದನ ಪಕ್ಷದವರೊಡನೆ ಅವನನ್ನು ಕೊಲ್ಲುವುದಕ್ಕಾಗಿ ಆಲೋಚನೆ ಮಾಡಿದರು.

ಅವರು ತನ್ನನ್ನು ಕೊಲ್ಲಲು ಆಲೋಚಿಸಿದುದು ಯೇಸುವಿಗೆ ತಿಳಿಯಿತು. ಅವನು ಆ ಸ್ಥಳವನ್ನುಬಿಟ್ಟು, ತನ್ನ ಶಿಷ್ಯರೊಡನೆ ಸಮುದ್ರಕ್ಕೆ ಹೋದನು ಅನೇಕರು ಅವನ ಹಿಂದೆ ಹೊರಟರು. ಅನೇಕರನ್ನು ಅವನು ಗುಣಪಡಿಸಿದನು ತಾನು ಗುಣಪಡಿಸಿದುದನ್ನು ಯಾರಿಗೂ ತಿಳಿಸಕೂಡದೆಂದು ಆಜ್ಞೆ ಮಾಡಿದನು.

## ಯೇಸುವಿನ ಅಪೊಸ್ತಲರು

ಯೇಸು ಮಾಡುತ್ತಿದ್ದ ಅದ್ಭುತ ಕಾರ್ಯಗಳನ್ನು ಕೇಳಿ ಯೂದಾಯ, ಯೆರೂಸಲೇಮ್, ಇದುಮಾಯಗಳಿಂದ ಜನ ಬಂದರು; ಯೋರ್ದನಿನ ಆಚೆ ಕಡೆಯಿಂದ ಬಂದರು. ತೂರ್ ಮತ್ತು ಸಿದೋನ್ ಪಟ್ಟಣಗಳಿಂದಲೂ ಬಂದರು. ಜನರ ಗುಂಪು ಬಹಳವಾದುದರಿಂದ ಮೇಲೆ ಬಿದ್ದು ನೂಕಿಯಾರಂದು ಯೇಸು ತನಗೊಂದು ದೋಣಿಯನ್ನು ಸಿದ್ಧಪಡಿಸುವಂತೆ ಶಿಷ್ಯರಿಗೆ ಹೇಳಿದನು ಆಗಲೇ ಇನ್ನೂ ಅನೇಕರನ್ನು ಗುಣಪಡಿಸಿದನು.

ಅನಂತರ ಯೇಸು ಬೆಟ್ಟದ ಮೇಲಕ್ಕೆ ಹತ್ತಿ, ರಾತ್ರಿಯೆಲ್ಲಾ ದೇವರಿಗೆ ಪ್ರಾರ್ಥನೆ ಮಾಡಿದನು. ಬೆಳಗಾದ ಮೇಲೆ ತನ್ನ ಶಿಷ್ಯರನ್ನು ಕರೆದನು. ತನ್ನ ಸಂಗಡ ಇದ್ದು, ದೆವ್ವಗಳನ್ನು ಬಿಡಿಸುವ ಅಧಿಕಾರ ಪಡೆದು, ಸುವಾರ್ತೆಯನ್ನು ಸಾರುವುದಕ್ಕಾಗಿ ಹನ್ನೆರಡು ಜನರನ್ನು ಆರಿಸಿದನು. ಅವರಲ್ಲಿ ಪೇತ್ರನೆಂದು ಹೆಸರು ಪಡೆದ ಸೀಮೋನನೊಬ್ಬನು. ಜೆಬೆದಾಯನ ಮಕ್ಕಳಾದ ಯಾಕೋಬ ಯೋಹಾನರು ಇನ್ನಿಬ್ಬರು. ಉಳಿದವರೆಂದರೆ, ಆಂದ್ರೆ, ಫಿಲಿಪ್ಪ, ಬಾರ್ತೊಲೊಮಾಯ, ಮತ್ತಾಯ,

ತೋಮ, ಅಲ್ಫಾಯನ ಮಗ ಯಾಕೋಬ, ಮತಾಭಿಮಾನಿಯೆನ್ನಿಸಿಕೊಂಡ ಸೀಮೋನ, ಯಾಕೋಬನ ತಮ್ಮ ಯೂದ ಮತ್ತು ಯೇಸುವನ್ನು ಯೆಹೂದ್ಯರಿಗೆ ಹಿಡಿದುಕೊಟ್ಟ ಇಸ್ಕರಿಯೋತ ಯೂದ. ಈ ಹನ್ನೆರಡು ಜನರಿಗೆ ಯೇಸು ಅಪೊಸ್ತಲರೆಂದು ಹೆಸರಿಟ್ಟನು. ರೋಗಗಳನ್ನು ಗುಣಪಡಿಸಿ ದೆವ್ವಗಳನ್ನು ಓಡಿಸುವ ಅಧಿಕಾರವನ್ನು ಅವರಿಗೆ ಕೊಟ್ಟನು.

ಅನಂತರ ಯೇಸು ಬೆಟ್ಟದಿಂದ ಇಳಿದು ಬಂದನು. ಯೂದಾಯ ಯೆರೂಸಲೇಮುಗಳಿಂದಲೂ ತೂರ್ ಸೀದೋನ್ ಪಟ್ಟಣಗಳ ಸಮುದ್ರ ತೀರಗಳಿಂದಲೂ ಜನ ಗಿಜಿಗಿಜಿಯಾಗಿ ಬಂದಿತ್ತು. ಅವನ ಬೋಧೆಯನ್ನು ಕೇಳಲು ಕೆಲವರು ಬಂದಿದ್ದರು, ಅನೇಕರು ಅವನನ್ನು ಮುಟ್ಟಿ ಸ್ವಸ್ಥವಾಗಲು ಬಂದಿದ್ದರು. ಅವನ ದಿವ್ಯಶಕ್ತಿ ಹೊರಗೆ ಹರಿದು ಅವರನ್ನು ಗುಣಪಡಿಸಿತು. ತರುವಾಯ ಯೇಸು ತಾನು ಬೆಟ್ಟದ ಮೇಲೆ ಮಾಡಿದ ಬೋಧೆಯನ್ನು ಮತ್ತೂ ಒಮ್ಮೆ ತಿಳಿಸಿದನು.

## ಇನ್ನೆರಡು ಅದ್ಭುತ ಕಾರ್ಯಗಳು

ಆಮೇಲೆ ಯೇಸು ಕಪೆರ್‌ನೌಮಿಗೆ ಹೋದನು. ಅಲ್ಲಿ ನೂರು ಜನ ಸೈನಿಕರಿಗೆ ಒಡೆಯನಾದ ಒಬ್ಬ ಶತಾಧಿಪತಿಯಿದ್ದ ಅವನ ಪ್ರೀತಿಗೆ ಪಾತ್ರನಾದ ಸೇವಕನೊಬ್ಬ ಆಗ ಸಾಯುವ ಹಾಗಿದ್ದ ಯೇಸು ಬಂದು ಅವನನ್ನು ಬದುಕಿಸಬೇಕೆಂದು ಆ ಶತಾಧಿಪತಿ ಯೆಹೂದ್ಯರ ಹಿರಿಯರನ್ನು ಬೇಡಿದನು. ಅವರು ಬಂದು, "ಈ ಶತಾಧಿಪತಿ ನಮ್ಮ ಯೆಹೂದ್ಯರನ್ನು ಪ್ರೀತಿಸುತ್ತಾನೆ. ನಮಗೊಂದು ಸಭಾಮಂದಿರ ಕಟ್ಟಿಸಿಕೊಟ್ಟಿದ್ದಾನೆ. ಅವನು ನಿನ್ನ ದಯೆಗೆ ಅರ್ಹ" ಎಂದು ಯೇಸುವನ್ನು ಬೇಡಿದರು ಯೇಸು ಅವರೊಡನೆ ಹೊರಟನು ಅಷ್ಟರಲ್ಲಿ ಆ ಶತಾಧಿಪತಿಯೇ ಬಂದು, "ಸ್ವಾಮಿ, ನೀನು ಶ್ರಮವಹಿಸಿ ನನ್ನ ಮನೆಗೆ ಬರುವಷ್ಟು ನಾನು ಯೋಗ್ಯನಲ್ಲ. ನನ್ನ ಸೇವಕನಿಗೆ ಗುಣವಾಗಲೆಂದು ಇಲ್ಲಿಂದಲೇ ನೀನು ಹೇಳಿದರೆ ಸಾಕು. ನಾನು ಒಬ್ಬರ ಕೈಕೆಳಗಿದ್ದರೂ ನನ್ನ ಕೈಕೆಳಗೂ ಕೆಲವರಿದ್ದಾರೆ; ನಾನು ಅವರನ್ನು ಕರೆದು, 'ಹೋಗು' ಎಂದೊಡನೆ ಹೋಗು

ತ್ತಾರೆ, 'ಬಾ' ಎಂದೊಡನೆ ಬರುತ್ತಾರೆ, 'ಇದು ಮಾಡು' ಎಂದೊಡನೆ ಅದು ಮಾಡುತ್ತಾರೆ. ಆದ್ದರಿಂದ, ಗುಣವಾಗಲೆಂದು ನೀನು ಇಲ್ಲಿಂದ ಆಜ್ಞೆಮಾಡಿದರೂ ಸಾಕು" ಎಂದನು.

ಅವನ ಮಾತು ಕೇಳಿ ಯೇಸು ಬೆರಗಾದನು. ತನ್ನ ಸುತ್ತಾನಿಂತ ನೆರವಿಯನ್ನು ನೋಡಿ, "ಇಷ್ಟು ಗಾಢವಾದ ನಂಬಿಕೆಯನ್ನು ನಾನು ಇಸ್ರಯೇಲದಲ್ಲಿ ಕೂಡ ನೋಡಿಲ್ಲ" ಎಂದು, "ನಿನ್ನ ನಂಬಿಕೆಯಿದ್ದಂತೆಯೇ ನಡೆಯುವುದು ಹೋಗು" ಎಂದು ಆ ಶತಾಧಿಪತಿಯನ್ನು ಕಳಿಸಿದನು. ಅವನ ಸೇವಕನು ಸ್ವಸ್ಥವಾದನು.

ತರುವಾಯ ಯೇಸು ನಾಯಿನ್ ಎಂಬ ಊರಿಗೆ ಹೋದನು. ಅಲ್ಲಿ ವಿಧವೆಯೊಬ್ಬಳು ಇದ್ದ ಒಬ್ಬನೇ ಮಗನನ್ನು ಕಳೆದುಕೊಂಡು ಅವನನ್ನು ಸ್ಮಶಾನಕ್ಕೆ ಸಾಗಿಸುತ್ತಿದ್ದಳು. ಯೇಸು ಅದನ್ನು ಕಂಡು ಕನಿಕರಿಸಿ, ಆ ಹುಡುಗನ ಮೃತದೇಹವನ್ನು ಮುಟ್ಟಿ, "ಎದ್ದೇಳು" ಎಂದನು. ಅವನು ಎದ್ದು ಕುಳಿತನು. ಯೇಸು ಆಗ ಅವನನ್ನು ಅವನ ತಾಯಿಗೆ ಒಪ್ಪಿಸಿದನು. ಆ ಅದ್ಭುತವನ್ನು ಕಂಡು ಜನರು ಭಯಗೊಂಡು, "ಮಹಾ ಪ್ರವಾದಿಯು ನಮ್ಮ ನಡುವೆ ಉದ್ಭವಿಸಿದ್ದಾನೆ. ದೇವರು ತನ್ನ ಜನರ ನಡುವೆ ದರ್ಶನತೋರಿದ್ದಾನೆ" ಎಂದು ದೇವರನ್ನು ಕೊಂಡಾಡಿದರು. ಆ ವಾರ್ತೆ ಯೂದಾಯದೇಶದಲ್ಲೆಲ್ಲಾ ಹರಡಿತು

## ಯೋಹಾನನ ಯೋಗ್ಯತೆ

ಕ್ರಿಸ್ತನ ಈ ಕಾರ್ಯಗಳು ಸೆರೆಯಲ್ಲಿದ್ದ ಯೋಹಾನನ ಕಿವಿಗೆ ಬಿತ್ತು. ಅವನು "ಯೆಹೂದ್ಯರ ಉದ್ಧಾರಕ್ಕಾಗಿ ಬರಬೇಕಾದವನು ನೀನೋ? ಅಥವಾ ಬೇರೆಯವನನ್ನು ಎದುರುನೋಡಬೇಕೋ?" ಎಂದು ಕೇಳಿಕೊಂಡು ಬರಲು ತನ್ನ ಶಿಷ್ಯರಿಬ್ಬರನ್ನು ಯೇಸುವಿನ ಬಳಿಗೆ ಕಳುಹಿಸಿದನು. ಅದಕ್ಕೆ ಯೇಸು "ನೀವು ಕಂಡುದನ್ನೂ ಕೇಳಿದ್ದನ್ನೂ ಯೋಹಾನನಿಗೆ ತಿಳಿಸಿರಿ. ಕುರುಡರು ಕಾಣುವರು, ಕುಂಟರು ನಡೆಯುವರು, ಕುಷ್ಠರೋಗಿಗಳು ಸ್ವಸ್ಥರಾಗುವರು, ಕಿವುಡರು ಕೇಳುವರು, ಸತ್ತವರು ಬದುಕುವರು, ಬಡವರು ಸುವಾರ್ತೆಯನ್ನು ಕೇಳುವರು.

ನನ್ನ ವಿಷಯದಲ್ಲಿ ಸಂಶಯಪಡದವನು ಧನ್ಯ" ಎಂದು ಹೇಳಿ ಕಳಿಸಿದನು.

ಅನಂತರ, ಯೋಹಾನನ ಶಿಷ್ಯರು ಹೋದ ಬಳಿಕ, ಯೇಸು ತನ್ನ ಸುತ್ತಲೂ ಇದ್ದವರೊಡನೆ ಯೋಹಾನನನ್ನು ಕುರಿತು ಮಾತನಾಡಿದನು "ಬೆಂಗಾಡಿನಲ್ಲಿ ಏನು ನೋಡುವುದಕ್ಕೆ ಹೋದಿರಿ? ಜೊಂಡು ಗಾಳಿಗೆ ಅಲುಗುವುದನ್ನೆ? ಮೃದುವಾದ ಬಟ್ಟೆಬರೆ ಹಾಕಿದವನನ್ನೆ? ಬೆಲೆಬಾಳುವ ಬಟ್ಟೆಯುಟ್ಟು ಭೋಗಪಡುವವರು ಅರಮನೆಗಳಲ್ಲಿದ್ದಾರೆ. ಆದರೆ ನೀವೇನು ನೋಡಲು ಕಾಡಿಗೆ ಹೋದಿರಿ? ಪ್ರವಾದಿಯನ್ನೆ? ಹೌದು, ಪ್ರವಾದಿಗಿಂತ ದೊಡ್ಡವನಾದವನನ್ನು ನೋಡಲು ನೀವು ಹೋದಿರಿ. ನಾನು ಹೇಳುತ್ತೇನೆ ಕೇಳಿ: ಯೋಹಾನನಿಗಿಂತ ದೊಡ್ಡ ಪ್ರವಾದಿಯನ್ನು ಯಾವ ಹೆಂಗುಸೂ ಹೆರಲಿಲ್ಲ. ಆದರೂ ದೇವರ ರಾಜ್ಯದಲ್ಲಿ ಬಲುಸಣ್ಣವ ನಾದವನು ಕೂಡ ಇವನಿಗಿಂತ ದೊಡ್ಡವನು" ಎಂದನು

ಅದನ್ನು ಅನೇಕ ಜನ ಕೇಳಿದರು. ಸುಂಕದವರೇ ಮೊದಲಾದವರು ಯೋಹಾನನಿಂದ ದೀಕ್ಷಾಸ್ನಾನ ಪಡೆದಿದ್ದುದರಿಂದ ಯೇಸು ಹೇಳಿದು ದನ್ನು ಒಪ್ಪಿದರು. ಆದರೆ ಫರಿಸಾಯರೂ ಧರ್ಮೋಪದೇಶಕರೂ ದೀಕ್ಷಾ ಸ್ನಾನವಿಲ್ಲದುದರಿಂದ ಅದನ್ನು ಒಪ್ಪಲಿಲ್ಲ.

ಆಗ ಯೇಸು "ಈ ಕಾಲದ ಜನರನ್ನು ಯಾವುದಕ್ಕೆ ಹೋಲಿಸಲಿ. ಇವರು ಯಾವುದರಂತೆ ಇದ್ದಾರೆ? ಪೇಟೆಯಲ್ಲಿ ಕುಳಿತು 'ನಿಮಗಾಗಿ ಕೊಳಲೂದಿದೆವು, ನೀವು ಕುಣಿಯಲಿಲ್ಲ. ನಿಮಗಾಗಿ ಗೋಳಾಡಿದೆವು, ನೀವು ಅಳಲಿಲ್ಲ' ಎಂದು ಒಬ್ಬರಿಗೊಬ್ಬರು ಹೇಳಿಕೊಳ್ಳುವ ಬಾಲಕರಂತೆ ಇದ್ದಾರೆ. ಸ್ನಾನಿಕಯೋಹಾನನು ಬಂದನು; ಅವನು ರೊಟ್ಟಿ ತಿನ್ನಲಿಲ್ಲ, ದ್ರಾಕ್ಷಾರಸ ಕುಡಿಯಲಿಲ್ಲ. ಅವನಿಗೆ ದೆವ್ವ ಹಿಡಿದಿದೆಯೆನ್ನುವಿರಿ. ಮನುಷ್ಯಕುಮಾರನು ಬಂದನು; ಉಂಡನು, ಕುಡಿದನು. ಅವನನ್ನು ಕುರಿತು 'ಹೊಟ್ಟೆಬಾಕನನ್ನು ನೋಡಿ, ಕುಡುಕನನ್ನು ನೋಡಿ. ಇವನು ಪತಿತರ, ಪಾಪಿಗಳ ಸ್ನೇಹಿತನು' ಎನ್ನುವಿರಿ. ಜ್ಞಾನ ಪ್ರಯೋಜನವಾಗ ಬೇಕಾದರೆ ಜ್ಞಾನಿಗಳಿಂದ ಮಾತ್ರ" ಎಂದನು.

## ಪತಿತಪಾವನ ಯೇಸು

ಫರಿಸಾಯನೊಬ್ಬನು ಯೇಸುವನ್ನು ಊಟಕ್ಕೆ ಕರೆದನು. ಯೇಸು ಊಟಕ್ಕೆ ಹೋಗಿ ಕುಳಿತನು. ಆಗ ಆ ಊರಿನ ಪತಿತಳೊಬ್ಬಳು ಯೇಸು ಅಲ್ಲಿರುವುದನ್ನು ತಿಳಿದು ಬಂದಳು, ಸುಗಂಧತೈಲದ ಒಂದು ಭರಣಿಯನ್ನು ತಂದಳು. ಯೇಸುವಿನ ಕಾಲಬಳಿ ಕುಳಿತಳು. ತನ್ನ ಕಣ್ಣೀರಿನಿಂದ ಅವನ ಕಾಲು ತೊಳೆದಳು, ತನ್ನ ತಲೆಗೂದಲಿನಿಂದ ಅವನ ಕಾಲು ಒರಸಿದಳು. ಅವನ ಕಾಲಿಗೆ ಮುತ್ತಿಕ್ಕಿ, ತಂದಿದ್ದ ಸುಗಂಧ ತೈಲವನ್ನು ಕಾಲಿಗೆ ಹಚ್ಚಿದಳು.

ಯೇಸುವನ್ನು ಊಟಕ್ಕೆ ಕರೆದಿದ್ದ ಫರಿಸಾಯನು ಅದನ್ನು ಕಂಡನು; "ಇವನು ನಿಜವಾಗಿಯೂ ಪ್ರವಾದಿಯಾದರೆ, ತನ್ನನ್ನು ಮುಟ್ಟುತ್ತಿರುವವಳು ಎಂತಹ ಹೆಂಗಸೆಂಬುದನ್ನು ತಿಳಿಯುವನು. ಅವಳು ಪತಿತಳೆಂಬುದನ್ನು ತಿಳಿಯುವನು" ಎಂದುಕೊಂಡನು.

ಆಗ ಯೇಸು ಅವನನ್ನು ಕುರಿತು, "ಸೀಮೋನ್, ನಿನ್ನೊಡನೆ ಸ್ವಲ್ಪ ಹೇಳಬೇಕಾದುದಿದೆ" ಎಂದನು.

ಸೀಮೋನನು "ಹೇಳು, ಗುರುವೆ" ಎಂದನು.

ಆಗ ಯೇಸು "ಒಬ್ಬ ಸಾಹುಕಾರನ ಹತ್ತಿರ ಇಬ್ಬರು ಸಾಲ ತೆಗೆದುಕೊಂಡರು. ಒಬ್ಬನು ಐನೂರು ಹಣ ಕೊಡಬೇಕಾಗಿತ್ತು, ಇನ್ನೊಬ್ಬನು ಐವತ್ತು ಕೊಡಬೇಕಾಗಿತ್ತು. ಇಬ್ಬರಿಗೂ ಸಾಲ ತೀರಿಸುವುದಕ್ಕೆ ಆಗದಿರಲು, ಸಾಹುಕಾರನು ಇಬ್ಬರ ಸಾಲವನ್ನೂ ಬಿಟ್ಟುಬಿಟ್ಟನು. ಈ ಇಬ್ಬರಲ್ಲಿ ಯಾವನು ಆ ಸಾಹುಕಾರನನ್ನು ಹೆಚ್ಚು ಪ್ರೀತಿಸುವನು?" ಎಂದು ಕೇಳಿದನು.

ಅದಕ್ಕೆ ಸೀಮೋನನು "ಹೆಚ್ಚುಸಾಲದಿಂದ ಬಿಡುಗಡೆಯಾದವನು, ಎಂದು ಕಾಣುತ್ತದೆ" ಎಂದನು.

"ಸರಿಯಾಗಿ ಹೇಳಿದೆ" ಎಂದ ಯೇಸು.

ಅನಂತರ ಆ ಹೆಂಗುಸಿನ ಕಡೆ ತಿರುಗಿ, ಸೀಮೋನನನ್ನು ಕುರಿತು, "ಈ ಹೆಂಗುಸನ್ನು ನೋಡು. ನಾನು ನಿನ್ನ ಮನೆಗೆ ಬಂದೆ, ನೀನು ನನ್ನ

ಕಾಲಿಗೆ ನೀರು ಕೊಡಲಿಲ್ಲ; ಇವಳಾದರೋ ತನ್ನ ಕಣ್ಣೀರಿನಿಂದ ನನ್ನ ಕಾಲು ತೊಳೆದು, ತನ್ನ ತಲೆಗೂದಲಿನಿಂದ ನನ್ನ ಕಾಲು ಒರಸಿದಳು. ನೀನು ನನಗೆ ಮುದ್ದಿಡಲಿಲ್ಲ; ಆದರೆ ಇವಳು ಒಳಗೆ ಬಂದುದು ಮೊದಲುಗೊಂಡು ನನ್ನ ಕಾಲಿಗೆ ಮುತ್ತಿಡುವುದು ನಿಲ್ಲಿಸಿಲ್ಲ. ನನ್ನ ತಲೆಗೆ ನೀನು ಎಣ್ಣೆ ಹಚ್ಚಲಿಲ್ಲ; ಆದರೆ ಇವಳು ನನ್ನ ಕಾಲಿಗೆ ಸುಗಂಧದ ತೈಲ ಹಚ್ಚಿದಳು. ಆದುದರಿಂದ, ಇವಳು ಬಹಳ ಪ್ರೀತಿಯಿಟ್ಟುದರಿಂದ, ಇವಳ ಅನೇಕ ಪಾಪಗಳಿಗೆ ಕ್ಷಮೆ ದೊರಕಿದೆಯೆಂದು ನಾನು ಹೇಳುತ್ತೇನೆ. ಆದರೆ ಕ್ಷಮೆಯನ್ನು ಕಡಿಮೆಯಾಗಿ ಪಡೆದವನು ಕಡಿಮೆಯಾಗಿ ಪ್ರೀತಿಯಿಡುವವನು" ಎಂದು ಹೇಳಿ, "ನಿನ್ನ ಪಾಪಗಳನ್ನು ಕ್ಷಮಿಸಲಾಗಿದೆ" ಎಂದು ಆ ಹೆಂಗುಸಿಗೆ ಹೇಳಿದನು.

ಅವನ ಜೊತೆಯಲ್ಲಿ ಊಟಕ್ಕೆ ಕುಳಿತಿದ್ದವರು ಅದನ್ನು ಕೇಳಿ, "ಪಾಪಗಳನ್ನು ಕೂಡ ಕ್ಷಮಿಸುವವನು ಯಾರಿವನು?" ಎಂದು ತಮ್ಮ ತಮ್ಮಲ್ಲೇ ಎಂದುಕೊಂಡರು ಆದರೆ "ನಿನ್ನ ನಂಬಿಕೆ ನಿನ್ನನ್ನು ಕಾಪಾಡಿದೆ. ಸುಖವಾಗಿ ಹೋಗು" ಎಂದು ಯೇಸು ಅವಳಿಗೆಂದನು.

ಅನಂತರ ಯೇಸು ಊರುಗಳಲ್ಲೂ ಹಳ್ಳಿಗಳಲ್ಲೂ ಸುತ್ತಾಡಿದನು, ದೇವರ ರಾಜ್ಯದ ಸುವಾರ್ತೆಯನ್ನು ಸಾರಿದನು ಅವನ ಹನ್ನೆರಡು ಜನ ಅಪೊಸ್ತಲರೂ ¦ಅವನೊಡನೆ ತಿರುಗಿದರು ದೆವ್ವಗಳ ಕಾಟದಿಂದ ಬಿಡುಗಡೆ ಹೊಂದಿದ ಹೆಂಗುಸರೂ ಕೆಲವರು ಜೊತೆಯಲ್ಲಿದ್ದರು. ಏಳು ದೆವ್ವಗಳ ಕಾಟದಿಂದ ಬಿಡುಗಡೆ ಹೊಂದಿದ ಮಗ್ದಲದ ಮರಿಯ ಎಂಬವಳು ಅವರಲ್ಲಿ ಒಬ್ಬಳು. ಅವಳೂ ಅವಳಂತೆ ಇತರರೂ ತಮ್ಮ ಆಸ್ತಿಯಿಂದ ಅವನಿಗೆ ಬೇಕಾದುದನ್ನು ಕೊಟ್ಟು ಉಪಚರಿಸುತ್ತಿದ್ದರು.

## ಯೆಹೂದ್ಯರಿಗೆ ಯೇಸುವಿನ ಉತ್ತರ

ಯೇಸು ದೆವ್ವ ಬಿಡಿಸುವುದನ್ನು ಯೆರೂಸಲೇಮಿನಿಂದ ಬಂದಿದ್ದ ಫರಿಸಾಯರೂ ಯೆಹೂದ್ಯಶಾಸ್ತ್ರಿಗಳೂ ನೋಡಿ, "ಇವನು ದೆವ್ವಗಳ ಒಡೆಯನನ್ನು ವಶಮಾಡಿಕೊಂಡಿದ್ದಾನೆ. ಅವನ ಸಹಾಯದಿಂದ ದೆವ್ವ ಬಿಡಿಸುತ್ತಾನೆ" ಎಂದರು.

ಆಗ ಯೇಸು ಅವರನ್ನು ಕರೆದು, "ಸೈತಾನನು ಸೈತಾನನನ್ನು ಹೇಗೆ ಓಡಿಸಿಯಾನು? ರಾಜ್ಯದಲ್ಲಿ ಎರಡು ವಿರೋಧಪಂಗಡಗಳಾದರೆ ರಾಜ್ಯ ಉಳಿಯಲಾರದು. ಮನೆಯಲ್ಲಿ ಒಡಕುಂಟಾದರೆ ಮನೆ ಉಳಿಯಲಾರದು. ಸೈತಾನನು ತನಗೆ ತಾನೇ ವಿರೋಧಿಯಾದರೆ, ಅವನು ಉಳಿಯಲಾರ. ನಾನು ಸೈತಾನನ ಬಲದಿಂದ ದೆವ್ವಬಿಡಿಸುವುದಾದರೆ ನಿಮ್ಮವರು ಆರ ಬಲದಿಂದ ಬಿಡಿಸುವರು? ನೀವೇ ಹೇಳಿರಿ. ದೈವತ್ವದ ಬಲದಿಂದ ನಾನು ದೆವ್ವಬಿಡಿಸುವುದಾದರೆ, ಪರಲೋಕದ ರಾಜ್ಯ ನಿಮಗೆ ಪ್ರಾಪ್ತವಾದಂತೆಯೇ ಸರಿ. ನನ್ನ ಜೊತೆಗೆ ನಿಲ್ಲದವನು ನನ್ನ ವಿರೋಧಿ; ನನ್ನೊಡನೆ ನಿಂತು ಆಯ್ದು ಕೂಡಿಸದವನು ಚೆಲ್ಲಿ ಚೆದರಿಸುತ್ತಾನೆ. ಏನೇ ಪಾಪಮಾಡಲಿ, ಏನೇ ದೂಷಿಸಲಿ, ಕ್ಷಮೆಯುಂಟು. ಆದರೆ ದೈವತ್ವವನ್ನು ದೂಷಿಸಿದರೆ ಮಾತ್ರ, ಅದಕ್ಕೆ ಇಹದಲ್ಲಿಯಾಗಲಿ ಪರದಲ್ಲಿಯಾಗಲಿ ಕ್ಷಮೆ ದೊರಕದು" ಎಂದನು.

ಪುನಃ "ಬಲಿಷ್ಠನ ಮನೆಗೆ ಹೊಕ್ಕು, ಅವನನ್ನು ಕಟ್ಟಿಹಾಕದೆಯೇ ಅವನ ಸ್ವತ್ತನ್ನು ಎತ್ತಿಕೊಂಡು ಬರಲು ಆಗುವುದೆ? ಮೊದಲು ಅವನನ್ನು ಕಟ್ಟಬೇಕು, ಅನಂತರ ಸೂರೆಮಾಡಬೇಕು" ಎಂದನು.

ಬಳಿಕ "ಮರ ಒಳ್ಳೆಯದಾದರೆ ಹಣ್ಣೂ ಒಳ್ಳೆಯದಾಗುತ್ತದೆ. ಮರ ಕೆಟ್ಟುದಾದರೆ ಹಣ್ಣೂ ಕೆಟ್ಟುದಾಗುತ್ತದೆ. ಮರದ ಗುಣ ತಿಳಿಯುವುದು ಹಣ್ಣಿನಿಂದ. ಓ ಸರ್ಪಜಾತಿಯವರೇ, ಕೆಟ್ಟವರಾದ ನೀವು ಒಳ್ಳೆಯದೇನು ಆಡೀರಿ? ಹೃದಯದಲ್ಲಿ ತುಂಬಿದುದು ಬಾಯಿಂದ ಬರುತ್ತದೆ. ಒಳ್ಳೆಯವನು ತನ್ನ ಒಳ್ಳೆಯ ಬೊಕ್ಕಸದಿಂದ ಒಳ್ಳೆಯದನ್ನು ತೆಗೆಯುವನು, ಕೆಟ್ಟವನು ತನ್ನ ಕೆಟ್ಟ ಬೊಕ್ಕಸದಿಂದ ಕೆಟ್ಟದನ್ನು ತೆಗೆಯುವನು. ಆಡಿದ ಪ್ರತಿಮಾತಿಗೆ ಅನುಭವಿಸಬೇಕಾದ ದಿನ ಬರುತ್ತದೆ. ನಿಮ್ಮ ಮಾತಿನಂತೆ ನಿಮಗೆ ಫಲ ಬರುತ್ತದೆ, ನಿಮ್ಮ ಮಾತಿನಂತೆ ನಿಮಗೆ ಶಿಕ್ಷೆಯಾಗುತ್ತದೆ" ಎಂದನು.

### ವಿಶ್ವಕುಟುಂಬಿ ಯೇಸು

ಹೀಗೆ ಯೇಸು ನೆರೆದಿದ್ದವರ ನಡುವೆ ಕುಳಿತು ಹೇಳುತ್ತಿದ್ದಾಗ, ಅವನ ತಾಯಿಯೂ ಅಣ್ಣತಮ್ಮಂದಿರೂ ಅವನನ್ನು ಕಾಣುವುದಕ್ಕೆ

ಬಂದು, ಹೊರಗೆ ನಿಂತುಕೊಂಡು ಹೇಳಿಕಳಿಸಿದರು. "ನಿನ್ನ ತಾಯಿಯೂ ನಿನ್ನ ಅಣ್ಣತಮ್ಮಂದಿರೂ ನಿನಗೋಸ್ಕರ ಬಂದು ಹೊರಗೆ ನಿಂತಿದ್ದಾರೆ" ಎಂದು ಆ ಜನ ಯೇಸುವಿಗೆಂದರು.

ಅದಕ್ಕೆ ಯೇಸು "ಯಾರು ನನ್ನ ತಾಯಿ? ಯಾರು ನನ್ನ ಅಣ್ಣ ತಮ್ಮಂದಿರು?" ಎಂದು ಹೇಳಿ, ತನ್ನ ಶಿಷ್ಯರ ಕಡೆ ಕೈನೀಡಿ, "ಇದೋ ನೋಡಿ, ನನ್ನ ತಾಯಿ, ನನ್ನ ಅಣ್ಣತಮ್ಮಂದಿರು. ಪರಲೋಕದಲ್ಲಿರುವ ನನ್ನ ತಂದೆಯ ಸಂಕಲ್ಪವನ್ನು ನಡಸಿದವರೇ ನನ್ನ ಅಣ್ಣ ತಮ್ಮ, ನನ್ನ ಅಕ್ಕ ತಂಗಿ, ನನ್ನ ತಾಯಿ" ಎಂದನು.

## ಇನ್ನೂ ಹಲವು ಅದ್ಭುತ ಕಾರ್ಯಗಳು

ಯೇಸುವಿಗೆ ಸಮುದ್ರತೀರದಲ್ಲಿ ಉಪದೇಶಮಾಡುವುದು ಪದ್ಧತಿಯಾಗಿತ್ತು. ಜನಸಂದಣಿ ಬಹಳವಾಗಿಬಿಟ್ಟರೆ ಅವನು ದೋಣಿಯಲ್ಲಿ ಕುಳಿತು ನೀರಿನಲ್ಲಿ ಕೊಂಚ ದೂರ ಹೋಗುವನು. ತೀರದಲ್ಲಿ ನೆರೆದವರಿಗೆ ಅಲ್ಲಿಂದಲೇ ಬೋಧಿಸುವನು

ಒಂದು ಸಲ ಉಪದೇಶ ಮುಗಿದು ಜನರನ್ನು ಕಳುಹಿಸಿಯಾದ ಮೇಲೆ ಯೇಸು ತನ್ನ ಶಿಷ್ಯರೊಡನೆ ದೋಣಿಯಲ್ಲಿ ಹೋದನು. ಸ್ವಲ್ಪ ಸಮಯದಮೇಲೆ ಬಿರುಗಾಳಿ ಬೀಳಿಯಿತು, ಅಲೆಗಳು ಅಪ್ಪಳಿಸಿ ದೋಣಿಯ ತುಂಬಾ ನೀರು ತುಂಬಿಕೊಂಡಿತು. ಆಗ ಯೇಸು ದೋಣಿಯ ಹಿಂಭಾಗದಲ್ಲಿ ಮಲಗಿ ನಿದ್ದೆಮಾಡುತ್ತಿದ್ದನು. ಅವನ ಶಿಷ್ಯರು ಅವನನ್ನು ಎಚ್ಚರಗೊಳಿಸಿ, "ನಾವು ನಾಶವಾಗುತ್ತಿದ್ದರೂ ಸುಮ್ಮನಿರುವೆಯಲ್ಲ?" ಎಂದರು. ಆಗ ಯೇಸು ಎದ್ದು ಗಾಳಿಯನ್ನು ಗದರಿಸಿ, ಸಮುದ್ರವನ್ನು ಶಾಂತವಾಗ ಹೇಳಿದನು ಗಾಳಿ ನಿಂತಿತು, ಸಮುದ್ರ ಶಾಂತವಾಯಿತು. ಅನಂತರ ತನ್ನ ಶಿಷ್ಯರನ್ನು ಕುರಿತು, "ಹೆದರಲೇಕೆ? ಇನ್ನೂ ನಿಮಗೆ ನಂಬಿಕೆ ಬಂದಿಲ್ಲವೆ?" ಎಂದನು. ಗಾಳಿ ಸಮುದ್ರಗಳು ಕೂಡ ಅವನ ಮಾತು ಕೇಳುವುದನ್ನು ಕಂಡು ಅವರು ಬೆರಗಾದರು.

ಸಮುದ್ರದಿಂದ ತೀರಕ್ಕೆ ಬಂದ ಮೇಲೆ ಯೇಸು ಒಬ್ಬಿಬ್ಬರಿಗೆ ಮೆಟ್ಟಿದ್ದ ದೆವ್ವ ಬಿಡಿಸಿದನು. ಅನಂತರ ಯಾಯಿರನೆಂಬವನ ಮಗಳನ್ನು

ಬದುಕಿಸಿದನು. ಅವನ ಹನ್ನೆರಡು ವರುಷದ ಮಗು ಸತ್ತಿತ್ತೆಂದು ಮನೆಯವರೆಲ್ಲಾ ಗೋಳಾಡುತ್ತಿದ್ದರು. ಯೇಸು ಕೂಡ ಅವಳನ್ನು ಬದುಕಿಸುವನೆಂದು ಅವರು ನಂಬಿರಲಿಲ್ಲ. ಆದರೂ ಯೇಸುವಿನ ಕೃಪೆಯಿಂದ ಅವಳು ಬದುಕಿದಳು.

ಯೇಸು ಯಾಯಿರನ ಮನೆಗೆ ಹೋಗುವಾಗ ಜನರ ಗುಂಪು ಬಹಳವಾಗಿತ್ತು. ಆ ಗುಂಪಿನಲ್ಲಿ ಒಬ್ಬ ಹೆಂಗುಸು. ಅವಳಿಗೆ ಹನ್ನೆರಡು ವರ್ಷದಿಂದ ರಕ್ತಸ್ರಾವ. ಅವಳು ವೈದ್ಯರಿಗೆ ತೆತ್ತೂ ತೆತ್ತೂ ಕೈಲಿದ್ದುದನ್ನು ಕಳೆದುಕೊಂಡರೂ ಗುಣವಾಗಿರಲಿಲ್ಲ; ಇನ್ನೂ ಕೇಡಾಗಿತ್ತು. ಯೇಸುವಿನ ಬಟ್ಟೆ ಮುಟ್ಟುವುದರಿಂದಲೇ ತನಗೆ ವಾಸಿಯಾಗುವುದೆಂದು ಅವಳು ಬಂದು ಮುಟ್ಟಿದಳು. ತತ್‍ಕ್ಷಣ ಅವಳ ರಕ್ತಸ್ರಾವ ನಿಂತು ಹೋಯಿತು. ಗುಣಪಡಿಸುವ ಶಕ್ತಿ ತನ್ನ ಮೈಯಿಂದ ಹೊರಗೆಹೋದುದು ಯೇಸುವಿಗೆ ತಿಳಿಯಿತು. ಆದರೆ ತನ್ನನ್ನು ಮುಟ್ಟಿದವರಾರೆಂದು ಅವನಿಗೆ ತಿಳಿಯಲಿಲ್ಲ. ಮುಟ್ಟಿದವರಾರೆಂದು ಕೇಳಿದನು. ಮುಟ್ಟಿದುದು ಏನು ಅಪಚಾರವಾಯಿತೋ ಎಂದು ಹೆದರಿಕೊಂಡು ಆ ಹೆಂಗುಸು ಅವನ ಕಾಲುಗಳಿಗೆ ಬಿದ್ದಳು. ಯೇಸು "ಮಗಳೇ, ಹೆದರಬೇಡ. ನಿನ್ನ ನಂಬಿಕೆಯಿಂದ ನಿನಗೆ ಗುಣವಾಗಿದೆ" ಎಂದು ಅವಳನ್ನು ಕಳಿಸಿಕೊಟ್ಟನು.

ಯಾಯಿರನ ಮನೆಯಿಂದ ಹಿಂದಿರುಗುವಾಗ ಇಬ್ಬರು ಕುರುಡರು ಯೇಸುವಿನ ಬಳಿ ಬಂದರು. 'ನಿಮ್ಮ ನಂಬಿಕೆಯಿದ್ದಂತಾಗಲಿ' ಎಂದನು ಯೇಸು. ಅವರಿಗೆ ಕಣ್ಣು ಬಂದಿತು. ಅದೇ ಸಮಯದಲ್ಲಿ ಒಬ್ಬ ಮೂಗನು ತಾನೂ ಯೇಸುವನ್ನು ನಂಬಿ ಮಾತು ಪಡೆದನು.

## ಯೇಸು ಮತ್ತೊಮ್ಮೆ ತನ್ನ ಊರಿನಲ್ಲಿ

ಅನಂತರ ಯೇಸು ಪುನಃ ತನ್ನ ಊರಿಗೆ ತನ್ನ ಶಿಷ್ಯರೊಡನೆ ಹೋದನು. ಪದ್ಧತಿಯಂತೆ ಸಬ್ಬತ್‍ದಿನದಂದು ಸಭಾಮಂದಿರದಲ್ಲಿ ಬೋಧಿಸಿದನು. ಕೇಳಿದವರೆಲ್ಲರೂ "ಇದೆಲ್ಲಾ ಇವನಿಗೆ ಹೇಗೆ ಬಂತು? ಇಷ್ಟು ತಿಳಿವಳಿಕೆ, ಇಂತಹ ಅದ್ಭುತಶಕ್ತಿ ಇವನಿಗೆ ಹೇಗೆ ಬಂತು? ಇವನು ಮರಿಯಳ ಮಗನಾದ ಬಡಗಿಯಲ್ಲವೆ? ಯಾಕೋಬ, ಯೋಸೇಫ

ಯೂದ, ಸೀಮೋನರ ಅಣ್ಣನಲ್ಲವೇ ಇವನು? ಇವನ ತಂಗಿಯರೂ ಇಲ್ಲೇ ಇರುವರಲ್ಲವೆ?" ಎಂದು ಆಡಿಕೊಂಡರು.

ಆಗ ಯೇಸು "ಪ್ರವಾದಿಗೆ ಬೇರೆ ಎಲ್ಲಿಯಾದರೂ ಗೌರವ ದೊರಕೀತಲ್ಲದೆ ತನ್ನ ದೇಶದಲ್ಲೂ ತನ್ನ ಮನೆಯಲ್ಲೂ ದೊರಕದು" ಎಂದು ಹೇಳಿ, ಅಲ್ಲಿಯೂ ಕೆಲವರು ರೋಗಿಗಳನ್ನು ಮುಟ್ಟಿ ಗುಣಪಡಿಸಿದನು. ಆದರೂ ಹೆಚ್ಚು ಮಾಡಲಾಗಲಿಲ್ಲ. ಅವರಿಗೆ ತನ್ನಲ್ಲಿ ನಂಬಿಕೆಯಿಲ್ಲದುದನ್ನು ಕಂಡು ಯೇಸು ಆಶ್ಚರ್ಯಪಟ್ಟನು

ಕುರುಬನಿಲ್ಲದ ಕುರಿಯಂತೆ ಇದ್ದ ಆ ಜನರನ್ನು ಕಂಡು ಯೇಸು ಕನಿಕರಪಟ್ಟನು. "ಸುಗ್ಗಿ ಯೇನೋ ಸೊಗಸಾಗಿದೆ, ಕುಯ್ಯುವವರು ಮಾತ್ರ ಕಡಿಮೆ ಕುಯ್ಯುವವರನ್ನು ಕಳಿಸುವಂತೆ ಸುಗ್ಗಿಯ ಒಡೆಯನಿಗೆ ಪ್ರಾರ್ಥನೆಮಾಡಿರಿ" ಎಂದು ತನ್ನ ಶಿಷ್ಯರಿಗೆಂದನು

ಅನಂತರ ತನ್ನ ಹನ್ನೆರಡು ಜನ ಶಿಷ್ಯರನ್ನು ಕರೆದು, "ಇತರ ಜನರ ಗೊಡವೆ ನಿಮಗೆ ಬೇಡಿ. ಸಮಾರಿಯರ ಊರಿಗೆ ಹೋಗಬೇಡಿ. ಮನೆ ತಪ್ಪಿದ ಕುರಿಗಳಂತಿರುವ ಇಸ್ರಯೇಲದವರ ಬಳಿಗೆ ಹೋಗಿ ಪರಲೋಕದ ರಾಜ್ಯ ಕೈಸಾರಿದೆಯೆಂದು ಬೋಧಿಸಿರಿ. ರೋಗಿಗಳಿಗೆ ಆರೋಗ್ಯ ಕೊಡಿರಿ. ಸತ್ತವರನ್ನು ಬದುಕಿಸಿರಿ. ಕುಷ್ಠರೋಗಿಗಳನ್ನು ಶುದ್ಧಗೊಳಿಸಿರಿ. ದೆವ್ವಗಳನ್ನು ಬಿಡಿಸಿರಿ. ಬೇಕಾದ ಹಾಗೆ ಪಡೆದಿದ್ದೀರಿ, ಬೇಕಾದ ಹಾಗೆ ಕೊಡಿರಿ" ಎಂದು ಬುದ್ಧಿವಾದ ಹೇಳಿ ಕಳಿಸಿದನು.

ಅವರೂ ಹಾಗೆಯೇ ಹೋಗಿ, ಹೋದ ಕಡೆಯಲ್ಲೆಲ್ಲಾ ಜನರಿಗೆ ದೇವರ ನೆನಪುಕೊಟ್ಟರು, ದೆವ್ವ ಬಿಡಿಸಿದರು, ರೋಗಿಗಳಿಗೆ ಎಣ್ಣೆ ಹಚ್ಚಿದರು. ಯೇಸುವೂ ಅದೇ ರೀತಿಯಲ್ಲಿ ಜನರಿಗೆ ಧರ್ಮವನ್ನು ಉಪದೇಶ ಮಾಡುತ್ತಿದ್ದನು.

## ಹೆರೋದನ ಹೆದರಿಕೆ

ಹೆರೋದನು ತನ್ನ ಸೋದರನಾದ ಫಿಲಿಪ್ಪನ ಹೆಂಡತಿ ಹೆರೋದ್ಯಳನ್ನು ಮದುವೆಯಾದಾಗ "ಸೋದರನ ಹೆಂಡತಿಯನ್ನು ಹೊಂದುವುದು ತಕ್ಕುದಲ್ಲ" ಎಂದು ಯೋಹಾನನು ಅವನನ್ನು ಗದರಿಸಿಕೊಂಡಿದ್ದನು.

ಅದಕ್ಕಾಗಿ ಹೆರೋದನು ಯೋಹಾನನನ್ನು ಸೆರೆಹಿಡಿಸಿ ಹಾಕಿದ್ದನು. ಅವನನ್ನು ಹೇಗಾದರೂ ಮಾಡಿ ಕೊಲ್ಲಿಸಬೇಕೆಂದು ಹೆರೋದ್ಯಳು ಪ್ರಯತ್ನಪಟ್ಟಳು. ಆದರೆ ಯೋಹಾನನು ನ್ಯಾಯಪರನೆಂದೂ ದೈವ ಭಕ್ತನೆಂದೂ ತಿಳಿದು ಅವನನ್ನು ಕೊಲ್ಲುವುದಕ್ಕೆ ಹೆರೋದನು ಹೆದರುತ್ತಿದ್ದನು

ಹೀಗೆಯೇ ಇರಲು, ಹೆರೋದನ ಹುಟ್ಟಿದ ಹಬ್ಬ ಬಂದಿತು. ಔತಣಕ್ಕೆ ನಾಡಿನ ಮುಖ್ಯಸ್ಥರೆಲ್ಲಾ ಬಂದಿದ್ದರು. ಹೆರೋದ್ಯಳ ಮಗಳು ಅವರ ಎದುರಿಗೆ ನರ್ತನಮಾಡಿದಳು. ಹೆರೋದನು ಅದಕ್ಕೆ ಸಂತೋಷಪಟ್ಟು, ' ನಿನಗೇನು ಬೇಕೋ ಕೇಳು. ನೀನು ಏನು ಕೇಳಿದರೂ ಸರಿಯೆ. ನನ್ನ ಅರ್ಧರಾಜ್ಯವನ್ನಾದರೂ ಕೊಡುತ್ತೇನೆ" ಎಂದನು. ಅವಳು ತನ್ನ ತಾಯಿಯ ಸಲಹೆ ಕೇಳಿದಳು. ಹೆರೋದ್ಯಳು " ಸ್ನಾನಿಕ ಯೋಹಾನನ ತಲೆಯನ್ನು ಕೇಳು" ಎಂದಳು. ಅವಳು ತ್ವರೆಯಿಂದ ಬಂದು, "ಸ್ನಾನಿಕ ಯೋಹಾನನ ತಲೆಯನ್ನು ಒಂದು ತಟ್ಟೆಯ ಮೇಲೆ ತರಿಸಿಕೊಡು" ಎಂದು ಕೇಳಿದಳು. ಹೆರೋದನಿಗೆ ದುಃಖವಾಯಿತು. ಆದರೂ ಎಲ್ಲರ ಎದುರಿಗೂ ಆಡಿದ ಮಾತನ್ನು ಮುರಿಯಲಾರದೆ, ಯೋಹಾನನ ತಲೆಯನ್ನು ಕತ್ತರಿಸಿ ತರಿಸಿಕೊಟ್ಟನು. ಅವಳು ಅದನ್ನು ತನ್ನ ತಾಯಿಗೆ ಕೊಟ್ಟಳು.

ಹೀಗೆ ಯೋಹಾನನು ಮಡಿದ ತರುವಾಯ ಹೆರೋದನ ಕಿವಿಗೆ ಕ್ರಿಸ್ತನ ಕಾರ್ಯಕಲಾಪ ಬಿತ್ತು. " ಮಡಿದುಹೋದ ಸ್ನಾನಿಕ ಯೋಹಾನನು ಮರಳಿ ಬದುಕಿ ಬಂದಿದ್ದಾನೆ. ಆದ್ದರಿಂದಲೇ ಇವನಿಗೆ ಈ ಅದ್ಭುತ ಕಾರ್ಯಗಳನ್ನು ಮಾಡಲು ಆಗುತ್ತದೆ" ಎಂದು ಹೆದರಿ, ಹೆರೋದನು ಯೇಸುವನ್ನು ಕಾಣಬಯಸಿದನು.

## ಅದ್ಭುತಕಾರ್ಯ ಪರಂಪರೆ

ಹೆರೋದನ ಕಣ್ಣಿಗೆ ಬೀಳಲು ಇಷ್ಟಪಡದೆ ಯೇಸು ಪುನಃ ಕಾಡಿಗೆ ಹೋದನು. ಅಲ್ಲಿಗೆ ಅವನ ಹನ್ನೆರಡು ಜನ ಶಿಷ್ಯರೂ ಬಂದು ಸೇರಿ ತಾವು ಮಾಡಿದುದನ್ನೆಲ್ಲಾ ತಿಳಿಸಿದರು. ಆ ವೇಳೆಗೆ ಯೇಸುವಿನ ಅದ್ಭುತ

ಕಾರ್ಯಗಳನ್ನು ಕಂಡಿದ್ದ ಅನೇಕರೂ ಅಲ್ಲಿಗೆ ಬಂದರು. ಯೇಸು ಅವರನ್ನು ಬರಮಾಡಿಕೊಂಡು, ಶೋಕವುಳ್ಳವರನ್ನು ಸಂತೈಸಿದನು.

ಅನಂತರ ಯೇಸು ಬೆಟ್ಟದ ಮೇಲಕ್ಕೆ ಹೋದನು. ಜನರ ಗುಂಪೂ ಅವನ ಹಿಂದೆಯೇ ಹೋಯಿತು ಅವರೆಲ್ಲರಿಗೂ ಅಲ್ಲಿಯೇ ಊಟಮಾಡಿಸಬೇಕೆಂದು ಯೇಸು ಮನಸ್ಸುಮಾಡಿದನು. ಆ ಗುಂಪಿನಲ್ಲಿ ಒಬ್ಬ ಹುಡುಗನ ಹತ್ತಿರವಿದ್ದ ಐದು ರೊಟ್ಟಿಗಳನ್ನೂ ಎರಡು ಮೀನುಗಳನ್ನೂ ಮುರಿದು ತನ್ನ ಅದ್ಭುತಶಕ್ತಿಯಿಂದ ಎಲ್ಲರಿಗೂ ಹಂಚಿದನು. ಅಲ್ಲಿ ಬಂದಿದ್ದ ಐದು ಸಾವಿರ ಜನರಿಗೂ ಹೊಟ್ಟೆ ತುಂಬಿತು. ಯೇಸುವಿನ ಆಜ್ಞೆಯಂತೆ ಉಳಿದಿದ್ದ ಚೂರುಗಳನ್ನು ಆರಿಸಿದರು. ಅದು ಹನ್ನೆರಡು ಬುಟ್ಟಿ ತುಂಬಾ ಆಯಿತು.

ಅನಂತರ ಯೇಸು ತಾನು ಬೆಟ್ಟದ ಮೇಲೆಯೇ ನಿಂತು, ತನ್ನ ಶಿಷ್ಯರನ್ನು ಮುಂಚಾಗಿ ದೋಣಿಯಲ್ಲಿ ಕಳಿಸಿದನು. ಅವರು ಕತ್ತಲಿನಲ್ಲಿ ಹೋಗುವಾಗ ಗಾಳಿ ಎದ್ದು ಸಮುದ್ರ ಉಬ್ಬಿತು ಆಗ ಯೇಸು ಅಲೆಗಳ ಮೇಲೆ ನಡೆದುಕೊಂಡು ಅವರ ಬಳಿಗೆ ಬಂದನು. ಅದನ್ನು ಕಂಡು, ಬರುವವನು ಯೇಸುವೆಂದು ತಿಳಿಯದೆ ಅವರೆಲ್ಲರೂ ಅಂಜಿದರು. ಯೇಸು ಅವರಿಗೆ ಅಭಯ ಕೊಟ್ಟನು. ತನ್ನಲ್ಲಿ ನಂಬಿಕೆಯಿಲ್ಲದೆ ಮುಳುಗಿ ಹೋಗುತ್ತಿದ್ದ ಪೇತ್ರನನ್ನು ಉದ್ಧರಿಸಿದನು

ಬಳಿಕ ಎಲ್ಲರೂ ತೀರಕ್ಕೆ ಬಂದು ಸೇರಿದರು. ಯೇಸುವಿನ ಬಟ್ಟೆಯನ್ನಾದರೂ ಮುಟ್ಟಿ ಗುಣಹೊಂದಬೇಕೆಂದು ಅನೇಕ ರೋಗಿಗಳು ಅವನನ್ನು ಹುಡುಕಿಕೊಂಡು ಬಂದರು. ಮಾರನೆಯ ದಿವಸ ಯೇಸು ಕಪೆರ್‌ನೌಮಿಗೆ ಹೋದನೆಂದು ಕೇಳಿ, ಅವನನ್ನು ಹುಡುಕಿಕೊಂಡು ಅಲ್ಲಿಗೂ ಹೋದರು.

ಕಪೆರ್‌ನೌಮಿನಿಂದ ಯೇಸು ಸಮುದ್ರತೀರದ ತೂರ್‌ಸೀದೋನ್ ದೇಶಗಳಿಗೆ ಹೋದನು. ಅಲ್ಲಿ ಯಾರಿಗೂ ತಿಳಿಯದಂತೆ ಮರೆಯಾಗಿರಬೇಕೆಂದರೂ ಆಗಲಿಲ್ಲ. ಅಲ್ಲಿಯೂ ಒಬ್ಬಳು ತನ್ನ ಮಗಳಿಗೆ ಮೆಟ್ಟಿದ್ದ ದೆವ್ವವನ್ನು ಬಿಡಿಸಬೇಕೆಂದು ಬೇಡುತ್ತಾ ಯೇಸುವಿನ ಬೆನ್ನುಹತ್ತಿದಳು.

ಅವಳನ್ನು ದೂರವಿರಿಸುವುದು ಶಿಷ್ಯರಿಂದಲೂ ಸಾಧ್ಯವಾಗಲಿಲ್ಲ. ಆ ಹೆಂಗುಸು ಗ್ರೀಕಳು. ಆಗ ಯೇಸು ಅವಳನ್ನು ಪರೀಕ್ಷಿಸುವುದಕ್ಕಾಗಿ "ನನ್ನನ್ನು ಕಳಿಸಿದುದು ಇಸ್ರಯೇಲದ ಜನರ ಉದ್ಧಾರಕ್ಕಾಗಿ ಮಾತ್ರ" ಎಂದನು. ಆದರೂ ಅವಳು ಬಿಡಲಿಲ್ಲ; 'ಬಂದು ಬದುಕಿಸು, ಸ್ವಾಮಿ' ಎಂದಳು. ಅದಕ್ಕೆ ಯೇಸು "ಮೊದಲು ಮಕ್ಕಳ ಹೊಟ್ಟೆ ತುಂಬಬೇಕು. ಮಕ್ಕಳ ರೊಟ್ಟಿಯನ್ನು ತೆಗೆದು ನಾಯಿಗಳಿಗೆ ಎಸೆಯುವುದು ಸರಿಯಲ್ಲ" ಎಂದನು. ಅದಕ್ಕೆ ಅವಳು "ಹೌದು, ಸ್ವಾಮಿ. ಮಕ್ಕಳ ಕೈಯಿಂದ ಬಿದ್ದ ಚೂರುಪಾರನ್ನು ನಾಯಿಗಳಾದರೂ ತಿನ್ನುವುವು" ಎಂದಳು. ಆಗ ಯೇಸು "ಅಮ್ಮಾ, ನಿನ್ನ ನಂಬಿಕೆ ಬಹಳ ದೊಡ್ಡದು. ಅದರಿಂದ ನಿನ್ನ ಮಗಳಿಗೆ ಸ್ವಸ್ತವಾಗುವುದು. ಹೋಗು" ಎಂದನು. ಅದರಂತೆಯೇ ಅವಳ ಮಗಳಿಗೆ ದೆವ್ವ ಬಿಟ್ಟುಹೋಯಿತು.

ಅದೇ ಸಂಚಾರದಲ್ಲಿ ಯೇಸು ಇನ್ನೂ ಅನೇಕ ವಿಕಲಾಂಗರನ್ನೂ ವಾಸಿಮಾಡಿದನು.

## ಪ್ರಕಾಶರೂಪಧಾರಣೆ

ಐದುಸಾವಿರ ಜನರ ಗುಂಪಿಗೆ ರೊಟ್ಟಿ ಮೀನುಗಳನ್ನು ಒದಗಿಸಿ ಅದ್ಭುತಕಾರ್ಯವನ್ನು ಮಾಡಿದ ಒಂದು ವಾರದ ಮೇಲೆ ಯೇಸು ಪೇತ್ರನನ್ನೂ ಯಾಕೋಬ ಯೋಹಾನರನ್ನೂ ಕರೆದುಕೊಂಡು ಎತ್ತರವಾದ ಬೆಟ್ಟಕ್ಕೆ ಹೋದನು.

ಅಲ್ಲಿ ಅವನು ಪ್ರಾರ್ಥನೆ ಮಾಡುತ್ತಿರುವಾಗ ಅವನ ರೂಪವ್ಯತ್ಯಾಸವಾದುದನ್ನು ಅವರು ಕಂಡರು. ಅವನ ಮುಖ ಸೂರ್ಯನಂತೆ ಪ್ರಕಾಶಿಸಿತು. ಅವನ ವಸ್ತ್ರಗಳು ಹಿಮದಂತೆ ಬಹುಬೆಳ್ಳಗಾಗಿ ಬೆಳಗಿದುವು. ಮೋಶೆಯೂ ಎಲೀಯನೂ ಪ್ರತ್ಯಕ್ಷವಾಗಿ ಅವನೊಡನೆ ಮಾತನಾಡುತ್ತಾ ನಿಂತುಕೊಂಡರು.

ಯೇಸು ಪ್ರಾರ್ಥನೆ ಮಾಡುವಾಗ ಅವನ ಶಿಷ್ಯರು ನಿದ್ರೆಗೆ ವಶರಾಗಿದ್ದರು. ಅವರು ಎಚ್ಚೆತ್ತಾಗ, ಆ ದಿವ್ಯ ದೃಶ್ಯವನ್ನು ಕಂಡು ಹೆದರಿದರು. ಆಗ ಪೇತ್ರನು, ತಾನು ಏನು ಹೇಳುವೆನೆಂಬುದನ್ನೇ

ತಿಳಿಯದೆ, "ಸ್ವಾಮಿ, ನಾವು ಇಲ್ಲಿಯೇ ಇದ್ದು ಬಿಡೋಣ. ಮೂರು ಪರ್ಣಶಾಲೆಗಳನ್ನು ಕಟ್ಟೋಣ. ನಿನಗೊಂದು, ಮೋಶೆಗೊಂದು, ಎಲೀಯನಿಗೊಂದು" ಎಂದನು.

ಆವೇಳೆಗೆ ಮೋಶೆ ಎಲೀಯರು ಅಂತರ್ಧಾನವಾದರು. ಆಗ, ಪೇತ್ರನು ಇನ್ನೂ ಮಾತನಾಡುತ್ತಿರುವಾಗಲೇ ಪ್ರಕಾಶಮಾನವಾದ ಒಂದು ಮೋಡ ಅವರ ಮೇಲೆ ಬಂದಿತು. ಅದರ ಒಳಗಿಂದ "ಇವನು ನನ್ನ ಪ್ರೀತಿಪಾತ್ರನಾದ ಮಗ. ಇವನ ಬೋಧೆಯನ್ನು ಕೇಳಿ" ಎಂಬ ಧ್ವನಿ ಕೇಳಿಬಂತು. ಆ ಧ್ವನಿಯನ್ನು ಕೇಳಿದಾಗಲೂ ಶಿಷ್ಯರು ಹೆದರಿ ಮುಖಮರೆಸಿಕೊಂಡರು. ಯೇಸು ಅವರಿಗೆ ಅಭಯಕೊಟ್ಟು ಅವರನ್ನು ಕರೆದುಕೊಂಡು ಹೊರಟನು.

ಬೆಟ್ಟವಿಳಿದು ಬರುವಾಗ "ನಾನು ಯೆರೂಸಲೇಮಿಗೆ ಹೋಗ ಬೇಕು. ಅಲ್ಲಿ ಯೆಹೂದ್ಯಶಾಸ್ತ್ರಿಗಳೂ ಫರಿಸಾಯರೂ ಕೊಡುವ ಹಿಂಸೆ ಯನ್ನು ಅನುಭವಿಸಬೇಕು ಶಿಲುಬೆಯ ಮೇಲೆ ಸಾಯಬೇಕು. ಮೂರು ದಿನಗಳ ತರುವಾಯ ಜೀವಿಸಿ ಬರಬೇಕು" ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು.

### ಅದ್ಭುತಕಾರ್ಯಗಳ ಗುಟ್ಟು

ಇದಾದ ಮರುದಿವಸ ಯೇಸು ಒಂದು ದೊಡ್ಡ ಗುಂಪನ್ನು ಕಂಡನು. ಆ ಗುಂಪಿನಲ್ಲಿ ಒಬ್ಬ ಹುಡುಗ. ಅವನು ಹುಟ್ಟಿದ ಮೊದಲು ಗೊಂಡು ಹುಚ್ಚುಹುಚ್ಚಾಗಿ ಆಡುತ್ತಿದ್ದನು. ಬೆಂಕಿಗೆ ಹಾರುವನು, ನೀರಿಗೆ ದುಮುಕುವನು, ಇನ್ನೂ ಏನೇನೋ ಮಾಡುವನು. ಅವನನ್ನು ಗುಣ ಪಡಿಸುವುದಕ್ಕಾಗಿ ಅವನ ತಂದೆ ಯೇಸುವಿನ ಬಳಿಗೆ ಬಂದನು. ಯೇಸು "ನಿನಗೆ ನನ್ನಲ್ಲಿ ನಂಬಿಕೆಯಿರಬೇಕು. ನಂಬಿಕೆಯಿದ್ದವನಿಗೆ ಏನಾದರೂ ಸಾಧ್ಯ" ಎಂದನು. ಆ ತಂದೆ ಯೇಸು ತನ್ನ ಮಗನನ್ನು ಗುಣಪಡಿಸಬಲ್ಲ ನೆಂದು ನಂಬಿದನು. ಆ ನಂಬಿಕೆಯಿಂದ ಯೇಸು ಅವನ ಮಗನನ್ನು ಸ್ವಸ್ಥಪಡಿಸಲು ಸಾಧ್ಯವಾಯಿತು.

ಮನೆಗೆ ಹಿಂದಿರುಗಿದ ಬಳಿಕ, ಯೇಸುವಿನ ಶಿಷ್ಯರು ಅವನ ಬಳಿಗೆ ಬಂದು, "ಅವನನ್ನು ಗುಣಪಡಿಸಲು ನಮಗೇಕೆ ಆಗಲಿಲ್ಲ?" ಎಂದು

ಕೇಳಿದರು. ಅದಕ್ಕೆ ಯೇಸು "ಕಾರಣವೇನೆಂದರೆ, ನಿಮಗೆ ನನ್ನಲ್ಲಿ ನಂಬಿಕೆಯಿಲ್ಲ. ನಿಮಗೆ ಸಾಸಿವೆಕಾಳಿನಷ್ಟು ನಂಬಿಕೆಯಿದ್ದರೂ ಸಾಕು; ಸ್ಥಳ ಬದಲಾಯಿಸುವಂತೆ ಈ ಬೆಟ್ಟಕ್ಕೆ ಹೇಳಿದರೆ, ಈ ಬೆಟ್ಟ ಇಲ್ಲಿಂದ ಕದಲಿಹೋಗುವುದು. ಇಂತಹದು ಉಂಟಾಗಬೇಕಾದರೆ ಪ್ರಾರ್ಥನೆಯಿಂದ ಮಾತ್ರ, ಉಪವಾಸದಿಂದ ಮಾತ್ರ" ಎಂದನು.

ದೇವರ ಸಾಮರ್ಥ್ಯವನ್ನು ಎಲ್ಲರೂ ಕೊಂಡಾಡಿದರು.

## ದೊಡ್ಡವರು ಯಾರು?

ಒಮ್ಮೆ ಯೇಸು "ನೀವು ಮನೆಗೆ ಬರುವಾಗ ದಾರಿಯಲ್ಲಿ ಏನು ಚರ್ಚೆಮಾಡುತ್ತಾ ಬಂದಿರಿ?" ಎಂದನು. ಶಿಷ್ಯರು ಎಲ್ಲರೂ ನಾಚಿಕೆಯಿಂದ ಮಾತನಾಡದೆ ಇದ್ದರು. 'ಪರಲೋಕದಲ್ಲಿ ನಾನು ದೊಡ್ಡವನಾಗುವೆನು, ತಾನು ದೊಡ್ಡವನಾಗುವೆನು' ಎಂದು ಅವರು ಚರ್ಚೆಮಾಡುತ್ತಾ ಬಂದಿದ್ದರು. ಅವರು ಮಾತನಾಡದಿದ್ದರೂ ಯೇಸು ಅದನ್ನು ತಿಳಿದನು. ತಿಳಿದು, ತನ್ನ ಹನ್ನೆರಡು ಜನ ಶಿಷ್ಯರನ್ನು ಕರೆದು, "ಪರಲೋಕದಲ್ಲಿ ಪ್ರಥಮನಾಗಬೇಕೆಂದು ಆಸೆಪಡುವವನು ಕಟ್ಟಕಡೆಯುವನಾಗಿ ಎಲ್ಲರಿಗೂ ಸೇವೆಮಾಡುವನು" ಎಂದನು.

ಆಗ ಯೇಸು ಒಂದು ಸಣ್ಣ ಮಗುವನ್ನು ಕರೆದು, ಅವರ ನಡುವೆ ಕುಳ್ಳಿರಿಸಿದನು. ಆ ಮಗುವನ್ನು ತಬ್ಬಿಕೊಂಡು, "ನಿಮ್ಮ ಹೃದಯ ಪರಿವರ್ತನೆಯಾಗಿ ನೀವು ಈ ಮಗುವಿನಂತೆ ಆದ ಹೊರತು ನೀವು ಪರಲೋಕವನ್ನು ಪ್ರವೇಶಿಸಲಾರಿರಿ. ಈ ಮಗುವಿನಂತೆ ನಮ್ರರಾದವರಿಗೆ ಮಾತ್ರ ಪರಲೋಕಕ್ಕೆ ಪ್ರವೇಶ. ಇಂಥ ಒಂದು ಮಗುವನ್ನು ಆದರಿಸಿದರೆ ನನ್ನನ್ನು ಆದರಿಸಿದಂತೆಯೇ ಆಯಿತು. ಅದು ಬಿಟ್ಟು ಇಂತಹ ಒಂದು ಮಗುವನ್ನು ನೋಯಿಸುವವನು ಕತ್ತಿಗೆ ಬೀಸುಕಲ್ಲು ಬಿಗಿದುಕೊಂಡು ಆಳವಾದ ಸಮುದ್ರಕ್ಕೆ ಬೀಳುವುದು ಮೇಲು. ಪರಲೋಕದಲ್ಲಿರುವ ದೇವದೂತರೆಲ್ಲರೂ ಮಕ್ಕಳೇ" ಎಂದನು.

# ಪರಲೋಕದ ರಾಜ್ಯ

## ಬಿತ್ತನೆಯೂ ಬೆಳೆಯೂ

ಒಮ್ಮೆ ಯೇಸು "ಬಿತ್ತುವವನೊಬ್ಬನು ಬಿತ್ತಲು ಹೋದನು. ಕೆಲವು ಬಿತ್ತ ದಾರಿಯ ಪಕ್ಕದಲ್ಲಿ ಬಿತ್ತು; ಹಕ್ಕಿಗಳು ಬಂದು ಅದನ್ನು ತಿಂದುಬಿಟ್ಟವು ಕೆಲವು ಕಲ್ಲುನೆಲದ ಮೇಲೆ ಬಿತ್ತು; ಮಣ್ಣು ಕಡಿಮೆ ಯಿದ್ದುದರಿಂದ ಕೂಡಲೇ ಚಿಗುರಿದುವು. ಆದರೆ ಸೂರ್ಯ ಬಂದಾಗ ಅವು ಸೀದುಹೋದುವು, ಬುಡ ಬಲಿಯದುದರಿಂದ ಒಣಗಿಹೋದುವು. ಇನ್ನು ಕೆಲವು ಮುಳ್ಳಿನ ನಡುವೆ ಬಿದ್ದುವು; ಮುಳ್ಳು ಬೆಳೆದು ಅವುಗಳನ್ನು ಅಮುಕಿಬಿಟ್ಟಿತು. ಬೇರೆ ಕೆಲವು ಒಳ್ಳೆಯ ನೆಲದಲ್ಲಿ ಬಿದ್ದುವು; ಕೆಲವು ಕಡೆ ಒಂದಕ್ಕೆ ನೂರರಷ್ಟು, ಕೆಲವುಕಡೆ ಒಂದಕ್ಕೆ ಅರುವತ್ತರಷ್ಟು, ಕೆಲವು ಕಡೆ ಒಂದಕ್ಕೆ ಮೂವತ್ತರಷ್ಟು ಫಲ ಬಂದಿತು" ಎಂದನು.

ಅನಂತರ, "ಪರಲೋಕದ ಸುವಾರ್ತೆಯನ್ನು ಒಬ್ಬನು ಸಾರುವನು. ಕೇಳಿದವರಲ್ಲಿ ಕೆಲವರಿಗೆ ಅದು ಅರ್ಥವಾಗದು. ಅವರ ಹೃದಯದಲ್ಲಿ ಬಿತ್ತಿದ ಆ ಮಾತನ್ನು ಸೈತಾನನು ಕಿತ್ತೆಸೆಯುವನು. ಇದು ದಾರಿಯಲ್ಲಿ ಬಿದ್ದ ಬಿತ್ತದಂತೆ. ಇನ್ನು ಕೆಲವರು ಅದನ್ನು ಕೇಳುವರು. ಕೇಳಿದೊಡನೆ ಸಂತೋಷಪಡುವರು. ಆದರೆ ಅದು ಅವರಲ್ಲಿ ದೃಢವಾಗಿ ಬೇರೂರಿರುವುದಿಲ್ಲ. ಸುವಾರ್ತೆಯನ್ನು ನಡಸುವಾಗ, ತಮಗೆ ಇತರರಿಂದ ಹಿಂಸೆ ಬಂದರೆ ಒಡನೆಯೆ ಅದನ್ನು ಕೈಬಿಡುವರು ಇದು ಕಲ್ಲುನೆಲದಮೇಲೆ ಬಿದ್ದ ಬಿತ್ತದಂತೆ. ಇನ್ನೂ ಕೆಲವರು ಕೇಳುವರು; ಆದರೆ ಲೋಕದ ಚಿಂತೆಯೂ ಐಶ್ವರ್ಯಗಳಿಂದಾದ ಮೋಸವೂ ಅದನ್ನು ಬೆಳೆಯಗೊಡುವುದಿಲ್ಲ. ಇದು ಮುಳ್ಳಿನಲ್ಲಿ ಬಿದ್ದ ಬಿತ್ತದಂತೆ. ಬೇರೆ ಕೆಲವರು ಆ ಸುವಾರ್ತೆಯನ್ನು ಕೇಳಿ, ತಿಳಿದು, ಅದರಂತೆ ನಡೆದು ಫಲ ಪಡೆಯುವರು. ಇದು ಒಳ್ಳೆಯ ನೆಲದಲ್ಲಿ ಬಿದ್ದ ಬಿತ್ತದಂತೆ" ಎಂದು ಮೇಲೆ ಹೇಳಿದ ಸಾಮತಿಯನ್ನು ವಿವರಿಸಿದನು.

## ಗೋಧಿಯೂ ಕಳೆಗಳೂ

ಮತ್ತೊಂದು ಸಲ ಯೇಸು "ಒಬ್ಬನು ಹೊಲದಲ್ಲಿ ಒಳ್ಳೆಯ ಗೋಧಿ ಬಿತ್ತಿದನು. ಅವನು ನಿದ್ರೆ ಮಾಡುತ್ತಿದ್ದಾಗ ಶತ್ರುವಾದವನು ಬಂದು

ಗೋಧಿಯ ನಡುವೆ ಕಳೆಗಳನ್ನು ಬಿತ್ತಿಹೋದನು. ಗೋಧಿ ಬೆಳೆದು ತೆನೆ ಬಿಟ್ಟಾಗ, ಕಳೆಗಳೂ ತಲೆಯೆತ್ತಿಕೊಂಡವು. ಆಗ ಆಳುಗಳು ಹೊಲದವನ ಹತ್ತಿರ ಬಂದು, "ಒಳ್ಳೆಯ ಗೋಧಿ ಬಿತ್ತಿದೆಯಲ್ಲ? ಕಳೆ ಎಲ್ಲಿಂದ ಬಂತು?" ಎಂದರು. ಅದಕ್ಕೆ ಅವನು "ಇದನ್ನು ಶತ್ರು ಮಾಡಿದ್ದಾನೆ" ಎಂದನು. ಆಳುಗಳು "ಹಾಗಾದರೆ ನಾವು ಹೋಗಿ ಅದನ್ನು ಕಿತ್ತುಹಾಕೋಣವೆ?" ಎಂದರು. ಅದಕ್ಕೆ ಅವನು "ಬೇಡ ಕಳೆಗಳನ್ನು ಕೀಳುವಾಗ ಗೋಧಿಯೂ ಬುಡಸಹಿತ ಬಂದೀತು. ಸುಗ್ಗಿಯ ವರೆಗೆ ಎರಡೂ ಬೆಳೆಯಲಿ. ತರುವಾಯ 'ಕಳೆಗಳನ್ನು ಮೊದಲು ಕಿತ್ತು ಕಟ್ಟಿ ಬೆಂಕಿಗೆ ಹಾಕಿರಿ. ಬಳಿಕ ಗೋಧಿಯನ್ನು ಕಣಜಕ್ಕೆ ತುಂಬಿರಿ' ಎಂದು ನಾನು ಕುಯಿಲುಗಾರರಿಗೆ ಹೇಳುತ್ತೇನೆ' ಎಂದು ಹೇಳಿದನು" ಎಂದನು.

ಅನಂತರ ಯೇಸು ಆ ಸಾಮತಿಯನ್ನು ವಿವರಿಸಿದನು: "ಬಿತ್ತುವವನೇ ಮನುಷ್ಯಕುಮಾರ ಹೊಲವೇ ಈ ನೆಲ. ಪರಲೋಕಕ್ಕಾಗಿ ದುಡಿಯುವವರೇ ಒಳ್ಳೆಯ ಗೋಧಿ. ಸೈತಾನನ ಮಕ್ಕಳೇ ಕಳೆಗಳು. ಸೈತಾನನೇ ಶತ್ರು. ಈ ಯುಗ ಮುಗಿಯುವುದೇ ಸುಗ್ಗಿಕಾಲ. ದೇವದೂತರೇ ಕುಯಿಲುಗಾರರು. ಯುಗ ಮುಗಿಯುವಂದು ದೇವದೂತರನ್ನು ಕಳಿಸುವೆನು. ಅವರು ನನ್ನ ಸುವಾರ್ತೆಯಂತೆ ನಡೆಯದವರನ್ನು ನರಕದ ಬೆಂಕಿಗೆ ನೂಕುವರು; ಅದರಂತೆ ನಡೆದವರನ್ನು ಪರಲೋಕಕ್ಕೆ ಕರೆದೊಯ್ಯುವರು."

## ರಾಜನ ಮನೆಯ ಮದುವೆ

ಪರಲೋಕದ ರಾಜ್ಯವನ್ನು ಕುರಿತು ಯೇಸು ಇನ್ನೊಂದು ಸಾಮತಿ ಹೇಳಿದನು:

ಒಬ್ಬ ರಾಜನಿದ್ದ. ಅವನ ಮಗನ ಮದುವೆಯಾಯಿತು. ಆಗ ಮದುವೆಗೆ ಕರೆದವರನ್ನು ಬರಹೇಳಿ ಆಳುಗಳನ್ನು ಅಟ್ಟಿದನು. ಆದರೆ ಅವರು ಬರಲಿಲ್ಲ. ಪುನಃ ಬೇರೆ ಆಳುಗಳನ್ನು ಕಳಿಸಿ, "ಊಟ ಸಿದ್ಧವಾಗಿದೆ. ಎಲ್ಲಾ ಅಣಿಯಾಗಿದೆ. ಮದುವೆಗೆ ಬನ್ನಿ" ಎಂದು ಕರೆದನು.

ಅವರು ಅದನ್ನು ಗಮನಿಸಲಿಲ್ಲ. ಕೆಲವರು ತೋಟಕ್ಕೆ ಹೋದರು, ಕೆಲವರು ವ್ಯಾಪಾರಕ್ಕೆ ಹೋದರು, ಉಳಿದವರು ಆ ಸೇವಕರನ್ನು ಹೊಡೆದೂ ಬೈದೂ ಕೊಂದರು.

ಅರಸನಿಗೆ ಅದು ತಿಳಿದಾಗ ಸಿಟ್ಟು ಬಂದಿತು. ತನ್ನ ಸೇನೆಯನ್ನು ಕಳಿಸಿ, ಆ ಕೊಲೆಗಾರರನ್ನು ಕೊಲ್ಲಿಸಿ, ಅವರ ಊರು ಸುಡಿಸಿದನು. ಅನಂತರ ಸೇವಕರನ್ನು ಕರೆದು, "ಮದುವೆ ಸಿದ್ಧವಾಗಿದೆ. ನಾವು ಮೊದಲು ಕರೆದವರು ಅಯೋಗ್ಯರು. ನೀವು ರಾಜಮಾರ್ಗಗಳಿಗೆ ಹೋಗಿ ಕಂಡವರನ್ನೆಲ್ಲಾ ಕರೆದುಕೊಂಡು ಬನ್ನಿರಿ" ಎಂದನು. ಅವರು ಹಾಗೆಯೆ ಹೋಗಿ, ಒಳ್ಳೆಯವರು ಕೆಟ್ಟವರು ಎನ್ನದೆ ಎಲ್ಲರನ್ನೂ ಕರೆದುಕೊಂಡು ಬಂದರು. ಮದುವೆಗೆ ಜನ ಬಂದಂತಾಯಿತು.

ಆಗ ಅರಸನು ಬಂದು ಮದುವೆಗೆ ಬಂದವರನ್ನೆಲ್ಲಾ ನೋಡಿದನು ಅವರಲ್ಲಿ ಒಬ್ಬನು ಮದುವೆಮನೆಗೆ ತಕ್ಕ ಬಟ್ಟೆ ಹಾಕಿಕೊಂಡಿರಲಿಲ್ಲ. ಏಕೆ ಹಾಕಿಕೊಂಡಿಲ್ಲವೆಂದು ಅರಸನು ಅವನನ್ನು ಕೇಳಿದನು. ಅವನು ಮಾತನಾಡಲಿಲ್ಲ. ಆಗ ಅರಸನು ಸೇವಕರನ್ನು ಕರೆದು, "ಇವನ ಕೈ ಕಾಲು ಕಟ್ಟಿ ಕತ್ತಲೆಗೆ ನೂಕಿರಿ. ಅಲ್ಲಿ ಹಲ್ಲುಕಡಿದು ಗೋಳಾಡಲಿ" ಎಂದನು.

ಹೀಗೆ, ಬಹುಜನರನ್ನು ಕರೆದರು ಕೂಡ, ಆರಿಸುವುದು ಕೆಲವರನ್ನು ಮಾತ್ರ.

## ಹತ್ತು ಕನ್ಯೆಯರು

ಪರಲೋಕದ ರಾಜ್ಯವನ್ನು ಕುರಿತು ಯೇಸು ಇನ್ನೊಂದು ಸಾಮತಿ ಹೇಳಿದನು :

ಮದುವಣಿಗನನ್ನು ಎದುರುಗೊಳ್ಳುವುದಕ್ಕಾಗಿ ಹತ್ತು ಕನ್ಯೆಯರು ದೀಪಾರತಿ ಹಿಡಿದು ಹೊರಟರು. ಅವರಲ್ಲಿ ಐವರು ಬುದ್ಧಿವಂತರು, ಐವರು ಬುದ್ಧಿಹೀನರು. ಬುದ್ಧಿಹೀನರು ಆರತಿಗಳನ್ನು ತೆಗೆದುಕೊಂಡರು, ಎಣ್ಣೆ ತೆಗೆದುಕೊಳ್ಳಲಿಲ್ಲ. ಬುದ್ಧಿವಂತರು ಆರತಿಗಳನ್ನೂ ಎಣ್ಣೆಯನ್ನೂ ತೆಗೆದುಕೊಂಡರು.

ಮದುವಣಿಗನು ಬರುವುದು ತಡವಾಯಿತು ಅವರೆಲ್ಲರೂ ಮಲಗಿ ನಿದ್ರೆಮಾಡಿದರು. ನಡುರಾತ್ರಿಯಲ್ಲಿ "ಇದೋ ಮದುವಣಿಗನು ಬರುತ್ತಿದ್ದಾನೆ. ಹೋಗಿ ಎದುರುಗೊಳ್ಳಿರಿ" ಎಂಬ ಕೂಗು ಕೇಳಿಸಿತು. ಆಗ ಆ ಕನ್ಯೆಯರೆಲ್ಲರೂ ಎದ್ದು ದೀಪ ಹತ್ತಿಸಿದರು. ಆಗ ಆ ಬುದ್ಧಿಹೀನರು "ನಿಮ್ಮ ಎಣ್ಣೆ ಕೊಡಿ. ನಮ್ಮ ದೀಪ ಆರಿಹೋಗಿದೆ" ಎಂದು ಆ ಬುದ್ಧಿವಂತರನ್ನು ಕೇಳಿದರು. ಅದಕ್ಕೆ ಅವರು "ಹಾಗಾಗದು. ಎಣ್ಣೆ ಇಬ್ಬರಿಗೂ ಸಾಲದೆಹೋದೀತು. ಮಾರುವವರ ಹತ್ತಿರ ಹೋಗಿ ಕೊಂಡು ಕೊಂಡು ಬನ್ನಿರಿ" ಎಂದರು

ಅವರು ಕೊಂಡುಕೊಳ್ಳುವುದಕ್ಕೆ ಹೋಗಿರುವಾಗ ಮದುಮಗನು ಬಂದನು. ಸಿದ್ಧವಾಗಿದ್ದವರು ಅವನೊಡನೆ ಹೊರಟು ಮದುವೆಗೆ ಹೋದರು. ಮನೆಬಾಗಿಲು ಮುಚ್ಚಿದರು.

ಉಳಿದ ಕನ್ಯೆಯರು ಅನಂತರ ಬಂದು, "ಸ್ವಾಮಿ, ಸ್ವಾಮಿ, ನಮಗೂ ಬಾಗಿಲು ತೆರೆಯಿರಿ" ಎಂದರು. ಆದರೆ ಅವನು "ನೀವು ಆರೋ ನನಗೆ ತಿಳಿಯದು" ಎಂದುಬಿಟ್ಟನು.

ಆದುದರಿಂದ ಎಚ್ಚರ ತಪ್ಪದೆ ಎದುರುನೋಡಿರಿ. ಏಕೆಂದರೆ ಮನುಷ್ಯಕುಮಾರನು ಬರುವ ಹಗಲಾಗಲಿ ಹೊತ್ತಾಗಲಿ ನಿಮಗೆ ತಿಳಿಯದು.

## ತಲಾಂತುಗಳು

ಪರಲೋಕದ ರಾಜ್ಯವನ್ನು ಕುರಿತು ಯೇಸು ಇನ್ನೊಂದು ಸಾಮತಿ ಹೇಳಿದನು :

ಒಬ್ಬನು ಊರುಬಿಟ್ಟು ದೂರದೇಶಕ್ಕೆ ಪ್ರಯಾಣಮಾಡಿದನು. ಹೋಗುವಾಗ ತನ್ನ ಆಸ್ತಿಯನ್ನು ತನ್ನ ಸೇವಕರಿಗೆ ಒಪ್ಪಿಸಿದನು. ಒಬ್ಬನಿಗೆ ಐದು ತಲಾಂತು, ಒಬ್ಬನಿಗೆ ಎರಡು, ಒಬ್ಬನಿಗೆ ಒಂದು— ಹೀಗೆ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಕೊಟ್ಟು, ಹೋದನು. (ಒಂದು ತಲಾಂತು ಎಂದರೆ ಸುಮಾರು ಮೂರುಸಾವಿರ ರೂಪಾಯಿ.)

ಐದು ತಲಾಂತು ಪಡೆದವನು ಹೋಗಿ ವ್ಯಾಪಾರಮಾಡಿ ಇನ್ನೈದು ತಲಾಂತು ಸಂಪಾದಿಸಿದನು. ಎರಡು ತಲಾಂತು ಪಡೆದವನೂ ಹಾಗೆಯೇ ಮಾಡಿ ಇನ್ನೆರಡು ಸಂಪಾದಿಸಿದನು. ಆದರೆ ಒಂದು ತಲಾಂತು ಪಡೆದವನು ಅದನ್ನು ನೆಲದಲ್ಲಿ ಹೂಳಿಟ್ಟನು.

ಬಹಳ ಕಾಲವಾದ ಬಳಿಕ ಅವರ ಯಜಮಾನನು ಬಂದು ಲೆಕ್ಕ ಕೇಳಿದನು. ಐದು ತಲಾಂತು ಪಡೆದವನು ಬಂದು, ತಾನು ಮಾಡಿದುದನ್ನು ತಿಳಿಸಿ, ಹತ್ತು ತಲಾಂತು ಒಪ್ಪಿಸಿದನು. ಆಗ ಆ ಧಣಿ "ನೀನು ನಂಬಿಕಸ್ತ ಆದ್ದರಿಂದ ನಿನಗೆ ದೊಡ್ಡ ಕೆಲಸ ಕೊಡುತ್ತೇನೆ. ನನ್ನ ಭಾಗ್ಯ ನಿನ್ನದು" ಎಂದನು. ಎರಡು ತಲಾಂತು ಪಡೆದವನು ಬಂದು ತಾನು ಮಾಡಿದ ನಾಲ್ಕು ತಲಾಂತುಗಳನ್ನು ಒಪ್ಪಿಸುವಾಗಲೂ ಆ ಧಣಿ ಸಂತೋಷಪಟ್ಟು ಅವನಿಗೂ ಒಳ್ಳೆಯ ಅಧಿಕಾರ ಕೊಟ್ಟನು.

ಕಡೆಗೆ ಒಂದು ತಲಾಂತು ಪಡೆದವನು ಬಂದು, "ಸ್ವಾಮಿ, ನೀನು ಕಠಿನಹೃದಯಿ ; ಬಿತ್ತದ ಕಡೆಯಲ್ಲಿ ಕುಯಿದು, ತೂರದ ಕಡೆ ಆರಿಸುವವನು. ಆದ್ದರಿಂದ ಹೆದರಿಕೆಯಾಗಿ ನಿನ್ನ ತಲಾಂತನ್ನು ಹೂಳಿಟ್ಟಿರುವೆನು" ಎಂದು ತಂದು ಒಪ್ಪಿಸಿದನು. ಆಗ ಆ ಧಣಿ "ಮೈಗಳ್ಳ, ನಾನು ಬಿತ್ತದ ಕಡೆ ಕುಯಿಲು ಮಾಡುವೆನೆಂದು ಗೊತ್ತಿತ್ತಲ್ಲವೆ? ತೂರದ ಕಡೆ ಆರಿಸುವೆನೆಂದು ಗೊತ್ತಿತ್ತಲ್ಲವೆ? ಹಾಗಾದರೆ ನನ್ನ ಹಣವನ್ನೇಕೆ ಸಾಲಕ್ಕೆ ಹಾಕಲಿಲ್ಲ? ಹಾಕಿದ್ದರೆ ನನಗೆ ಬಡ್ಡಿ ಸಹಿತ ಬರುತ್ತಿತ್ತು. ಆದ್ದರಿಂದ ಇವನ ತಲಾಂತನ್ನು ತೆಗೆದುಕೊಂಡು ಹತ್ತು ತಲಾಂತು ಇರುವವನಿಗೆ ಕೊಡಿರಿ. ಉಳ್ಳವನಿಗೆ ಇನ್ನೂ ಕೊಡಲಾಗುವುದು; ಇಲ್ಲದವನಿಗೆ ಇದ್ದುದೂ ಹೋಗುವುದು. ಈ ಕೆಲಸಕ್ಕೆ ಬಾರದ ಆಳನ್ನು ಆಚೆ ನೂಕಿ ಕಳೆಯಿರಿ ಹೊರಗೆ ಹೋಗಿ ಹಲ್ಲುಕಡಿದು ಗೋಳಾಡಲಿ" ಎಂದನು.

### ತೋಟದ ಕೂಲಿಗಾರರು

ಪರಲೋಕದ ರಾಜ್ಯವನ್ನು ಕುರಿತು ಯೇಸು ಇನ್ನೂ ಒಂದು ಸಾಮತಿ ಹೇಳಿದನು:

ಒಬ್ಬನಿಗೆ ಒಂದು ದ್ರಾಕ್ಷೆತೋಟವಿತ್ತು. ಅವನು ಒಂದು ದಿನ ಬೆಳಗ್ಗೆ ತೋಟಕ್ಕೆ ಕೂಲಿಗಾರರನ್ನು ಗೊತ್ತುಮಾಡಲು ಹೋದನು. ದಿನಕ್ಕೆ ಒಂದು ಹಣ ಕೂಲಿಯನ್ನು ಗೊತ್ತುಮಾಡಿ ಅವರನ್ನು ತೋಟಕ್ಕೆ ಕಳಿಸಿದನು.

ಮೂರುಗಂಟೆ ಕಳೆಯಿತು. ಪೇಟೆಯಲ್ಲಿ ಸೋಮಾರಿಗಳಾಗಿ ಕೆಲವರು ನಿಂತಿದ್ದರು. 'ತೋಟದಲ್ಲಿ ಕೆಲಸಕ್ಕೆ ಹೋಗಿ. ಕೊಡಬೇಕಾದದ್ದು ಕೊಡುತ್ತೇನೆ' ಎಂದು ತೋಟಗಾರನು ಅವರನ್ನು ಕಳಿಸಿದನು.

ಆರುಗಂಟೆ ಕಳೆಯಿತು, ಇನ್ನು ಕೆಲವರನ್ನು ಕಳಿಸಿದನು. ಒಂಬತ್ತು ಗಂಟೆಯಾಯಿತು, ಇನ್ನೂ ಕೆಲವರನ್ನು ಕಳಿಸಿದನು. ಹನ್ನೊಂದು ಗಂಟೆಯೂ ಕಳೆಯಿತು. ಆಗಲೂ ಕೆಲವರು ಕೂಲಿಯಿಲ್ಲದೆಯೆ ನಿಂತಿದ್ದರು. ತೋಟಗಾರನು 'ನನ್ನ ತೋಟಕ್ಕೆ ಹೋಗಿ ಕೆಲಸಮಾಡಿ. ನ್ಯಾಯವಾದುದನ್ನು ಕೊಡುವೆನು' ಎಂದು ಅವರನ್ನೂ ಕಳಿಸಿದನು.

ಸಂಜೆಯಾಯಿತು. ಕೂಲಿಗಾರರಿಗೆ ಅವರ ಕೂಲಿಯನ್ನು ತೋಟಗಾರನು ಕೊಡಹೇಳಿದನು ಕಟ್ಟಕಡೆಗೆ ಬಂದವರು ಒಂದು ಹಣ ಕೂಲಿ ಪಡೆದರು. ಮೊತ್ತಮೊದಲು ಬಂದವರು ತಮಗೆ ಹೆಚ್ಚು ಕೂಲಿ ಬರುವುದೆಂದುಕೊಂಡರು; ಆದರೆ ಅವರಿಗೂ ಒಂದೇ ಹಣ ದೊರಕಿತು. ಆಗ ಅವರು ತೋಟಗಾರನನ್ನು ದೂರಿ ಗೊಣಗುಟ್ಟಿದರು; 'ಮೊದಲು ಬಂದವರಿಗೂ ಒಂದೇ, ಕಡೆಗೆ ಬಂದವರಿಗೂ ಒಂದೇ' ಎಂದರು

ಅದಕ್ಕೆ ತೋಟಗಾರನು 'ಅಯ್ಯಾ, ನಿಮಗೇನು ಅನ್ಯಾಯವಾಯಿತು? ಒಂದು ಹಣಕ್ಕೆ ತಾನೆ ನೀವು ಒಪ್ಪಿ ಬಂದದ್ದು? ನಿಮ್ಮ ಕೂಲಿ ಏನೋ ಅದನ್ನು ತೆಗೆದುಕೊಂಡು ಹೋಗಿ. ನಿಮಗೆ ಕೊಟ್ಟಷ್ಟೇ ಕಡೆಯವನಿಗೂ ಕೊಡುವೆನು. ನನ್ನ ಹಣವನ್ನು ನನ್ನ ಮನಸ್ಸಿಗೆ ಬಂದಂತೆ ನಾನು ಕೊಡಬಹುದಲ್ಲವೆ? ನನ್ನ ಒಳ್ಳೆಯತನ ನಿಮಗೇಕೆ ಕಣ್ಣು ಚುಚ್ಚಬೇಕು' ಎಂದನು.

ಹೀಗೆ, ಕಡೆಗೆ ಬಂದವರು ಮೊದಲಾಗುವರು, ಮೊದಲು ಬಂದವರು ಕೊನೆಗಾಗುವರು.

## ಇತರ ಸಾಮತಿಗಳು

ಪರಲೋಕದ ರಾಜ್ಯವನ್ನು ಕುರಿತು ಯೇಸು ಇನ್ನೂ ಇತರ ಸಾಮತಿ ಹೇಳಿದನು:

"ಪರಲೋಕದ ರಾಜ್ಯ ಸಾಸಿವೆಕಾಳು ಇದ್ದಂತೆ. ಸಾಸಿವೆಕಾಳನ್ನು ಒಬ್ಬನು ಬಿತ್ತುವನು. ಸಾಸಿವೆಕಾಳಿಗಿಂತ ಸಣ್ಣ ಕಾಳು ಇಲ್ಲ; ಆದರೂ ಬೆಳೆದ ಮೇಲೆ ಅದು ಅನೇಕ ಕೊಂಬೆಗಳ ದೊಡ್ಡ ಮರವಾಗುತ್ತದೆ, ಅನೇಕ ಹಕ್ಕಿಗಳಿಗೆ ಆಶ್ರಯ ಕೊಡುತ್ತದೆ" ಎಂದನು.

"ಪರಲೋಕದ ರಾಜ್ಯವನ್ನು ಹುಳಿಹಿಟ್ಟಿಗೆ ಹೋಲಿಸಬಹುದು. ಒಬ್ಬಳು ಅದನ್ನು ಮೂರು ಸೇರು ಹಿಟ್ಟಿನಲ್ಲಿ ಮುಚ್ಚಿಟ್ಟಳು. ಅದಷ್ಟೂ ಹುಳಿಹಿಟ್ಟಾಯಿತು" ಎಂದನು.

"ಪರಲೋಕದ ರಾಜ್ಯವನ್ನು ಹೊಲದಲ್ಲಿ ಹೂಳಿಟ್ಟ ನಿಧಿಗೆ ಹೋಲಿಸಬಹುದು. ಆ ನಿಧಿಯನ್ನು ಕಂಡವನು ಅದನ್ನು ಮುಚ್ಚಿಡುವನು. ತನ್ನ ಸರ್ವಸ್ವವನ್ನೂ ಸಂತೋಷದಿಂದ ಮಾರಿ ಆ ಹೊಲವನ್ನು ಕೊಂಡುಕೊಳ್ಳುವನು" ಎಂದನು.

"ಪರಲೋಕದ ರಾಜ್ಯವು ಉತ್ತಮವಾದ ಮುತ್ತುಗಳನ್ನು ಹುಡುಕುವವನಂತೆ ಇದೆ. ಅವನು ಅಮೂಲ್ಯವಾದ ಮುತ್ತನ್ನು ಕಂಡೊಡನೆಯೆ ತನ್ನ ಸರ್ವಸ್ವವನ್ನೂ ಮಾರಿ ಅದನ್ನು ಕೊಂಡುಕೊಳ್ಳುವನು" ಎಂದನು.

ಪುನಃ ಯೇಸು "ಪರಲೋಕದ ರಾಜ್ಯವನ್ನು ಒಂದು ಬಲೆಗೆ ಹೋಲಿಸಬಹುದು. ಬಲೆ ಬೀಸಿದಾಗ ಎಲ್ಲಾ ತೆರದ ಮೀನೂ ಸಿಕ್ಕಿ ಬೀಳುತ್ತದೆ. ಬಲೆ ತುಂಬಿದ ಮೇಲೆ ದಡಕ್ಕೆ ಎಳೆದು, ಒಳ್ಳೆಯದನ್ನು ಆಯ್ದುಕೊಂಡು ಕೆಟ್ಟುದನ್ನು ಎಸೆಯುವರು. ಯುಗ ಮುಗಿದ ಮೇಲೂ ಹೀಗೆಯೇ. ದೇವದೂತರು ಬಂದು ದುರ್ಜನರನ್ನೂ ಸಜ್ಜನರನ್ನೂ ವಿಂಗಡಿಸಿ ಹಾಕುವರು" ಎಂದನು.

# ಯೇಸು ಹೇಳಿದ ಕತೆಗಳು

## ಕ್ಷಮೆ ಎಲ್ಲಿಯ ವರೆಗೆ?

ಪೇತ್ರನು ಒಂದು ಸಲ "ಸ್ವಾಮಿ, ತಪ್ಪು ಮಾಡಿದವನನ್ನು ಎಷ್ಟು ಬಾರಿ ಕ್ಷಮಿಸಬೇಕು? ಏಳು ಸಲ ಸಾಕೆ?" ಎಂದು ಕೇಳಿದನು. ಅದಕ್ಕೆ ಯೇಸು "ಏಳನ್ನು ಏಳರಿಂದ ಗುಣಿಸಿದಷ್ಟು ಸಲ, ಅದಕ್ಕಿಂತ ಹೆಚ್ಚು ಸಲ. ನೀನು ಇತರರ ತಪ್ಪುಗಳನ್ನು ಕ್ಷಮಿಸದಿದ್ದರೆ, ನೀನು ತಪ್ಪು ಮಾಡಿದಾಗ ದೇವರು ನಿನ್ನನ್ನು ಕ್ಷಮಿಸಬೇಕೆನ್ನುವೆಯ?" ಎಂದು ಒಂದು ಕತೆ ಹೇಳಿದನು:

ಒಂದೂರಿನಲ್ಲಿ ಒಬ್ಬ ಸೇವಕ. ಅವನು ತನ್ನ ಯಜಮಾನನಿಗೆ ಬಹಳ ಹಣ ಕೊಡಬೇಕಾಗಿತ್ತು. ಆದರೆ ಕೊಡಲು ಕೈಯಲ್ಲಿರಲಿಲ್ಲ. ಯಜಮಾನನಿಗೆ ಸಿಟ್ಟು ಬಂದಿತು ಅವನನ್ನೂ ಅವನ ಮನೆಯವರನ್ನೂ ಗುಲಾಮಗಿರಿಗೆ ಮಾರಿಬಿಡುವುದಾಗಿ ಹೆದರಿಸಿದನು. ಸೇವಕನು ತನ್ನನ್ನು ಕ್ಷಮಿಸಬೇಕೆಂದು ಯಜಮಾನನ ಕಾಲಿಗೆ ಬಿದ್ದು ದೈನ್ಯದಿಂದ ಬೇಡಿಕೊಂಡನು. ಯಜಮಾನನು ಕನಿಕರಿಸಿ ಅವನನ್ನು ಕ್ಷಮಿಸಿದನು.

ಆ ಸೇವಕನಿಗೆ ಇನ್ನೊಬ್ಬ ಸೇವಕನು ಹಣ ಕೊಡಬೇಕಾಗಿತ್ತು. ತನ್ನ ಯಜಮಾನನು ತನ್ನ ಸಾಲವನ್ನು ಕ್ಷಮಿಸಿದಂತೆ ತಾನೂ ಅವನದನ್ನು ಕ್ಷಮಿಸುವ ಬದಲು ಅವನನ್ನು ಸೆರೆಗೆ ಹಾಕಿಸಿದನು.

ಯಜಮಾನನಿಗೆ ಇದು ತಿಳಿಯಿತು. ಅವನು ಆ ಸೇವಕನನ್ನು ಕರೆಸಿ, "ಪಾಪಿ, ನಾನು ನಿನ್ನನ್ನು ಕ್ಷಮಿಸಿದಂತೆಯೇ ನೀನೂ ಅವನನ್ನು ಏಕೆ ಕ್ಷಮಿಸಲಿಲ್ಲ?" ಎಂದು ಸಿಟ್ಟುಗೊಂಡು, ತನ್ನ ಸಾಲವನ್ನು ತೀರಿಸುವ ವರೆಗೂ ಅವನು ಶಿಕ್ಷೆಯನುಭವಿಸಬೇಕೆಂದು ಅವನನ್ನು ಓಡಿಸಿಬಿಟ್ಟನು.

"ನೀವು ಇನ್ನೊಬ್ಬರನ್ನು ಮನವಾರೆ ಕ್ಷಮಿಸದಿದ್ದರೆ, ದೇವರು ನಿಮ್ಮನ್ನೂ ಕ್ಷಮಿಸುವುದಿಲ್ಲ" ಎಂದು ಯೇಸು ಮುಗಿಸಿದನು.

## ಸಮಾರಿಯದ ಸತ್ಪುರುಷ

ಒಬ್ಬ ಧರ್ಮೋಪದೇಶಕನು ಯೇಸುವನ್ನು ಪರೀಕ್ಷಿಸುವುದಕ್ಕಾಗಿ "ಸ್ವಾಮಿ, ನಾನು ನಿತ್ಯಜೀವಿಯಾಗಲು ಏನು ಮಾಡಬೇಕು?" ಎಂದನು.

"ಶಾಸ್ತ್ರದಲ್ಲಿ ಏನು ಬರೆದಿದೆ?" ಎಂದನು ಯೇಸು.

ಅದಕ್ಕವನು "ಮನಸ್ಸು ಬುದ್ಧಿ ಆತ್ಮ ಶಕ್ತಿಗಳು ಇರುವಷ್ಟು ಮಟ್ಟಿಗೂ ದೇವರನ್ನು ಪ್ರೀತಿಸು. ನಿನ್ನ ನೆರೆಯವರನ್ನು ನಿನ್ನಂತೆಯೇ ಪ್ರೀತಿಸು—ಎಂದು ಬರೆದಿದೆ" ಎಂದನು.

"ಸರಿಯಾಗಿ ಉತ್ತರ ಕೊಟ್ಟೆ. ನೀನೂ ಹಾಗೆಯೇ ಮಾಡಬೇಕು" ಎಂದನು ಯೇಸು.

ಆದರೂ ಅವನು ತಾನು ಪ್ರಶ್ನೆ ಕೇಳಿದುದು ಸರಿಯೆಂದು ತೋರಿಸಿ ಕೊಳ್ಳುವುದಕ್ಕಾಗಿ "ನನ್ನ ನೆರೆಯುವನು ಯಾರು?" ಎಂದನು.

ಆಗ ಯೇಸು "ಯೆರೂಸಲೇಮಿನಿಂದ ಯೆರಿಕೋನಗರಕ್ಕೆ ಒಬ್ಬನು ಹೊರಟನು. ಕಳ್ಳರ ಕೈಗೆ ಬಿದ್ದನು. ಅವರು ಅವನನ್ನು ಸುಲಿದರು, ಬಡಿದರು, ಅರೆಜೀವ ಮಾಡಿ ಬಿಟ್ಟುಹೋದರು. ಆ ದಾರಿಯಲ್ಲಿ ಒಬ್ಬ ಅರ್ಚಕ ಬಂದ. ಅವನನ್ನು ಕಂಡು ದೂರ ಹೋದ. ದೇವಾಲಯದ ಅರ್ಚಕರ ಮಾಣಿಯಾದ ಲೇವ್ಯನೊಬ್ಬ ಅಲ್ಲಿ ಬಂದು ಅವನನ್ನು ಕಂಡ. ಅವನೂ ದೂರ ಹೋದ. ಆದರೆ ಸಮಾರಿಯಾದವನೊಬ್ಬ ಆ ದಾರಿ ಯಲ್ಲಿ ಬಂದ ಕಂಡ, ಕನಿಕರ ಪಟ್ಟ. ಹತ್ತಿರ ಬಂದು ಗಾಯಗಳಿಗೆ ಬಟ್ಟೆ ಕಟ್ಟಿದ. ಎಣ್ಣೆಯನ್ನೂ ದ್ರಾಕ್ಷಾರಸವನ್ನೂ ಸುರಿದ. ತನ್ನ ಕತ್ತೆಯ ಮೇಲೆಯೇ ಅವನನ್ನು ಒಂದು ಛತ್ರಕ್ಕೆ ಕರೆತಂದು ಆರೈಕೆ ಮಾಡಿದ. ಮಾರನೆಯ ದಿನ ಛತ್ರದಾತನಿಗೆ ಎರಡು ನಾಣ್ಯ ಕೊಟ್ಟು, 'ಇವನನ್ನು ಚೆನ್ನಾಗಿ ನೋಡಿಕೊ. ಇದಕ್ಕಿಂತ ಹೆಚ್ಚು ವೆಚ್ಚವಾದರೆ, ನಾನು ಹಿಂದಿರುಗಿ ಬರುವಾಗ ಕೊಡುತ್ತೇನೆ' ಎಂದು ಹೇಳಿ ಹೋದ" ಎಂದು ಅವನಿಗೊಂದು ಕತೆ ಹೇಳಿದನು.

ಅನಂತರ "ಕಳ್ಳರ ಕೈಯಲ್ಲಿ ಬಿದ್ದವನಿಗೆ ಈ ಮೂವರಲ್ಲಿ ಆವನು ನೆರೆಯುವನೆಂದು ನಿನ್ನ ಅಭಿಪ್ರಾಯ?" ಎಂದು ಕೇಳಿದನು.

"ದಯೆ ತೋರಿಸಿದವನೇ ನೆರೆಯುವನು" ಎಂದು ಆ ಧರ್ಮೋಪ ದೇಶಕನೆಂದನು.

"ಹೋಗು. ನೀನೂ ಹೀಗೆಯೇ ಮಾಡು" ಎಂದು ಯೇಸು ಅವನನ್ನು ಕಳಿಸಿದನು.

## ತೋಟಗಾರನ ಮಕ್ಕಳು

ಒಮ್ಮೆ ಯೇಸು "ಒಬ್ಬ ತೋಟಗಾರನಿಗೆ ಇಬ್ಬರು ಮಕ್ಕಳಿದ್ದರು. ಅವನು ಹಿರಿಯವನನ್ನು ಕರೆದು, ತೋಟಕ್ಕೆ ಹೋಗಿ ಕೆಲಸಮಾಡಹೇಳಿದನು. ಅವನು ಮೊದಲು ಹೋಗುವುದಿಲ್ಲವೆಂದನು; ಅನಂತರ, ಹಾಗೆ ಹೇಳಿದುದು ತಪ್ಪಾಯಿತೆಂದು ತಿಳಿದು, ಹೋದನು. ತೋಟಗಾರನು ಎರಡನೆಯ ಮಗನನ್ನೂ ಹೋಗಹೇಳಿದನು. ಅವನು ಹೋಗುತ್ತೇನೆಂದು ಹೇಳಿದನು; ಹೋಗಲಿಲ್ಲ. ಇವರಿಬ್ಬರಲ್ಲಿ ತಂದೆಯ ಇಷ್ಟದಂತೆ ನಡೆದವರು ಯಾರು ?" ಎಂದು ಯೆಹೂದ್ಯ ಶಾಸ್ತ್ರಿಗಳನ್ನು ಕೇಳಿದನು.

"ಮೊದಲನೆಯ ಮಗನೇ" ಎಂದರು ಅವರು.

ಆಗ ಯೇಸು "ಸುಂಕದವರೂ ಹಾದರಗಿತ್ತಿಯರೂ ನಿಮಗಿಂತ ಮೊದಲೇ ಪರಲೋಕದ ರಾಜ್ಯಕ್ಕೆ ಪ್ರವೇಶಿಸುವರೆಂದು ನಾನು ಹೇಳುತ್ತೇನೆ. ಧರ್ಮವನ್ನು ಆಚರಿಸುತ್ತಾ ಯೋಹಾನನು ಬಂದನು. ನೀವು ಅವನನ್ನು ನಂಬಲಿಲ್ಲವಾದರೂ ಸುಂಕದವರೂ ಹಾದರಗಿತ್ತಿಯರೂ ಅವನನ್ನು ನಂಬಿದರು. ಅದನ್ನು ಕಂಡರೂ ನಿಮಗೆ ಪಶ್ಚಾತ್ತಾಪವಾಗಲಿಲ್ಲ, ಅವನಲ್ಲಿ ನಂಬಿಕೆ ಬರಲಿಲ್ಲ" ಎಂದು ಹೇಳಿ, ಅವರಿಗೆ ಇನ್ನೊಂದು ಸಾಮತಿ ಹೇಳಿದನು:

ಒಬ್ಬನು ದ್ರಾಕ್ಷೆತೋಟ ಬೆಳೆಸಿದನು. ಅದರ ಸುತ್ತಾ ಬೇಲಿ ಹಾಕಿಸಿದನು. ದ್ರಾಕ್ಷೆಯ ಆಲೆಗಾಗಿ ಹಳ್ಳ ತೆಗೆಸಿದನು. ಆಲೆಯ ಮನೆ ಕಟ್ಟಿಸಿ ರೈತರಿಗೆ ಕೊಟ್ಟು ದೂರದೇಶಕ್ಕೆ ಹೋದನು.

ಕೊಯಿಲುಕಾಲ ಬಂದಾಗ ಹಣ್ಣಿನ ಪಾಲಿಗಾಗಿ ಸೇವಕನನ್ನು ರೈತರ ಬಳಿಗೆ ಕಳಿಸಿದನು. ಅವರು ಅವನನ್ನು ಹಿಡಿದು, ಹೊಡೆದು, ಬರಿಗೈಯಲ್ಲೆ ಹಿಂದಕ್ಕೆ ಕಳಿಸಿದರು. ಅನಂತರ ಇನ್ನೊಬ್ಬ ಸೇವಕನನ್ನು ಕಳಿಸಿದನು. ಅವನನ್ನೂ ಅವರು ಕಲ್ಲುಗಳಿಂದ ಹೊಡೆದು, ಅವನ ತಲೆ ಒಡೆದು, ಅವಮಾನಮಾಡಿ ಕಳಿಸಿದರು. ಪುನಃ ಇನ್ನೊಬ್ಬನನ್ನು ಕಳಿಸಿದನು. ಅವನನ್ನು ಅವರು ಕೊಂದರು. ಇನ್ನೂ ಅನೇಕರು ಬಂದರು. ಕೆಲವರನ್ನು ಬಡಿದರು, ಕೆಲವರನ್ನು ಕೊಂದರು.

ಇನ್ನು ಉಳಿದಿದ್ದ ಒಬ್ಬ ಮಾತ್ರ, ಅವನ ಮುದ್ದುಮಗ. ಕಡೆಗೆ ಅವನನ್ನೂ ಕಳಿಸಿದ, 'ನನ್ನ ಮಗನನ್ನಾದರೂ ಮರ್ಯಾದಿಸುವರು' ಎಂದು. ಆದರೆ ಆ ರೈತರು "ಇವನೇ ಈ ತೋಟಕ್ಕೆ ಉತ್ತರಾಧಿಕಾರಿ. ಇವನನ್ನು ಕೊಂದರೆ ತೋಟ ನಮಗೇ ಆಗುವುದು" ಎಂದು ಮಾತನಾಡಿಕೊಂಡರು. ಅವನನ್ನುಹಿಡಿದರು, ಕೊಂದರು, ತೋಟದಿಂದ ಆಚೆ ಎಸೆದರು.

ದ್ರಾಕ್ಷೆತೋಟದ ಯಜಮಾನನು ಆಗ ಏನು ಮಾಡುವನು? ತಾನೇ ಬಂದು, ಆ ರೈತರನ್ನು ಮಟ್ಟಮಾಡಿ ತೋಟವನ್ನು ಬೇರೆಯವರಿಗೆ ಕೊಡುವನು.

### ಕಳೆದುಹೋಗಿದ್ದ ಕುರಿ — ಬಿದ್ದುಹೋಗಿದ್ದ ಬೆಳ್ಳಿ

ಯೇಸು ಸುಂಕದವರೊಡನೆಯೂ ಪತಿತರೊಡನೆಯೂ ಸೇರುತ್ತಿದ್ದುದನ್ನು ಕಂಡು ಫರಿಸಾಯರೂ ಯೆಹೂದ್ಯ ಶಾಸ್ತ್ರಿಗಳೂ ಅಸಮಾಧಾನದಿಂದ ಗೊಣಗಿದರು. ಆಗ ಯೇಸು ಅವರನ್ನು ಕುರಿತು ಹೀಗೆಂದನು:

ನಿಮ್ಮಲ್ಲಿ ಆವನಿಗಾದರೂ ನೂರು ಕುರಿಯಿದ್ದರೆ, ಅದರಲ್ಲಿ ಒಂದು ಕುರಿ ಕಳೆದುಹೋದರೆ, ಉಳಿದ ತೊಂಬತ್ತೊಂಬತ್ತನ್ನು ಕಾಡಿನಲ್ಲಿ ಬಿಟ್ಟು, ಕಳೆದುಹೋದುದು ಸಿಕ್ಕುವವರೆಗೂ ಅದನ್ನು ಹುಡುಕಿಕೊಂಡು ಹೋಗುವುದಿಲ್ಲವೆ? ಅದು ಸಿಕ್ಕಿದ ಮೇಲೆ ಅದನ್ನು ಹೆಗಲ ಮೇಲೆ ಹೊತ್ತುಕೊಂಡು ಸಂತೋಷಪಡುವುದಿಲ್ಲವೇ? ಮನೆಗೆ ಬಂದಾಗ ಸ್ನೇಹಿತರನ್ನೂ ನೆರೆಯವರನ್ನೂ ಕರೆದು, ಕಳೆದುಹೋಗಿದ್ದ ಕುರಿ ಸಿಕ್ಕಿತೆಂದು ಹಿಗ್ಗುವುದಿಲ್ಲವೆ? ಅದರಂತೆಯೇ, ಪಶ್ಚಾತ್ತಾಪಪಡಬೇಕಾಗಿಲ್ಲದ ತೊಂಬತ್ತೊಂಬತ್ತು ನ್ಯಾಯಪರರಿಗಿಂತ ಪಶ್ಚಾತ್ತಾಪಪಡುವ ಒಬ್ಬ ಪಾಪಿಗಾಗಿ ಪರಲೋಕದಲ್ಲಿ ಹೆಚ್ಚು ಹಿಗ್ಗುವರು.

ಒಬ್ಬ ಹೆಂಗಸಿನ ಬಳಿ ಹತ್ತು ಬೆಳ್ಳಿಯ ನಾಣ್ಯವಿದ್ದರೆ, ಅದರಲ್ಲಿ ಒಂದು ಬಿದ್ದುಹೋದರೆ, ಅವಳು ದೀಪ ಹತ್ತಿಸಿಕೊಂಡು ಅದು ಸಿಕ್ಕುವವರೆಗೂ ಎಚ್ಚರದಿಂದ ಗುಡಿಸಿ ನೋಡುವುದಿಲ್ಲವೆ? ಸಿಕ್ಕಿದ ಮೇಲೆ, ಎಲ್ಲರನ್ನೂ ಕರೆದು ಹೇಳಿಕೊಂಡು ಹಿಗ್ಗುವುದಿಲ್ಲವೆ? ಅದರಂತೆಯೇ, ಪಶ್ಚಾತ್ತಾಪಪಡುವ ಒಬ್ಬ ಪಾಪಿಗಾಗಿ ಪರಲೋಕದಲ್ಲಿ ಹೆಚ್ಚು ಹಿಗ್ಗುವರು.

## ದುಂದುಗಾರ ಮಗ

ಮೇಲಿನ ಎರಡು ಸಾಮತಿಗಳನ್ನು ಹೇಳಿ, ಅದನ್ನೇ ವಿಶದಪಡಿಸಲು ಯೇಸು ಇನ್ನೂ ಒಂದು ಸಾಮತಿ ಹೇಳಿದನು:

ಒಬ್ಬನಿಗೆ ಇಬ್ಬರು ಮಕ್ಕಳು. ಚಿಕ್ಕವನು ತನ್ನ ಪಾಲಿನ ಆಸ್ತಿಯನ್ನು ತನಗೆ ಕೊಡಬೇಕೆಂದು ತಂದೆಯನ್ನು ಕೇಳಿ ತೆಗೆದುಕೊಂಡನು. ಸ್ವಲ್ಪ ದಿವಸದ ತರುವಾಯ ತನ್ನ ಭಾಗವನ್ನು ಎತ್ತಿಕೊಂಡು ದೂರ ದೇಶಕ್ಕೆ ಹೋಗಿ, ಮನಸ್ಸಿಗೆ ಬಂದಂತೆ ವೆಚ್ಚಮಾಡಿ ಮುಗಿಸಿಬಿಟ್ಟನು. ಹೀಗೆ ಎಲ್ಲಾ ಮುಗಿಸಿದ ಮೇಲೆ ಆ ನಾಡಿನಲ್ಲಿ ಕ್ಷಾಮ ಬಂತು. ಅವನಿಗೂ ಕೊರತೆಯಾಯಿತು. ಆಗ ಅವನು ಆ ಊರಿನಲ್ಲಿ ಜೀತಕ್ಕೆ ಸೇರಿದನು. ಹಂದಿಗಳನ್ನು ಅಟ್ಟಿಕೊಂಡುಹೋಗುವ ಕೆಲಸ ಅವನ ಪಾಲಿಗೆ ಬಿತ್ತು ಹಂದಿಗಳು ತಿನ್ನುವ ಹೊಟ್ಟನ್ನಾದರೂ ತಿಂದೇನು ಎನ್ನುವಮಟ್ಟಿಗಾದನು.

ಆಗ ಅವನು "ನನ್ನ ತಂದೆಯ ಜೀತಗಾರರಿಗೂ ಬೇಕಾದಷ್ಟು ಊಟವಿದೆ. ಆದರೆ ಇಲ್ಲಿ ನಾನು ಮಾತ್ರ ಹಸಿವಿನಿಂದ ಸಾಯುತ್ತಿದ್ದೇನೆ. ನಾನು ನನ್ನ ತಂದೆಯ ಬಳಿಗೆ ಹೋಗಿ, 'ಅಪ್ಪ, ನಾನು ಮಾಡಿದುದು ತಪ್ಪು. ನಿನ್ನ ಮಗನೆಂದು ಕರೆದುಕೊಳ್ಳುವ ಯೋಗ್ಯತೆ ನನಗಿಲ್ಲ. ನಾನು ನಿನ್ನ ಜೀತಗಾರನಾಗುವೆನು' ಎಂದು ಹೇಳಿಕೊಳ್ಳುವೆನು" ಎಂದುಕೊಂಡನು. ಅನಂತರ ಎದ್ದು ತಂದೆಯ ಮನೆಗೆ ಹೋದನು.

ಅವನು ಬರುವುದನ್ನು ಅವನ ತಂದೆ ದೂರದಿಂದಲೇ ಕಂಡನು. ಕನಿಕರದಿಂದ ಓಡಿಹೋಗಿ ಅವನನ್ನು ತಬ್ಬಿಕೊಂಡು ಮುತ್ತಿಟ್ಟನು. ಆಗ ಮಗನು "ಅಪ್ಪ, ನಾನು ಪಾಪಿ. ನಿನ್ನ ಮಗನಾಗಲು ನಾನು ಅಯೋಗ್ಯ" ಎಂದನು. ಆದರೆ ತಂದೆ ಸೇವಕರನ್ನು ಕರೆದು, "ಉತ್ತಮವಾದ ಉಡುಪು ತಂದು ಇವನಿಗೆ ಉಡಿಸಿರಿ. ಕೈಗೆ ಉಂಗುರ ಹಾಕಿರಿ. ಕಾಲಿಗೆ ಜೋಡು ತೊಡಿಸಿರಿ. ಕೊಬ್ಬಿಸಿರುವ ಕರುವನ್ನು ತಂದು ಕೊಲ್ಲಿರಿ, ತಿಂದು ಹಿಗ್ಗೋಣ. ಈ ನನ್ನ ಮಗನು ಸತ್ತುಹೋಗಿದ್ದನು, ಪುನಃ ಬದುಕಿ ಬಂದಿದ್ದಾನೆ; ಕಳೆದುಹೋಗಿದ್ದನು, ಪುನಃ ಕೈಸೇರಿದ್ದಾನೆ" ಎಂದನು. ಎಲ್ಲರೂ ಸಂತೋಷಪಟ್ಟರು.

ಆಗ ಹಿರಿಯ ಮಗನು ತೋಟದಲ್ಲಿದ್ದನು. ಮನೆಯ ಹತ್ತಿರ ಬಂದಾಗ ಸಂಗೀತ ಕುಣಿತಗಳ ಸದ್ದು ಕೇಳಿದನು. ಒಬ್ಬ ಸೇವಕನನ್ನು ಕರೆದು ಅದರ ಕಾರಣ ಕೇಳಿದನು. ಸೇವಕನು "ನಿನ್ನ ತಮ್ಮ ಬಂದಿದ್ದಾನೆ. ಅವನು ಸುಖವಾಗಿ ಬಂದುದರಿಂದ ನಿಮ್ಮ ತಂದೆ ಕೊಬ್ಬಿಸಿದ್ದ ಕರುವನ್ನು ಕೊಲ್ಲಿಸಿದ್ದಾನೆ" ಎಂದನು. ಅದನ್ನು ಕೇಳಿ ಅವನಿಗೆ ಸಿಟ್ಟು ಬಂದಿತು.

ಆಗ ಅವನು ತಂದೆಯ ಬಳಿ ಬಂದು, "ಇಷ್ಟು ವರುಷಗಳಿಂದ ನಿನ್ನ ಜೀತ ಮಾಡಿದ್ದೇನೆ. ನಿನ್ನ ಆಜ್ಞೆಯನ್ನು ಮೀರದೆ ನಡೆದಿದ್ದೇನೆ. ಆದರೂ ನನಗೆ ಒಂದು ಆಡಿನ ಮರಿಯನ್ನೂ ನೀನು ಕೊಡಲಿಲ್ಲ, ನಾನು ನನ್ನ ಸ್ನೇಹಿತರೊಡನೆ ನಲಿಯಲಿಲ್ಲ. ಆದರೆ ನಿನ್ನ ಆಸ್ತಿಯನ್ನೆಲ್ಲಾ ಸೂಳೆಯರೊಡನೆ ತಿಂದುಹಾಕಿದ ಈ ನಿನ್ನ ಮಗ ಬಂದೊಡನೆಯೆ ಕೊಬ್ಬಿಸಿದ್ದ ಕರುವನ್ನು ಕಡಿಸಿದೆ" ಎಂದು ಕೂಗಾಡಿದನು.

ಆಗ ತಂದೆಯು "ಮಗನೆ, ನೀನು ಸದಾ ನನ್ನ ಬಳಿಯೇ ಇರುವವನು. ನನ್ನ ಸರ್ವಸ್ವವೂ ನಿನ್ನದೇ. ಈ ನಿನ್ನ ತಮ್ಮನು ಸತ್ತಿದ್ದ, ಈಗ ಬದುಕಿಬಂದಿದ್ದಾನೆ; ಕಳೆದುಹೋಗಿದ್ದ, ಈಗ ಕೈಸೇರಿದ್ದಾನೆ. ಆದ್ದರಿಂದ ನಾವು ಹಿಗ್ಗಿ ನಲಿಯಬೇಕಾದ್ದೆ ನ್ಯಾಯ" ಎಂದನು.

## ಭೋಗಿಯೂ ಭಿಕಾರಿಯೂ

ಹಣದ ಮದದಿಂದ ದೇವರನ್ನು ಮರೆತವರಿಗೆ ಎಂತಹ ದುರ್ಗತಿ ಪ್ರಾಪ್ತವಾಗುವುದೆಂಬುದನ್ನು ಯೇಸು ಒಂದು ಸಾಮತಿಯ ಮೂಲಕ ಬೋಧಿಸಿದನು :

ಒಬ್ಬ ಹಣವಂತನಿದ್ದ. ಅವನು ಸದಾ ಸಕಲಾತಿ ನಾರುಮಡಿ ಉಟ್ಟು ಸಮೃದ್ಧಿಯಾಗಿ ತಿನ್ನುತ್ತಿದ್ದ. ಅವನ ಮನೆ ಬಾಗಿಲಲ್ಲಿ ಒಬ್ಬ ಭಿಕಾರಿಯಿದ್ದ. ಅವನ ಮೈತುಂಬಾ ಹುಣ್ಣು; ನಾಯಿಗಳು ಬಂದು ಅದನ್ನು ನೆಕ್ಕುತ್ತಿದ್ದವು. ಆ ಭೋಗಿಯ ತಟ್ಟೆಯಿಂದ ಬಿದ್ದ ಎಂಜಲು ಚೂರುಗಳನ್ನು ತಿನ್ನಲು ಆ ಭಿಕಾರಿ ಕಾಯ್ದು ಬಿದ್ದಿರುತ್ತಿದ್ದ.

ಹೀಗೆಯೇ ಇರಲು ಆ ಭಿಕಾರಿ ಸತ್ತಾಗ ಅವನನ್ನು ಪರಲೋಕಕ್ಕೆ ಒಯ್ದರು; ಭೋಗಿಯೂ ಸತ್ತ, ಅವನನ್ನೂ ಹೂಳಿದರು. ಆಗ

ಭೋಗಿಯು ನರಕಯಾತನೆಪಡುತ್ತಾ ಕತ್ತೆತ್ತಿ ಪರಲೋಕದಲ್ಲಿ ಭಿಕಾರಿಯನ್ನು ಕಂಡನು. 'ದೇವರೇ, ಆ ಭಿಕಾರಿಯನ್ನು ಕಳಿಸು. ಅವನು ನೀರಿನಲ್ಲಿ ತನ್ನ ಬೆರಳು ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ. ಈ ಬೆಂಕಿ ನನ್ನನ್ನು ಸುಡುತ್ತಿದೆ' ಎಂದನು.

ಆಗ ದೇವರು "ಮಗನೆ, ಬದುಕಿರುವಾಗ ನೀನು ಸುಖಪಡುತ್ತಿದ್ದೆ, ಇವನು ದುಃಖಪಡುತ್ತಿದ್ದ; ಈಗ ಇವನಿಗೆ ಸುಖವಾಗಿದೆ, ನಿನಗೆ ದುಃಖವಾಗಿದೆ. ಇದೂ ಅಲ್ಲದೆ, ನಮಗೂ ನಿನಗೂ ನಡುವೆ ದೊಡ್ಡ ಅಂತರವಿದೆ. ಇಲ್ಲಿಂದ ಬರಬೇಕೆಂದು ಬಯಸುವವರಿಗೂ ಅಲ್ಲಿಗೆ ಬರಲಾಗುವುದಿಲ್ಲ, ಹಾಗೆಯೇ ಅಲ್ಲಿನವರೂ ಇಲ್ಲಿಗೆ ಬರಲಾಗುವುದಿಲ್ಲ" ಎಂದನು.

ಆಗ ಆ ಭೋಗಿ "ತಂದೆಯೇ, ಅವನನ್ನು ನನ್ನ ತಂದೆಯ ಮನೆಗಾದರೂ ಕಳುಹಿಸು. ಅಲ್ಲಿ ನನ್ನ ಐವರು ಸೋದರರಿದ್ದಾರೆ. ಅವರಾದರೂ ಇಲ್ಲಿಗೆ ಬರದಂತೆ ಅವರಿಗೆ ತಿಳಿವಳಿಕೆ ಕೊಡಲಿ" ಎಂದನು. ಅದಕ್ಕೆ ದೇವರು "ಮೋಶೆಯ ಶಾಸ್ತ್ರಗಳಿವೆ. ಪ್ರವಾದಿಗಳ ವಚನಗಳಿವೆ. ಅದನ್ನು ಕೇಳಲಿ" ಎಂದನು. ಅದಕ್ಕೆ ಆ ಭೋಗಿ "ಇಲ್ಲ, ತಂದೆಯೇ, ಸತ್ತವನೊಬ್ಬನು ಬದುಕಿ ಬಂದರೆ ಅವರು ಪಶ್ಚಾತ್ತಾಪಪಡುವರು" ಎಂದನು. ಅದಕ್ಕೆ ದೇವರು "ಮೋಶೆಯೂ ಪ್ರವಾದಿಗಳೂ ಹೇಳಿದುದನ್ನು ಕೇಳದವರು ಸತ್ತು ಬದುಕಿದವನನ್ನೂ ಕೇಳುವುದಿಲ್ಲ" ಎಂದನು.

## ಮನೆವಾರ್ತೆಯವನ ಬುದ್ಧಿವಂತಿಕೆ

ನಿರ್ಗತಿಕರಾದ ಕಾಲದಲ್ಲಿ ಸಹಾಯಮಾಡತಕ್ಕಂತಹ ಸ್ನೇಹಿತರನ್ನು ಅಧಿಕಾರದಲ್ಲಿರುವಾಗಲೇ ಸಂಪಾದಿಸಿಕೊಳ್ಳಬೇಕೆಂದು ಯೇಸು ಒಮ್ಮೆ ಈ ಸಾಮತಿ ಹೇಳಿದನು:

ಒಬ್ಬ ಹಣವಂತನಿಗೆ ಒಬ್ಬ ಮನೆವಾರ್ತೆಯವನಿದ್ದ. ಅವನು ಯಜಮಾನನ ಸ್ವತ್ತನ್ನು ಪೋಲುಮಾಡುವನೆಂದು ದೂರು ಬಂದಿತು. ಆಗ ಯಜಮಾನನು ಅವನನ್ನು ಕರೆದು, "ನಿನ್ನ ಮೇಲೆ ಈ ದೂರು ಬಂದಿದೆ. ನೀನು ಮನೆವಾರ್ತೆಯ ಲೆಕ್ಕವನ್ನು ಒಪ್ಪಿಸಿಬಿಡು. ಇನ್ನು ಮುಂದೆ ನಿನ್ನ ಮನೆವಾರ್ತೆ ಬೇಡ" ಎಂದನು.

ಆಗ ಆ ಮನೆವಾರ್ತೆಯವನು "ನನ್ನ ಮನೆವಾರ್ತೆ ತಪ್ಪಿದರೆ ಮುಂದೇನು ಮಾಡಲಿ? ನಾನು ಮಣ್ಣು ಅಗೆಯಲಾರೆ, ಭಿಕ್ಷೆಯೆತ್ತಲು ನಾಚಿಕೆಯಾಗುತ್ತದೆ. ಇರಲಿ, ಹೀಗೆ ಮಾಡುತ್ತೇನೆ: ಈ ಮನೆವಾರ್ತೆ ತಪ್ಪಿದ ಮೇಲೆ ಸಾಲಗಾರರು ತಮ್ಮ ಮನೆಗೆ ನನ್ನನ್ನು ಸೇರಿಸಿಕೊಳ್ಳುವಂತೆ ಮಾಡುತ್ತೇನೆ" ಎಂದುಕೊಂಡನು.

ಅನಂತರ ಅವನು ತನ್ನ ಯಜಮಾನನಿಂದ ಸಾಲಪಡೆದವರನ್ನೆಲ್ಲಾ ಕರೆದನು. 'ನೀನೆಷ್ಟು ಕೊಡಬೇಕು?' ಎಂದು ಒಬ್ಬನನ್ನು ಕೇಳಿದನು. ಅವನು 'ನೂರು ಕಡಾಯಿ ಎಣ್ಣೆ' ಎಂದನು. ಮನೆವಾರ್ತೆಯವನು 'ಇದೊ, ನಿನ್ನ ರಸೀತಿ ಕುಳಿತುಕೊಂಡು, ಐವತ್ತು ಕಡಾಯಿಯೆಂದು ಬರೆ' ಎಂದನು. ಇನ್ನೊಬ್ಬನನ್ನು 'ನೀನೆಷ್ಟು ಕೊಡಬೇಕು?' ಎಂದು ಕೇಳಿದನು. ಅವನು 'ನೂರು ಕಂಡುಗ ಗೋಧಿ' ಎಂದನು. 'ನಿನ್ನ ರಸೀತಿ ತೆಗೆದುಕೊ. ಎಂಬತ್ತು ಎಂದು ಬರೆ' ಎಂದನು.

ಆಗ ಯಜಮಾನನು 'ನೀನು ಬಹು ಜಾಣ' ಎಂದು ಆ ಅನ್ಯಾಯಗಾರನಾದ ಮನೆವಾರ್ತೆಯವನನ್ನು ಹೊಗಳಿದನು.

## ಫರಿಸಾಯನೂ ಸುಂಕದವನೂ

ಫರಿಸಾಯರು ತಾವೇ ನೀತಿವಂತರೆಂದುಕೊಂಡು ಇತರರನ್ನು ಹೀನೈಸುತ್ತಿದ್ದರು. ಅವರಿಗೆ ಯೇಸು ಈ ಸಾಮತಿ ಹೇಳಿದನು:

ದೇವಾಲಯಕ್ಕೆ ಇಬ್ಬರು ಹೋದರು. ಅವರಲ್ಲಿ ಒಬ್ಬನು ಫರಿಸಾಯ, ಇನ್ನೊಬ್ಬನು ಸುಂಕದವ. ಫರಿಸಾಯನು ನಿಂತು, "ದೇವರೆ, ಅನ್ಯಾಯಮಾಡಿ ಸುಂಕ ಸುಲಿಯುವ ಈ ಸುಂಕದವರಂತೆ ನಾನು ಆಗಲಿಲ್ಲವೆಂದು ನಿನ್ನನ್ನು ಸ್ತೋತ್ರಮಾಡುತ್ತೇನೆ. ನಾನು ವಾರಕ್ಕೆ ಎರಡು ಸಲ ಉಪವಾಸಮಾಡುತ್ತೇನೆ. ನನ್ನ ಆಸ್ತಿಯ ಮೇಲೆ ತೆರಿಗೆ ಕೊಡುತ್ತೇನೆ" ಎಂದು ಪ್ರಾರ್ಥನೆಮಾಡಿದನು. ಆದರೆ ಸುಂಕದವನು ದೂರ ನಿಂತು, ಪರಲೋಕದ ಕಡೆಗೆ ಕಣ್ಣುಕೂಡ ಎತ್ತಲಾರದೆ, ಎದೆ ಬಡಿದುಕೊಂಡು, "ದೇವರೆ, ನಾನು ಪಾಪಿ, ನಿನ್ನ ಕರುಣೆ ನನ್ನ ಮೇಲಿರಲಿ" ಎಂದು ಬೇಡಿಕೊಂಡನು.

ಇವರಲ್ಲಿ ಫರಿಸಾಯನಿಗಿಂತ ಸುಂಕದವನಿಗೇ ಸರಿಯಾದ ನ್ಯಾಯ ದೊರಕಿತು. ತನ್ನನ್ನು ತಾನು ಹೊಗಳಿಕೊಳ್ಳುವವನು ಕೆಳಗೆ ಬೀಳುವನು; ತನ್ನನ್ನು ತಾನು ಹೀನೈಸಿಕೊಳ್ಳುವವನು ಮೇಲೇರುವನು.

### ಅಂಜೂರದ ಗಿಡ

ಒಂದು ಸಲ ರೋಮಕರ ಅಧಿಕಾರಿಯಾದ ಪಿಲಾತನು ಗಲಿಲಾಯದವರು ಬಲಿ ಕೊಡುವಾಗ ಅದರ ಜೊತೆಗೆ ಅವರ ರಕ್ತ ಬೆರಸಿದನೆಂದು ಯೇಸು ಕೇಳಿದನು ಆಗ ಸುತ್ತಿನವರನ್ನು ಕುರಿತು, "ಗಲಿಲಾಯದವರು ಮಾತ್ರ ಪಾಪ ಮಾಡಿ ಈ ಫಲವನ್ನನುಭವಿಸಲಿಲ್ಲ ನೀವು ಕೂಡ ಮಾಡಿರುವ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳದಿದ್ದರೆ ನೀವೂ ಹೀಗೆಯೇ ನಾಶವಾಗುವಿರಿ" ಎಂದು ಈ ಸಾಮತಿ ಹೇಳಿದನು:

ಒಬ್ಬನು ತನ್ನ ದ್ರಾಕ್ಷಿ ತೋಟದಲ್ಲಿ ಒಂದು ಅಂಜೂರದ ಗಿಡ ನೆಡಿಸಿದನು. ಎಷ್ಟು ಸಲ ಬಂದರೂ ಅವನು ಅದರಲ್ಲಿ ಹಣ್ಣು ಕಾಣಲಿಲ್ಲ. ಆಗ ಅವನು ತೋಟಗಾರನನ್ನು ಕುರಿತು "ಈ ಮೂರು ವರುಷಗಳಿಂದ ನಾನು ಹಣ್ಣು ಹುಡುಕುತ್ತಾ ಬರುತ್ತಿದ್ದೇನೆ. ಹಣ್ಣೊಂದೂ ಕಾಣಿಸದು. ಆದ್ದರಿಂದ ಇದನ್ನು ಕತ್ತರಿಸು. ಇದು ಭೂಮಿಗೆ ಭಾರ" ಎಂದನು. ಅದಕ್ಕೆ ತೋಟಗಾರನು "ಸ್ವಾಮಿ, ಈ ಯೊಂದು ವರುಷವೂ ಇದು ಇಲ್ಲೇ ಇರಲಿ. ಸುತ್ತಲೂ ಅಗೆದು ಗೊಬ್ಬರ ಹಾಕುವೆನು. ಅದೃಷ್ಟವಿದ್ದು ಹಣ್ಣು ಬಿಟ್ಟೀತು. ಬಿಡದಿದ್ದರೆ ಅನಂತರ ಕಡಿದುಹಾಕಬಹುದು" ಎಂದನು.

### ಪ್ರಾರ್ಥನೆಯ ಸಾಫಲ್ಯ

ಪ್ರಾರ್ಥನೆಯ ಸಾಫಲ್ಯವನ್ನು ಕುರಿತು ಯೇಸು ಒಮ್ಮೆ ಶಿಷ್ಯರಿಗೆ ಹೀಗೆಂದನು:

ನಿಮ್ಮಲ್ಲಿ ಯಾರಾದರೂ ನಡುರಾತ್ರಿಯಲ್ಲಿ ಒಬ್ಬ ಸ್ನೇಹಿತನ ಮನೆಗೆ ಹೋಗುತ್ತೀರಿ. 'ಎಂದೂ ಬರದ ಸ್ನೇಹಿತನೊಬ್ಬನು ಮನೆಗೆ ಬಂದಿದ್ದಾನೆ. ಅವನಿಗೆ ಕೊಡಲು ಮನೆಯಲ್ಲಿ ಏನೂ ಇಲ್ಲ. ಮೂರು ರೊಟ್ಟಿ ಕೊಡು' ಎಂದು ಕೇಳುತ್ತೀರಿ. ಆಗ ಅವನು 'ನನ್ನನ್ನು ಪೀಡಿಸಬೇಡ. ಬಾಗಿಲು ಮುಚ್ಚಿದೆ. ಮಕ್ಕಳು ಮಲಗಿದ್ದಾರೆ. ನಾನು ಎದ್ದು ಬಂದು

ಕೊಡಲಾರೆ' ಎನ್ನುವನು. ಆದರೂ, ಸ್ನೇಹಿತ ಕೇಳಿದನೆಂಬ ಕಾರಣ ದಿಂದ ಅವನು ಎದ್ದು ಬಂದು ಕೊಡದಿದ್ದರೂ, ಪುನಃ ಪುನಃ ಕೇಳುವ ಕಾಟವನ್ನು ತಡೆಯಲಾರದೆ ಎದ್ದುಬಂದು ಕೊಡುತ್ತಾನೆ. ಆದ್ದರಿಂದಲೇ 'ಕೇಳಿರಿ, ಕೊಡುವರು. ಹುಡುಕಿರಿ, ಸಿಕ್ಕುವುದು. ಬಾಗಿಲು ತಟ್ಟಿರಿ, ತೆರೆಯುವುದು' ಎಂದು ನಾನು ಹೇಳುತ್ತೇನೆ.

ಇನ್ನೊಂದು ಸಲ ಯೇಸು ಅದೇ ವಿಷಯವಾಗಿ ಇನ್ನೊಂದು ಸಾಮತಿ ಹೇಳಿದನು:

ಒಂದೂರಿನಲ್ಲಿ ಒಬ್ಬ ನ್ಯಾಯಾಧಿಪತಿಯಿದ್ದ. ಅವನು ದೇವರಿಗೆ ಹೆದರುತ್ತಿರಲಿಲ್ಲ, ಜನರನ್ನು ಲಕ್ಷಿಸುತ್ತಿರಲಿಲ್ಲ. ಅದೇ ಊರಿನಲ್ಲಿ ಒಬ್ಬಳು ವಿಧವೆಯಿದ್ದಳು. ಅವಳು 'ನನಗೆ ಅನ್ಯಾಯಮಾಡಿದವನನ್ನು ಶಿಕ್ಷಿಸು' ಎಂದು ಅವನ ಬಳಿ ಬಂದಳು. ಅವನು ಕೆಲವು ಕಾಲ ಅವಳ ಪ್ರಾರ್ಥನೆಯನ್ನು ಗಮನಿಸಲಿಲ್ಲ. ಅನಂತರ 'ನಾನು ದೇವರಿಗೆ ಹೆದರದಿದ್ದರೂ, ಜನರನ್ನು ಲಕ್ಷ್ಯಮಾಡದಿದ್ದರೂ ಈ ವಿಧವೆ ಬಂದೂ ಬಂದೂ ಕಾಡುವುದರಿಂದ ಇವಳಿಗೆ ಅನ್ಯಾಯಮಾಡಿದವನನ್ನು ಶಿಕ್ಷಿಸುವೆನು. ಇಲ್ಲದಿದ್ದರೆ ಸುಮ್ಮನೆ ಬೇಸರಪಡಿಸಿಯಾಳು' ಎಂದುಕೊಂಡನು.

ಆ ಅನ್ಯಾಯಗಾರನಾದ ನ್ಯಾಯಾಧಿಪತಿ ಹೇಳಿದ್ದನ್ನು ಕೇಳಿದಿರಿ. ಎಂದ ಮೇಲೆ, ದೇವರಿಗೆ ಬಹಳ ಬೇಕಾದವರು ಹಗಲೂ ರಾತ್ರಿ ಅವನಿಗೆ ಮೊರೆಯಿಡುತ್ತಿದ್ದರೆ, ಅವನು ಎಷ್ಟುಕಾಲ ಸಹಿಸಿಯಾನು, ಅನ್ಯಾಯ ಮಾಡಿದವರನ್ನು ಬೇಗನೆಯೇ ಶಿಕ್ಷಿಸುವನು.

## ಮೊದಲನೆಯ ಪೀಠ

ಯೇಸು ಒಬ್ಬ ಫರಿಸಾಯನ ಮನೆಗೆ ಊಟಕ್ಕೆ ಹೋದನು. ಊಟಕ್ಕೆ ಬಂದವರು ಮೊದಲನೆಯ ಪೀಠವನ್ನೇ ಆರಿಸಿಕೊಳ್ಳುವುದನ್ನು ಕಂಡು ಯೇಸು ಅವರಿಗೆ ಒಂದು ಸಾಮತಿ ಹೇಳಿದನು:

ಮದುವೆಗೆ ಕರೆದರೆ, ಹೋಗಿ, ಮೊದಲನೆಯ ಪೀಠದಲ್ಲಿ ಕುಳಿತು ಕೊಳ್ಳಬೇಡಿ. ನಿಮಗಿಂತ ಮರ್ಯಾದೆಯವರನ್ನು ಕರೆದಿದ್ದರೂ ಕರೆದಿದ್ದಾರು. ನಿಮ್ಮಿಬ್ಬರನ್ನೂ ಕರೆದವನು ಬಂದು, 'ಇವನಿಗೆ ಆ ಪೀಠ ಕೊಡು'

ಎಂದಾನು. ಆಗ ನಾಚಿಕೆಯಿಂದ ಕಟ್ಟಕಡೆಯ ಪೀಠಕ್ಕೆ ಹೋಗಬೇಕಾಗುವುದು. ಅದಕ್ಕೆ ಬದಲು, ಕರೆದಾಗ ಹೋಗಿ ಕಟ್ಟಕಡೆಯಲ್ಲಿ ಕುಳಿತುಕೊಳ್ಳಿರಿ. ನಿಮ್ಮನ್ನು ಕರೆದವನು ಬಂದು, "ಮೇಲೆ ಬಾರಪ್ಪ" ಎನ್ನಲಿ. ಜೊತೆಗೆ ಕುಳಿತವರ ಎದುರಿಗೆ ನಿಮಗೆ ಮಾನಬರುತ್ತದೆ.

ತನ್ನನ್ನು ತಾನೇ ಮೇಲೇರಿಸಿಕೊಂಡವನು ಕೆಳಗೆ ಬೀಳುತ್ತಾನೆ, ತನ್ನನ್ನು ತಾನೇ ಕೆಳಗಿಳಿಸಿಕೊಂಡವನು ಮೇಲೇರುತ್ತಾನೆ.

## ಒಳ್ಳೆಯ ಕುರುಬ

ಯೇಸು ಅನೇಕ ಅದ್ಭುತಕಾರ್ಯಗಳನ್ನು ಮಾಡಿದನು, ಅನೇಕ ಸಾಮತಿಗಳ ಮೂಲಕ ಧರ್ಮವನ್ನು ಬೋಧಿಸಿದನು. ಅವುಗಳನ್ನು ಕಂಡು ಕೇಳಿದವರಲ್ಲಿ ಕೆಲವರು ಯೇಸುವನ್ನು ನಂಬಿ ಉತ್ತಮರಾದರು, ಇನ್ನು ಕೆಲವರು ಅವನಲ್ಲಿ ನಂಬಿಕೆಯಿಲ್ಲದೆ ಅವನನ್ನು ಹಿಂಸಿಸಿದರು. ಆಗ ಯೇಸು ಈ ಸುಂದರವಾದ ಸಾಮತಿಯನ್ನು ಹೇಳಿದನು:

"ರೊಪ್ಪಕ್ಕೆ ಬಾಗಿಲು ಮೂಲಕವಾಗಿ ಬರದೆ ಬೇರೆ ದಾರಿಯಿಂದ ಹತ್ತಿಬರುವವನು ಕಳ್ಳ. ಬಾಗಿಲು ಮೂಲಕ ಬರುವವನೇ ಆ ಕುರಿಗಳ ಕುರುಬ. ಕಾವಲುಗಾರನು ಅವನಿಗೆ ಬಾಗಿಲು ತೆಗೆಯುವನು, ಕುರಿಗಳು ಅವನ ಕೂಗು ಕೇಳುವುವು. ಅವನು ತನ್ನ ಕುರಿಗಳನ್ನು ಹೆಸರುಹಿಡಿದು ಕರೆದು ಮೇಯಲು ಅಟ್ಟಿಕೊಂಡು ಹೋಗುವನು. ಅವನು ಕುರಿಗಳ ಮುಂದೆ ಹೋಗುವನು, ಅವು ಅವನ ಹಿಂದೆ ಹೋಗುವುವು. ಏಕೆಂದರೆ ಅವುಗಳಿಗೆ ಅವನ ಧ್ವನಿ ಗೊತ್ತು. ಗುರುತಿಲ್ಲದವನನ್ನು ಅವು ಹಿಂಬಾಲಿಸುವುದಿಲ್ಲ. ಅವನಿಂದ ದೂರ ಓಡಿಹೋಗುತ್ತವೆ. ಅನ್ಯರ ಧ್ವನಿ ಅವಕ್ಕೆ ಗೊತ್ತಿಲ್ಲ" ಎಂದು ಯೇಸು ಹೇಳಿದನು.

ಅನಂತರ ಅದನ್ನು ವಿವರಿಸಿದನು: "ಕುರಿಗಳಿಗೆ ನಾನೇ ಬಾಗಿಲು. ನನಗಿಂತ ಮುಂಚೆ ಬಂದವರೆಲ್ಲಾ ಕಳ್ಳರು, ಸುಲಿಗೆ ಮಾಡುವವರು. ಕುರಿಗಳು ಅವರ ಕೂಗಿಗೆ ಕಿವಿ ಕೊಡಲಿಲ್ಲ. ನಾನು ಬಾಗಿಲು. ನನ್ನ ಮೂಲಕವಾಗಿ ಒಳಕ್ಕೆ ಪ್ರವೇಶಿಸಿದವನು ಉಳಿಯುವನು. ಅವನು ಒಳಗೂ ಹೊರಗೂ ಹೋಗಿಬರಬಹುದು. ಅವನಿಗೆ ಮೇವು ಸಿಕ್ಕುತ್ತದೆ.

"ಕಳ್ಳನು ಬರುವುದು ಕಳ್ಳತನಕ್ಕಾಗಿ, ಕೊಲ್ಲುವುದಕ್ಕಾಗಿ, ನಾಶ ಮಾಡುವುದಕ್ಕಾಗಿ ಮಾತ್ರ. ಕುರಿಗಳು ಬದುಕಬೇಕೆಂದು, ಅವು ಬೆಳೆಯಬೇಕೆಂದು ನಾನು ಬಂದಿದ್ದೇನೆ ನಾನು ಒಳ್ಳೆಯ ಕುರುಬ. ಒಳ್ಳೆಯ ಕುರುಬನು ಕುರಿಗಳಿಗಾಗಿ ತನ್ನ ಜೀವ ಕೊಡುತ್ತಾನೆ. ಕುರುಬನಲ್ಲದೆ ಕೂಲಿಯಾಳಾದವನು, ಕುರಿ ತನ್ನ ಸ್ವಂತವಲ್ಲದಿದ್ದರೆ, ತೋಳ ಬರುವುದನ್ನು ಕಂಡು ಕುರಿಗಳನ್ನು ಬಿಟ್ಟು ಓಡುವನು. ತೋಳ ಬಂದು ಕುರಿಯನ್ನು ಹಿಡಿದು ಕೆದರಿಕ್ಕುವುದು. ಕೂಲಿಯಾಳು ಏಕೆ ಓಡುವನು? ಅವನು ಕೂಲಿಯಾಳು, ಕುರಿಗಳ ಚಿಂತೆ ಅವನಿಗಿಲ್ಲ.

"ನಾನಾದರೋ ಒಳ್ಳೆಯ ಕುರುಬ. ನನಗೆ ನನ್ನ ಕುರಿ ಗೊತ್ತು, ನನ್ನ ಕುರಿಗೆ ನಾನು ಗೊತ್ತು. ನನ್ನ ಕುರಿಗಳಿಗೋಸ್ಕರ ನನ್ನ ಜೀವವನ್ನಾದರೂ ಕೊಡುತ್ತೇನೆ.

"ಈ ಹಿಂಡಿಗೆ ಸೇರದ ಇತರ ಕುರಿಗಳೂ ಇವೆ. ಅವುಗಳನ್ನೂ ನಾನು ಕರೆತರಬೇಕು, ಅವೂ ನನ್ನ ಕೂಗು ಕೇಳಬೇಕು. ಅನಂತರ ಒಂದು ಹಿಂಡಾಗುವುದು, ಒಬ್ಬ ಕುರುಬನಾಗುವನು.

"ಈ ಕುರಿಗಳಿಗಾಗಿ ನಾನು ಪ್ರಾಣ ಕೊಡುವುದರಿಂದಲೇ ನನ್ನ ತಂದೆಗೆ ನನ್ನಲ್ಲಿ ಪ್ರೀತಿ. ನನ್ನ ಪ್ರಾಣ ಯಾರೂ ತೆಗೆಯಲಾರರು. ಅದನ್ನು ನಾನೇ ಬಿಡುತ್ತೇನೆ. ಅದನ್ನು ಬಿಡಲೂ ನನಗೆ ಶಕ್ತಿಯಿದೆ, ಬಿಟ್ಟುದನ್ನು ಪಡೆಯಲೂ ಶಕ್ತಿಯಿದೆ. ಈ ಅಪ್ಪಣೆಯನ್ನು ನನ್ನ ತಂದೆಯಿಂದ ನಾನು ಪಡೆದಿದ್ದೇನೆ."

# ಯೇಸುವಿನ ಕಡೆಯ ದಿನಗಳು

## ಕರುಣಾಕರ ಯೇಸು

ಯೇಸು ಹೀಗೆಯೇ ಉಪದೇಶಮಾಡುತ್ತಾ ತಿರುಗಾಡುತ್ತಿರುವಾಗ ಯೆಹೂದ್ಯರದೊಂದು ಜಾತ್ರೆ ಬಂದಿತು. ಆಗ ಯೇಸುವಿನ ತಮ್ಮಂದಿರು ಅವನನ್ನು ಕುರಿತು, "ಯೂದಾಯಕ್ಕೆ ಹೋಗು. ನೀನು ಮಾಡುವ ಕೆಲಸಗಳನ್ನು ನಿನ್ನ ಶಿಷ್ಯರೂ ನೋಡಲಿ. ಗುಟ್ಟಾಗಿ ತಾನು ಏನು ಮಾಡಿದರೂ ಅದು ಎಲ್ಲರಿಗೂ ತಿಳಿಯಲೆಂದು ಪ್ರತಿಯೊಬ್ಬನಿಗೂ ಆಸೆ. ನೀನು ಇಂಥ ಕಾರ್ಯಗಳನ್ನು ಮಾಡುವವನೆಂದು ಲೋಕಕ್ಕೆ ತಿಳಿಯಲಿ" ಎಂದರು. ಅವನ ತಮ್ಮಂದಿರಿಗೂ ಅವನಲ್ಲಿ ನಂಬಿಕೆಯಿರಲಿಲ್ಲ.

ಯೇಸು ತಾನು ಜಾತ್ರೆಗೆ ಹೋಗುವುದನ್ನು ಅವರಿಗೆ ತಿಳಿಸಲಿಲ್ಲ. ಅವರೆಲ್ಲರೂ ಹೋದಮೇಲೆ ತಾನೂ ಗುಟ್ಟಾಗಿ ಹೋದನು. ಜಾತ್ರೆಯ ಕಾಲದಲ್ಲಿ ಯೆಹೂದ್ಯರು ಅವನನ್ನು ಹುಡುಕಿದರು. ಕೆಲವರು ಅವನನ್ನು ಒಳ್ಳೆಯವನೆಂದರು, ಕೆಲವರು ಅವನು ಜನರನ್ನು ಕೆಡಿಸುತ್ತಿರುವನೆಂದು ಒಳಗೊಳಗೆಯೆ ಎಂದುಕೊಂಡರು. ಜಾತ್ರೆಯ ಕಾಲದಲ್ಲಿ ಯೇಸು ಅವರ ದೇವಾಲಯಗಳಿಗೆ ಹೋಗಿ ಉಪದೇಶ ಮಾಡಿದನು. ಯೆಹೂದ್ಯ ಶಾಸ್ತ್ರಿಗಳೂ ಫರಿಸಾಯರೂ ಅವನಲ್ಲಿ ತಪ್ಪು ಸಿಕ್ಕೀತೇ ಎಂದು ಕಾಯುತ್ತಿದ್ದರು.

ಒಂದು ದಿನ ಯೇಸು ದೇವಾಲಯದಲ್ಲಿರುವಾಗ ಫರಿಸಾಯರೂ ಯೆಹೂದ್ಯಶಾಸ್ತ್ರಿಗಳೂ ಒಬ್ಬ ವ್ಯಭಿಚಾರಿಣಿಯನ್ನು ಎಳೆದುಕೊಂಡು ಬಂದು ನಿಲ್ಲಿಸಿ, "ಗುರುವೆ, ಇವಳು ವ್ಯಭಿಚಾರ ಮಾಡಿದ್ದಾಳೆ ಇಂಥವರನ್ನು ಕಲ್ಲಿನಿಂದ ಹೊಡೆಯಬೇಕೆಂದು ಮೋಶೆಯ ಶಾಸ್ತ್ರವಿದೆ. ನೀನೇನು ಹೇಳುವೆ?" ಎಂದರು. ಅವನಲ್ಲಿ ದೋಷಾರೋಪಣೆ ಮಾಡಲು ಏನಾದರೂ ನೆಪ ಅವರಿಗೆ ಬೇಕಾಗಿತ್ತು.

ಆದರೆ ಯೇಸು ತಲೆಯನ್ನು ತಗ್ಗಿಸಿ ನೆಲದ ಮೇಲೆ ಬರೆಯುತ್ತಾ ಕುಳಿತನು. ಅವರು ಪುನಃ ತನ್ನನ್ನು ಕೇಳತೊಡಗಿದಾಗ, ತಲೆಯೆತ್ತಿ 'ನಿಮ್ಮಲ್ಲಿ ಪಾಪವಿಲ್ಲದವನು ಆವನೋ ಅವನು ಇವಳಿಗೆ ಮೊದಲನೆಯ

ಕಲ್ಲು ಬೀರಲಿ ’ ಎಂದನು. ಎಂದು, ಪುನಃ ಬಗ್ಗಿ ನೆಲದ ಮೇಲೆ ಬರೆಯುತ್ತಾ ಕುಳಿತನು.

ಅವರು ಅದನ್ನು ಕೇಳಿ ಒಬ್ಬೊಬ್ಬರಾಗಿ ಹೊರಟುಹೋದರು. ಅವರ ಹಿರಿಯನು ಎಲ್ಲರಿಗಿಂತ ಮೊದಲೇ ಹೊರಟನು. ಯೇಸು ಮಾತ್ರ ಉಳಿದನು. ನಡುವೆ ಆ ಹೆಂಗುಸು ನಿಂತಿದ್ದಳು.

ಆಗ ಯೇಸು ಮೇಲೆದ್ದು, “ ತಾಯಿ, ನೀನು ತಪ್ಪುಮಾಡಿದೆ ಯೆಂದವರು ಎಲ್ಲಿ ? ನಿನಗೆ ಯಾರೂ ಶಿಕ್ಷೆ ವಿಧಿಸಲಿಲ್ಲವೊ ? ” ಎಂದನು.

“ ಯಾರೂ ಇಲ್ಲ ” ಎಂದಳು ಆಕೆ.

ಆಗ ಯೇಸು “ ನಾನೂ ನಿನ್ನನ್ನು ಶಿಕ್ಷಿಸುವುದಿಲ್ಲ. ಹೋಗು, ಇನ್ನು ಪಾಪಮಾಡಬೇಡ ” ಎಂದನು.

## ಯೆಹೂದ್ಯರ ತೀರ್ಮಾನ

ಮುಂದೆ ಯೇಸು ಒಬ್ಬ ಹುಟ್ಟುಕುರುಡನಿಗೆ ಕಣ್ಣು ದಯೆಪಾಲಿಸಿದನು. ಆ ದಿವಸ ಸಬ್ಬತ್‌ದಿನವಾದುದರಿಂದ ಪುನಃ ಯೆಹೂದ್ಯರು ರೇಗಿದರು, ಕಣ್ಣುಪಡೆದವನಿಗೆ ಬಹಿಷ್ಕಾರ ಹಾಕಿದರು. ಯೇಸು ಅವನನ್ನು ಸಂತೈಸಿದನು, ‘ ಸಬ್ಬತ್ ದಿನದಲ್ಲೂ ಸತ್ಕಾರ್ಯ ಮಾಡಬಹುದು ’ ಎಂದನು. ಅದಕ್ಕೆ ಯೆಹೂದ್ಯರು ಅವನಿಗೆ ಹೊಡೆಯಬೇಕೆಂದು ಕಲ್ಲೆತ್ತಿಕೊಂಡರು.

ಆಗ ಯೇಸು “ ನಾನು ನನ್ನ ತಂದೆಯಿಂದ ಶಕ್ತಿ ಪಡೆದು ಅನೇಕ ಸತ್ಕಾರ್ಯಗಳನ್ನು ಮಾಡಿದ್ದೇನೆ. ಅವುಗಳಲ್ಲಿ ಯಾವುದಕ್ಕಾಗಿ ನನಗೆ ಕಲ್ಲು ಬೀರುವಿರಿ ? ” ಎಂದನು.

ಅದಕ್ಕೆ ಅವರು “ ಸತ್ಕಾರ್ಯಕ್ಕಾಗಿ ನಾವು ಕಲ್ಲು ಬೀರುವುದಿಲ್ಲ. ದೈವದೂಷಣೆಗಾಗಿ ಬೀರುತ್ತೇವೆ. ದೇವರ ಸಮುಕ್ಕೆ ನಿನ್ನನ್ನು ಏರಿಸಿಕೊಂಡುದಕ್ಕಾಗಿ ಬೀರುತ್ತೇವೆ ” ಎಂದರು.

ಅನಂತರ ಅವರು ಯೇಸುವನ್ನು ಹಿಡಿಯಲು ಯತ್ನಿಸಿದರು. ಆದರೆ ಅವನು ತಪ್ಪಿಸಿಕೊಂಡು ಯೋರ್ದನಿನ ಆಚೆಗೆ ಹೋದನು.

ಆ ಸಮಯದಲ್ಲಿ ಲಾಜರನೆಂಬವನು ಕಾಯಿಲೆಬಿದ್ದನು. ಹಿಂದೆ ಯೇಸುವಿನ ಕಾಲನ್ನು ಕಣ್ಣೀರಿನಿಂದ ತೊಳೆದು ಕೂದಲಿನಿಂದ ಒರಸಿ

ತೈಲ ಹಚ್ಚಿದ ಮರಿಯಳ ಸಹೋದರನು ಈ ಲಾಜರನು. ಅವನ ಕಾಯಿಲೆಯನ್ನು ವಾಸಿಮಾಡುವುದಕ್ಕಾಗಿ ಯೇಸು ಯೂದಾಯಕ್ಕೆ ಹೊರಟನು. "ಈಗ ತಾನೆ ಯೆಹೂದ್ಯರು ನಿನಗೆ ಕಲ್ಲುಬೀರಲು ಬಂದಿದ್ದರಲ್ಲ?" ಎಂದು ಶಿಷ್ಯರು ಅವನನ್ನು ತಡೆಯಲು ಯತ್ನಿಸಿದರು. ಆದರೂ ಯೇಸು ಹೋದನು. ಹೋಗುವ ವೇಳೆಗೆ ಲಾಜರನು ಸತ್ತು ನಾಲ್ಕು ದಿನವಾಗಿತ್ತು. "ಅವನು ಸತ್ತಿಲ್ಲ, ನಿದ್ರೆಮಾಡುತ್ತಿದ್ದಾನೆ" ಎಂದು ಯೇಸು ಅವನ ಸಮಾಧಿಯ ಬಳಿಗೆ ಹೋಗಿ, "ಎದ್ದು ಬಾ, ಲಾಜರ" ಎಂದನು. ಲಾಜರನು ಎದ್ದು ಬಂದನು.

ಆ ಅದ್ಭುತ ಊರೊಳಗೆಲ್ಲಾ ಹಬ್ಬಿತು. ಆಗ ಯೆಹೂದ್ಯರ ಮುಖ್ಯ ಅರ್ಚಕರೂ ಫರಿಸಾಯರೂ ಸಭೆ ಸೇರಿ, "ಇವನು ಇಷ್ಟು ಅದ್ಭುತ ಕಾರ್ಯ ಮಾಡುತ್ತಾನೆ, ಏನು ಮಾಡೋಣ? ಇವನನ್ನು ಸುಮ್ಮನೆ ಬಿಟ್ಟರೆ, ಜನರೆಲ್ಲರೂ ಇವನನ್ನೇ ನಂಬುವರು. ಆಗ ರೋಮಕರು ಬಂದು ನಮ್ಮ ದೇಶವನ್ನು ನಾಶಪಡಿಸುವರು" ಎಂದು ಆಲೋಚನೆ ಮಾಡಿದರು.

ಆಗ, ಆ ವರುಷಕ್ಕೆ ಮುಖ್ಯ ಅರ್ಚಕನಾಗಿದ್ದ ಕಾಯಫನೆಂಬವನು "ನಿಮಗೇನೂ ತಿಳಿಯದು. ಜನವೆಲ್ಲಾ ನಾಶವಾಗುವುದಕ್ಕಿಂತ ಇಷ್ಟು ಜನಕ್ಕಾಗಿ ಒಬ್ಬನು ನಾಶವಾಗುವುದೇ ಹಿತವೆಂಬುದು ನಿಮಗೆ ತಿಳಿಯದು" ಎಂದನು.

ಅಂದಿನಿಂದ ಅವರೆಲ್ಲರೂ ಯೇಸುವನ್ನು ಕೊಲ್ಲಲು ತೀರ್ಮಾನಿಸಿ ಹೊಂಚುಹಾಕುತ್ತಿದ್ದರು. ಯೇಸು ಕೂಡ ಯೆಹೂದ್ಯರ ನಡುವೆ ಓಡಾಡುವುದನ್ನು ಬಿಟ್ಟು ಎಫ್ರಾಯಿಮ್ ಎಂಬ ಊರಿನ ಬಳಿಯ ಕಾಡಿಗೆಹೋಗಿ ತನ್ನ ಶಿಷ್ಯರೊಡನೆ ವಾಸಿಸಿದನು.

## ಯೆರೂಸಲೇಮಿನ ದಾರಿಯಲ್ಲಿ

ಯೇಸು ಶಿಲುಬೆಯ ಮೇಲೆ ಏರಿ ಪರಲೋಕವನ್ನು ಸೇರುವ ದಿನ ಸಮೀಪಿಸುತ್ತಾ ಬಂತು. ಅದಕ್ಕಾಗಿ ಯೇಸು ಯೆರೂಸಲೇಮಿಗೆ ಹೋಗಲು ಮನಸ್ಸು ದೃಢಮಾಡಿಕೊಂಡು ತನ್ನ ಶಿಷ್ಯರನ್ನು ಮುಂದಾಗಿ ಕಳಿಸಿದನು, ತಾನು ಬಳಿಕ ಹೋದನು.

ದಾರಿಯಲ್ಲಿ ಸಮಾರಿಯಾನಗರವೊಂದಕ್ಕೆ ಬಂದಾಗ ಅಲ್ಲಿನವರು ಅವನನ್ನು ಸ್ವಾಗತಿಸಲಿಲ್ಲ. ಆಗ ಅವನ ಶಿಷ್ಯರಾದ ಯಾಕೋಬ ಯೋಹಾನರು "ಸ್ವಾಮಿ, ಆಕಾಶದಿಂದ ಅಗ್ನಿಯ ಮಳೆ ಕರೆಸಿ ಈ ಊರನ್ನು ಸುಟ್ಟುಬಿಡೋಣವೆ?" ಎಂದರು. ಯೇಸು ಅವರನ್ನು ಗದರಿಸಿಕೊಂಡು, "ಮನುಷ್ಯಕುಮಾರನು ಆತ್ಮಗಳನ್ನು ನಾಶಮಾಡಲು ಬಂದಿಲ್ಲ, ಉದ್ಧಾರಮಾಡಲು ಬಂದಿದ್ದಾನೆ" ಎಂದು ಮುಂದಿನ ಊರಿಗೆ ಹೋದನು.

ಇನ್ನೊಂದು ಊರಿನ ಸಭಾಮಂದಿರದಲ್ಲಿ ಯೇಸು ಒಂದು ಸಬ್ಬತ್ ದಿನದಂದು ಉಪದೇಶಮಾಡುತ್ತಿದ್ದನು ಅಲ್ಲೊಬ್ಬಳು ಹೆಂಗುಸು; ಹದಿನೆಂಟುವರ್ಷಗಳಿಂದ ಅವಳನ್ನು ದೆವ್ವ ಕಾಡುತ್ತಿತ್ತು. ಅವಳ ಮೈ ಬಗ್ಗಿಹೋಗಿತ್ತು ಯೇಸು ಅವಳನ್ನು ಕರೆದು, 'ಅಮ್ಮಾ, ನಿನ್ನ ರೋಗ ಬಿಟ್ಟಿತು' ಎಂದು ಅವಳನ್ನು ಮುಟ್ಟಿದನು. ಅವಳು ನೆಟ್ಟಗಾದಳು. ಆಗ ಆ ಸಭಾಮಂಟಪದ ಅಧಿಕಾರಿಯು ಅದನ್ನು ಕಂಡು, "ಕೆಲಸ ಮಾಡಬೇಕಾದರೆ ಆರು ದಿನಗಳಿಲ್ಲವೆ? ಆ ದಿವಸ ಬಂದು ಗುಣ ಪಡೆಯಿರಿ. ಸಬ್ಬತ್‌ದಿನದಂದು ಬೇಡ" ಎಂದನು ಅದಕ್ಕೆ ಯೇಸು "ಓ ಕಪಟಿಗಳೆ, ನಿಮ್ಮಲ್ಲಿ ಪ್ರತಿಯೊಬ್ಬನೂ ಸಬ್ಬತ್‌ದಿನದಲ್ಲಿ ಕೂಡ ತನ್ನ ಎತ್ತುಕತ್ತೆಗಳನ್ನು ಬಿಚ್ಚಿ ನೀರು ಕುಡಿಯಲು ಒಯ್ಯುವುದಿಲ್ಲವೆ? ಹದಿನೆಂಟು ವರ್ಷಗಳಿಂದ ಸೈತಾನನಿಗೆ ಕಟ್ಟುಬಿದ್ದಿದ್ದ ಇವಳು ಈ ಸಬ್ಬತ್‌ದಿನದಂದು ಬಿಡುಗಡೆ ಪಡೆಯಬಾರದೆ?" ಎಂದನು. ಯೇಸುವಿನ ಶತ್ರುಗಳು ನಾಚಿಕೆಯಿಂದ ಸುಮ್ಮನಾದರು.

ಅಲ್ಲಿಂದ ಮುಂದೆ ಹೋಗುವಾಗ, ಅವಕಾಶವಿದ್ದ ಹಾಗೆಲ್ಲಾ ಯೇಸು ತನ್ನ ಪ್ರಸಿದ್ಧವಾದ ಸಾಮತಿಗಳ ಮೂಲಕ ಜನರಿಗೆ ಧರ್ಮವನ್ನು ಬೋಧಿಸಿದನು. ತನ್ನನ್ನು ನಂಬಿ ಬಳಿಗೆ ಬಂದ ದೀನರನ್ನೆಲ್ಲಾ ಉದ್ಧಾರ ಮಾಡಿದನು, ಪರಲೋಕದ ರಾಜ್ಯ ಕೈಸಾರುತ್ತಿದೆಯೆಂದು ಸಾರಿದನು.

ಫರಿಸಾಯರು ಅವನನ್ನು ಕೇಳಿದರು: "ಪರಲೋಕದ ರಾಜ್ಯ ಎಂದು ಬರುವುದು?" ಎಂದು. ಅದಕ್ಕೆ ಯೇಸು "ಕಾಯುತ್ತಾ ಕುಳಿತಿದ್ದರೆ ಪರಲೋಕದ ರಾಜ್ಯ ಬರುವುದಿಲ್ಲ. ಪರಲೋಕದ ರಾಜ್ಯ 'ಅಲ್ಲಿದೆ',

'ಇಲ್ಲಿದೆ' ಎಂದು ಹೇಳುವಂತಿಲ್ಲ. ಪರಲೋಕದ ರಾಜ್ಯ ನಿಮ್ಮ ಒಳಗಡೆಯೇ ಇದೆ, ನೋಡಿ" ಎಂದನು.

## ಗಲಿಲಾಯದಿಂದ ಮುಂದೆ

ಮುಂದೆ ಯೇಸು ಗಲಿಲಾಯಕ್ಕೆ ಹೋದಾಗ, ಅವನ ಬಳಿಗೆ ಚಿಕ್ಕ ಮಕ್ಕಳನ್ನು ಕರೆತಂದರು, ಯೇಸು ಅವರನ್ನು ಮುಟ್ಟಿ ಹರಸಲೆಂದು. ಆದರೆ ಶಿಷ್ಯರು ಅವರನ್ನು ಕರೆತಂದುದೇಕೆಂದು ಗದರಿಸಿದರು. ಯೇಸು ಅದನ್ನು ಕಂಡನು, ಅಸಮಾಧಾನಪಟ್ಟನು; "ಮಕ್ಕಳು ನನ್ನ ಬಳಿಗೆ ಬರಲಿ, ಬಿಡಿ. ಅವರನ್ನು ತಡೆಯಬೇಡಿ. ಅವರಂತಹವರಿಗೇ ಪರಲೋಕದ ರಾಜ್ಯ ಸೇರಿದುದು. ಕೇಳಿರಿ, ಚಿಕ್ಕ ಮಗುವಿನಲ್ಲಿ ಪರಲೋಕದ ರಾಜ್ಯವನ್ನು ಕಂಡು ಒಪ್ಪಿಕೊಳ್ಳದವನಿಗೆ ಪರಲೋಕದ ರಾಜ್ಯ ಪ್ರಾಪ್ತಿಯಾಗದು" ಎಂದನು ಅನಂತರ ಯೇಸು ಆ ಮಕ್ಕಳನ್ನು ತಬ್ಬಿಕೊಂಡು, ಮುದ್ದಿಟ್ಟು, ಆಶೀರ್ವದಿಸಿದನು.

ಅಲ್ಲಿಂದ ಮುಂದೆ ಹೊರಟಾಗ ಒಬ್ಬನು ಬಂದು, "ನೀನು ಒಳ್ಳೆಯ ಗುರು. ನಾನು ನಿತ್ಯಜೀವಿಯಾಗಬೇಕಾದರೆ ಏನು ಮಾಡಬೇಕು?" ಎಂದು ಕೇಳಿದನು. ಆದಕ್ಕೆ ಯೇಸು "ನನ್ನನ್ನು ಏಕೆ ಒಳ್ಳೆಯವನು ಎನ್ನುವೆ? ದೇವರ ಹೊರತು ಯಾರೂ ಒಳ್ಳೆಯವರಿಲ್ಲ. ಆದರೆ ನೀನು ಬದುಕಬೇಕಾದರೆ ದೇವರ ಆಜ್ಞೆಗಳನ್ನು ಪಾಲಿಸು" ಎಂದನು.

"ಯಾವುದು ದೇವರ ಆಜ್ಞೆ?" ಎಂದು ಅವನು ಕೇಳಿದನು. ಆಗ ಯೇಸು "ಕೊಲ್ಲಕೂಡದು ವ್ಯಭಿಚರಿಸಕೂಡದು. ಕದಿಯಕೂಡದು. ಸುಳ್ಳುಸಾಕ್ಷಿ ಹೇಳಕೂಡದು. ತಂದೆತಾಯಿಯರನ್ನು ಮರ್ಯಾದಿಸು. ನೆರೆಯವರನ್ನೂ ನಿನ್ನಂತೆಯೇ ಕಾಣು" ಎಂದನು. ಅದಕ್ಕೆ ಅವನು "ಇವೆಲ್ಲವನ್ನೂ ನಾನು ಚಿಕ್ಕಂದಿನಿಂದಲೂ ಪಾಲಿಸುತ್ತಿದ್ದೇನೆ. ನಾನು ಮಾಡಬೇಕಾದುದು ಇನ್ನೂ ಏನು ಉಳಿದಿದೆ?" ಎಂದು ಕೇಳಿದನು. ಆಗ ಯೇಸು ಅವನನ್ನು ಪ್ರೀತಿಯಿಂದ ನೋಡಿ, "ಒಂದು ಮಾತ್ರ ಉಳಿದಿದೆ. ನೀನು ಪರಿಪೂರ್ಣನಾಗುವುದಾದರೆ, ಹೋಗಿ ನಿನ್ನ ಸರ್ವಸ್ವವನ್ನೂ ಮಾರಿ ಬಡವರಿಗೆ ಕೊಡು. ಆಗ ನಿನಗೆ ಪರಲೋಕದ ಸರ್ವಸ್ವ ಸಿಕ್ಕುವುದು. ಅನಂತರ ಬಂದು ನನ್ನನ್ನು ಹಿಂಬಾಲಿಸು" ಎಂದನು.

ಅದನ್ನು ಕೇಳಿ ಅವನು ದುಃಖದಿಂದ ಹಾಗೇ ಹೋದನು. ಏಕೆಂದರೆ ಅವನಿಗೆ ಅಪಾರವಾದ ಐಶ್ವರ್ಯವಿತ್ತು.

ಯೇಸು ಅದನ್ನು ಕಂಡು ದುಃಖದಿಂದ ಸುತ್ತಲೂ ನೋಡಿ, "ಹಣವಂತರು ಪರಲೋಕದ ರಾಜ್ಯಕ್ಕೆ ಪ್ರವೇಶಿಸುವುದು ಕಷ್ಟ" ಎಂದು ಶಿಷ್ಯರಿಗೆಂದನು ಪುನಃ, "ಮಕ್ಕಳೆ, ಸೂಜಿಯ ಕಣ್ಣಿನಲ್ಲಿಯಾದರೂ ಒಂಟೆ ಹೊಕ್ಕು ಹೋಗಬಹುದು, ಹಣವಂತ ಮಾತ್ರ ದೇವರ ರಾಜ್ಯದೊಳಕ್ಕೆ ದಾಟಿ ಬರಲಾರ" ಎಂದನು.

ಆಗ ದಾರಿಯಲ್ಲಿ ಜೆಬೆದಾಯನ ಮಕ್ಕಳಾದ ಯಾಕೋಬ ಯೋಹಾನರ ತಾಯಿ ಬಂದು, "ಸ್ವಾಮಿ, ನಾವು ಒಂದು ಕೇಳುತ್ತೇವೆ. ನಡಸಿಕೊಡುವೆಯ?" ಎಂದು ಕೇಳಿದಳು "ಏನು ನಡಸಿಕೊಡಲಿ?" ಎಂದನು ಯೇಸು. ಅದಕ್ಕೆ ಅವಳು "ಸ್ವಾಮಿ, ನಿನಗೆ ಮಹಾಪದವಿ ಬಂದಾಗ ಈ ನನ್ನ ಮಕ್ಕಳಲ್ಲಿ ಒಬ್ಬನು ನಿನ್ನ ಬಲಗಡೆಯೂ ಒಬ್ಬನು ನಿನ್ನ ಎಡಗಡೆಯೂ ಕುಳಿತುಕೊಳ್ಳುವಂತೆ ಅನುಗ್ರಹಿಸು" ಎಂದಳು. ಆಗ ಯೇಸು "ನೀನು ಹೇಳುವುದು ಏನೆಂದು ನಿನಗೇ ತಿಳಿಯದು. ನಾನು ಕುಡಿಯುವ ಬಟ್ಟಲಿನಿಂದ ನೀವು ಕುಡಿಯಲಾದೀತೆ? ನಾನು ಪಡೆದ ದೀಕ್ಷಾಸ್ನಾನವನ್ನು ನೀವು ಪಡೆಯಲಾದೀತೆ?" ಎಂದು ಕೇಳಿದನು. ಅದಕ್ಕೆ ಅವರು "ಆಗುವುದು" ಎಂದರು. ಆಗ ಯೇಸು "ಇದು ಎರಡೂ ಆಗಬಹುದು. ಆದರೆ ನನ್ನ ಬಲಗಡೆಯೂ ಎಡಗಡೆಯೂ ಪೀಠ ಕೊಡುವ ಅಧಿಕಾರ ನನಗಿಲ್ಲ, ನನ್ನ ತಂದೆ ಯಾರಿಗೆ ಅದನ್ನು ಸಿದ್ಧಪಡಿಸಿರುವನೋ ಅವನಿಗೆ ಅದು ದೊರಕುವುದು" ಎಂದನು. ಅದನ್ನು ಕೇಳಿ, ಉಳಿದ ಹತ್ತು ಶಿಷ್ಯರಿಗೂ ಅವರ ಮೇಲೆ ಕೋಪ ಬಂದಿತು ಆದರೆ ಯೇಸು ಅವರನ್ನು ಕರೆದು, "ಇತರರಂತೆ ನೀವು ಅಧಿಕಾರ ಮಾಡಲು ಹೋಗಬೇಡಿ. ನಿಮ್ಮಲ್ಲಿ ಅರಸಾಗಬೇಕೆನ್ನುವವನು ನಿಮ್ಮೆಲ್ಲರ ಆಳಾಗಿರಬೇಕು, ಮುಖ್ಯನಾಗಬೇಕೆನ್ನುವವನು ಎಲ್ಲರನ್ನೂ ಸೇವಿಸಬೇಕು ನಾನು ಸೇವೆಗೊಳ್ಳುವುದಕ್ಕೆ ಬಂದವನಲ್ಲ; ಸೇವೆ ಮಾಡುವುದಕ್ಕೆ ಬಂದವನು, ಅನೇಕರ ಉದ್ಧಾರಕ್ಕಾಗಿ ಜೀವ ಕೊಡಲು ಬಂದವನು" ಎಂದನು.

## ಯೆರಿಕೋ ನಗರದಲ್ಲಿ

ಯೇಸು ಯೆರಿಕೋ ನಗರದ ಸಮೀಪಕ್ಕೆ ಬಂದನು. ಅಲ್ಲಿ ದಾರಿಯ ಬಳಿಯಲ್ಲಿ ಕುಳಿತಿದ್ದ ಕುರುಡನೊಬ್ಬನು ಯೇಸುವನ್ನು ನಂಬಿ ಕಣ್ಣು ಪಡೆದನು.

ಯೇಸು ಯೆರಿಕೋ ನಗರದೊಳಕ್ಕೆ ಹೋದನು. ಅವನನ್ನು ನೋಡುವುದಕ್ಕಾಗಿ ದಾರಿಯುದ್ದಕ್ಕೂ ಜನಸಂದಣಿ ಹೆಚ್ಚಾಗಿತ್ತು. ಆ ಊರಿನಲ್ಲಿ ಜಕ್ಕಾಯನೆಂಬವನು ಸುಂಕದವರ ಮುಖಂಡ. ಅವನು ಕುಳ್ಳ. ಯೇಸುವನ್ನು ನೋಡಬೇಕೆಂದು ಅವನಿಗೆ ಆಸೆಯಾಯಿತು. ಗುಂಪಿನ ನಡುವೆ ನಿಂತು ನೋಡುವಷ್ಟು ಎತ್ತರ ತನಗೆ ಇಲ್ಲದ್ದರಿಂದ ಅವನು ಒಂದು ಆಲದ ಮರವನ್ನು ಹತ್ತಿದನು ಯೇಸು ಆ ಮರದ ಹತ್ತಿರ ಬಂದಾಗ, ಮೇಲೆ ಹತ್ತಿ ಕುಳಿತಿದ್ದ ಜಕ್ಕಾಯನನ್ನು ಕಂಡನು; "ಬೇಗ ಇಳಿದು ಬಾ, ಜಕ್ಕಾಯ. ನಾನು ನಿನ್ನ ಮನೆಯಲ್ಲಿ ಇಂದು ತಂಗಬೇಕು" ಎಂದನು ಜಕ್ಕಾಯನು ಇಳಿದುಬಂದು ಸಂತೋಷದಿಂದ ಯೇಸುವನ್ನು ಕರೆದುಕೊಂಡು ಹೋದನು.

ಯೇಸು ಸುಂಕದವನ ಮನೆಗೆ ಹೋದನೆಂದು ಕೆಲವರು ಗೊಣಗಿದರು. ಆದರೆ ಜಕ್ಕಾಯನು "ಸ್ವಾಮಿ, ಇದೋ ನನ್ನ ಆಸ್ತಿಯಲ್ಲಿ ಅರ್ಧವನ್ನು ಬಡವರಿಗೆ ಕೊಡುತ್ತೇನೆ. ನಾನು ಯಾರಿಗಾದರೂ ಅನ್ಯಾಯ ಮಾಡಿದ್ದರೆ ಅವರಿಗೆ ಅದಕ್ಕೆ ನಾಲ್ಕರಷ್ಟು ಒಪ್ಪಿಸುತ್ತೇನೆ" ಎಂದನು. ಆಗ ಯೇಸು "ಈಹೊತ್ತು ನಿನ್ನಿಂದ ಈ ಮನೆ ಉದ್ಧಾರವಾಯಿತು. ನಾನು ಪತಿತರನ್ನು ಹುಡುಕಿ ಉದ್ಧಾರ ಮಾಡುವುದಕ್ಕಾಗಿಯೇ ಬಂದಿರುವುದು" ಎಂದನು.

ಯೆರಿಕೋ ನಗರವನ್ನು ಬಿಟ್ಟುಹೋಗುವಾಗಲೂ ಯೇಸು ಒಬ್ಬ ಕುರುಡನಿಗೆ ಕಣ್ಣು ಕೊಟ್ಟನು.

## ಬೇಥಾನ್ಯದಲ್ಲಿ

ಪಸ್ಕಹಬ್ಬ ಹತ್ತಿರ ಬರುತ್ತಿತ್ತು. ಆದಕ್ಕಾಗಿ ಅನೇಕ ಯೆಹೂದ್ಯರು ಯೆರೂಸಲೇಮಿಗೆ ಬಂದು ಸೇರುತ್ತಿದ್ದರು. ಅಲ್ಲಿ ಅವರು 'ಯೇಸು ಇನ್ನೂ ಹಬ್ಬಕ್ಕೆ ಬರಲಿಲ್ಲವಲ್ಲ?' ಎಂದು ಮಾತನಾಡಿಕೊಳ್ಳುತ್ತಿದ್ದರು.

ಯೇಸುವನ್ನು ಯಾರಾದರೂ ಕಂಡರೆ, ಬಂದು ಅದನ್ನು ತಮಗೆ ತಿಳಿಸಬೇಕೆಂದು ಮುಖ್ಯ ಅರ್ಚಕರೂ ಫರಿಸಾಯರೂ ಆಜ್ಞೆ ಮಾಡಿದ್ದರು. ಯೇಸುವನ್ನು ಹಿಡಿಯಬೇಕೆಂದು ಅವರು ತೀರ್ಮಾನಿಸಿದ್ದರು.

ಪಸ್ಕ ಹಬ್ಬಕ್ಕೆ ಇನ್ನೂ ಆರು ದಿನಗಳಿರುವಾಗ ಯೇಸು ಬೇಥಾನ್ಯವೆಂಬ ಊರಿಗೆ ಬಂದನು. ಅಲ್ಲಿಯೇ ಯೇಸು ಲಾಜರನನ್ನು ಸಮಾಧಿಯಿಂದ ಬದುಕಿಸಿದ್ದು. ಬೇಥಾನ್ಯದಲ್ಲಿ ಯೇಸು ಸೀಮೋನನೆಂಬವನ ಮನೆಯಲ್ಲಿ ಊಟಕ್ಕೆ ನಿಂತನು. ಅಲ್ಲಿಗೆ ಲಾಜರನೂ ಬಂದಿದ್ದನು. ಅವರು ಊಟಕ್ಕೆ ಕುಳಿತಿದ್ದಾಗ ಲಾಜರನ ಸೋದರಿಯಾದ ಮರಿಯಳು ಬಂದಳು ಬಂದು, ತಾನು ತಂದಿದ್ದ ಚಂದ್ರಕಾಂತಶಿಲೆಯ ಭರಣಿಯಿಂದ ಅಮೂಲ್ಯವಾದ ತೈಲವನ್ನು ತೆಗೆದು ಯೇಸುವಿನ ಕಾಲಿಗೆ ಹಚ್ಚಿ, ತನ್ನ ತಲೆಗೂದಲಿನಿಂದ ಅವನ ಕಾಲುಗಳನ್ನು ಒರಸಿದಳು; ಆ ಭರಣಿಯನ್ನು ಒಡೆದು ಅದರೊಳಗಿನದನ್ನು ಅವನ ತಲೆಯ ಮೇಲೆ ಸುರಿದಳು. ಆಗ ಆ ತೈಲದ ಸುವಾಸನೆ ಮನೆಯಲ್ಲೆಲ್ಲಾ ಹರಡಿತು

ಆಗ ಯೇಸುವಿನ ಶಿಷ್ಯನಾದ ಇಸ್ಕರಿಯೋತ ಯೂದನು "ಈ ತೈಲವನ್ನು ಮುನ್ನೂರು ನಾಣ್ಯಗಳಿಗೆ ಮಾರಬಹುದಾಗಿತ್ತಲ್ಲ? ಅದನ್ನು ಬಡವರಿಗೆ ಕೊಡಬಹುದಾಗಿತ್ತಲ್ಲ?" ಎಂದನು. ಬಡವರನ್ನು ಕಂಡರೆ ಅವನಿಗೆ ಇದ್ದ ಪ್ರೀತಿ ಅಷ್ಟರಲ್ಲೇ ಇತ್ತು. ಅವನು ಕಳ್ಳ. ಹಣದ ಚೀಲ ಅವನ ಹತ್ತಿರವೇ ಇತ್ತು ಅದಕ್ಕೇ ಹಾಗೆ ಹೇಳಿದ. ಇತರ ಶಿಷ್ಯರೂ ಹಾಗೆಯೇ ಗೊಣಗಿದರು.

ಆಗ ಯೇಸು "ಅವಳನ್ನು ತಡೆಯಬೇಡಿ. ನನ್ನನ್ನು ಒಪ್ಪಮಾಡುವ ದಿನಕ್ಕಾಗಿ ಅವಳು ಈಗಲೇ ತೈಲ ಹಚ್ಚಿದ್ದಾಳೆ. ಬಡವರು ಸದಾ ನಿಮ್ಮ ಬಳಿಯಲ್ಲಿಯೇ ಇರುತ್ತಾರೆ, ಬೇಕಾದಾಗ ನೀವು ಅವರಿಗೆ ಬೇಕಾದ್ದು ಕೊಡಬಹುದು; ಆದರೆ ನಾನು ಸದಾ ನಿಮ್ಮ ಬಳಿಯಿರುವುದಿಲ್ಲ" ಎಂದನು.

ಯೇಸು ಅಲ್ಲಿರುವುದನ್ನು ಕೇಳಿ ಅವನನ್ನು ಕಾಣಲು ಒಂದು ದೊಡ್ಡ ಗುಂಪು ಬಂತು. ಅವರು ಯೇಸುವನ್ನು ಮಾತ್ರ ಕಾಣಲು

ಬರಲಿಲ್ಲ, ಸತ್ತುಹೋಗಿದ್ದರೂ ಮತ್ತೆ ಬದುಕಿದ ಲಾಜರನನ್ನು ಕಾಣಲೂ ಬಂದರು. ಲಾಜರನ ನಿಮಿತ್ತವಾಗಿ ಅನೇಕರು ಯೇಸುವಿನಲ್ಲಿ ನಂಬಿಕೆಯಿಟ್ಟುದರಿಂದ ಲಾಜರನನ್ನು ಕೊಲ್ಲಬೇಕೆಂದು ಮುಖ್ಯ ಅರ್ಚಕರೂ ಫರಿಸಾಯರೂ ಆಲೋಚಿಸಿದರು.

## ಯೆರೂಸಲೇಮಿನಲ್ಲಿ

ಮಾರನೆಯ ದಿವಸ ಯೇಸು ಯೆರೂಸಲೇಮಿಗೆ ಹೊರಟನು. ಅವನು ಬರುವ ವಾರ್ತೆಯನ್ನು ಕೇಳಿ, ಅನೇಕರು ಖರ್ಜೂರವೃಕ್ಷದ ಗರಿಗಳನ್ನು ಹಿಡಿದುಕೊಂಡು, " ಸ್ವಾಮಿಯ ಹೆಸರಿನಲ್ಲಿ ಬರುವವನಿಗೆ ಶುಭವಾಗಲಿ ! ಇಸ್ರಯೇಲದ ಅರಸನಿಗೆ ಜಯವಾಗಲಿ ! " ಎಂದು ಘೋಷಿಸುತ್ತಾ ಬಂದು ಅವನನ್ನು ಎದುರುಗೊಂಡರು. ಯೇಸು ಒಂದು ಕತ್ತೆಯ ಮರಿಯ ಮೇಲೆ ಕುಳಿತು ಯೆರೂಸಲೇಮನ್ನು ಪ್ರವೇಶಿಸಿದನು. ಅವನ ಶಿಷ್ಯರೂ ಅವನ ಅದ್ಭುತಕಾರ್ಯಗಳನ್ನು ನೋಡಿದ್ದವರೂ ಜಯಕಾರಗಳನ್ನು ಕೂಗುತ್ತಾ ಮುಂದೆ ಹೋದರು. ಫರಿಸಾಯರಲ್ಲಿ ಕೆಲವರು ಆ ಜಯಕಾರಗಳನ್ನು ಕೇಳಲಾರದೆ " ನಿನ್ನ ಶಿಷ್ಯರನ್ನು ಸುಮ್ಮನಿರ ಹೇಳು, ಸ್ವಾಮಿ " ಎಂದರು. ಆದಕ್ಕೆ ಯೇಸು " ಅವರು ಸುಮ್ಮನಾದರೆ ಕಲ್ಲುಗಳು ಕೂಡ ಕೂಗತೊಡಗುವುವು " ಎಂದನು.

ಯೆರೂಸಲೇಮಿನಲ್ಲಿ ಯೇಸು ಇನ್ನೂ ಹಲವು ಅದ್ಭುತ ಕಾರ್ಯಗಳನ್ನು ಮಾಡಿದನು. ' ಅವನ ಮಹಿಮೆಯನ್ನು ಮಕ್ಕಳೂ ಕೀರ್ತಿಸತೊಡಗಿದವು. ತಾವು ಏನೇನು ಮಾಡಿದರೂ ಲೋಕ ಯೇಸುವನ್ನು ಹಿಂಬಾಲಿಸುವುದಲ್ಲಾ ಎಂದು ಫರಿಸಾಯರು ಕೈ ಕೈ ಹಿಸುಕಿಕೊಂಡರು.

ಆ ದಿನ ಸಂಜೆಯವರೆಗೂ ಯೇಸು ಯೆರೂಸಲೇಮಿನಲ್ಲಿದ್ದು ಸಂಜೆಗೆ ಬೇಥಾನ್ಯಕ್ಕೆ ಹೋದನು. ಮಾರನೆಯ ಬೆಳಗ್ಗೆ ಪುನಃ ಯೆರೂಸಲೇಮಿಗೆ ಬರುವಾಗ ಅವನಿಗೆ ಹಸಿವಾಯಿತು. ದೂರದಲ್ಲಿ ಒಂದು ಅಂಜೂರದ ಮರವನ್ನು ಕಂಡು, ಅದರಲ್ಲಿ ಹಣ್ಣಿರಬಹುದೆಂದು ಹತ್ತಿರ ಬಂದನು. ಅದು ಅಂಜೂರಕ್ಕೆ ಅಕಾಲವಾಗಿದ್ದುದರಿಂದ ಅಲ್ಲಿ ಏನೂ ಸಿಕ್ಕಲಿಲ್ಲ. ' ಇನ್ನು ಮುಂದೆ ನಿನ್ನ ಹಣ್ಣನ್ನು ಯಾರೂ ಎಂದೂ

ತಿನ್ನದೆ ಹೋಗಲಿ ' ಎಂದನು ಯೇಸು. ಶಿಷ್ಯರೂ ಅದನ್ನು ಕೇಳಿದರು. ಆ ಗಿಡ ಆಗಲೇ ಒಣಗಿ ಹೋಯಿತು.

ಯೆರೂಸಲೇಮಿನಲ್ಲಿ ಯೇಸು ದೇವಾಲಯಕ್ಕೆ ಬಂದು, ಅಲ್ಲಿ ವ್ಯಾಪಾರಮಾಡುತ್ತಿದ್ದವರನ್ನು ಹೊರಗೋಡಿಸಿದನು ; " ಪ್ರಾರ್ಥನೆಯ ಮನೆಯಾಗಿರಬೇಕಾದ್ದು ಕಳ್ಳರ ಸಂತೆಯಾಗಿದೆ!" ಎಂದನು. ಫರಿಸಾಯರೂ ಶಾಸ್ತ್ರಿಗಳೂ ಅದನ್ನು ಕೇಳಿದಾಗ, ಹೇಗಾದರೂ ಮಾಡಿ ಅವನನ್ನು ನಾಶಮಾಡಬೇಕೆಂದು ಮಾತನಾಡಿಕೊಂಡರು. ಯೇಸು ಹಗಲೆಲ್ಲಾ ದೇವಾಲಯದಲ್ಲಿ ಬೋಧೆಮಾಡುತ್ತಿದ್ದರೂ ಅವನನ್ನು ಹಿಡಿಯುವ ಧೈರ್ಯ ಅವರಿಗೆ ಬರಲಿಲ್ಲ. ಅವರು ಜನರಿಗೆ ಹೆದರುತ್ತಿದ್ದರು.

ಯೇಸು ಆ ದಿನ ಸಂಜೆಯೂ ಬೇಥಾನ್ಯಕ್ಕೆ ಹೋಗಿದ್ದು, ಮಾರನೆಯ ಬೆಳಗ್ಗೆ ಪುನಃ ಯೆರೂಸಲೇಮಿಗೆ ಬಂದನು. ಅಲ್ಲಿ ಅವನು ದೇವಾಲಯದಲ್ಲಿ ಬೋಧಿಸುತ್ತಿದ್ದಾಗ ಹಿರಿಯರೂ ಶಾಸ್ತ್ರಿಗಳೂ ಫರಿಸಾಯರೂ ಬಂದು, " ನೀನು ಮಾಡುತ್ತಿರುವ ಈ ಕೆಲಸಗಳನ್ನೆಲ್ಲಾ ಮಾಡಲು ನಿನಗೆ ಅಧಿಕಾರ ಕೊಟ್ಟವರಾರು?" ಎಂದು ಕೇಳಿದರು. ಅದಕ್ಕೆ ಬದಲಾಗಿ ಯೇಸು " ನಾನೂ ನಿಮ್ಮನ್ನು ಒಂದು ಕೇಳುವೆನು. ನೀವು ಅದನ್ನು ಹೇಳಿದರೆ, ನಾನೂ ನಿಮ್ಮ ಪ್ರಶ್ನೆಗೆ ಉತ್ತರ ಕೊಡುವೆನು. ಯೋಹಾನನಿಗೆ ದೀಕ್ಷಾಸ್ನಾನ ಯಾರಿಂದ ಆಯಿತು? ಪರಲೋಕದಿಂದಲೋ, ಮನುಷ್ಯರಿಂದಲೋ?" ಎಂದನು. ಆಗ ಅವರು " ಪರಲೋಕದಿಂದ ಆಯಿತೆಂದು ನಾವು ಹೇಳಿದರೆ, 'ಹಾಗಾದರೆ ನೀವೇಕೆ ಅವನನ್ನು ನಂಬಲಿಲ್ಲ?—ಎಂದು ಕೇಳುವನು ; ಮನುಷ್ಯರಿಂದ ಆಯಿತೆಂದರೆ, ಜನರು ನಮ್ಮನ್ನು ಸುಮ್ಮನೆ ಬಿಡುವುದಿಲ್ಲ, ಯೋಹಾನನನ್ನು ಪ್ರವಾದಿಯೆಂದು ತಿಳಿದಿದ್ದಾರೆ" ಎಂದುಕೊಂಡು, " ನಮಗೆ ಗೊತ್ತಿಲ್ಲ" ಎಂದರು. ಆಗ ಯೇಸು " ಹಾಗಾದರೆ, ಯಾರ ಅಧಿಕಾರದಿಂದ ಇಷ್ಟೆಲ್ಲಾ ಮಾಡುವೆನೆಂಬುದನ್ನು ನಾನೂ ನಿಮಗೆ ತಿಳಿಸುವುದಿಲ್ಲ" ಎಂದನು. ಹೀಗೆಂದು ಹೇಳಿ, ಯೇಸು ಅವರಿಗೆ " ತೋಟಗಾರನ ಮಕ್ಕಳು" ಎಂಬ ಸಾಮತಿಯನ್ನೂ " ರಾಜನ ಮನೆಯ ಮದುವೆ" ಎಂಬ ಸಾಮತಿಯನ್ನೂ ಹೇಳಿದನು.

ಯೇಸುವಿನ ಸಾಮತಿಗಳಿಂದ ಫರಿಸಾಯರು ಸಿಟ್ಟಾದರು. ಅವನಿಂದ ಹೇಗಾದರೂ ತಪ್ಪುಮಾಡಿಸಿ ಅವನನ್ನು ಸೆರೆ ಹಿಡಿಸಬೇಕೆಂದು ತಮ್ಮ ಶಿಷ್ಯರು ಕೆಲವರಿಗೆ ಹೇಳಿಕೊಟ್ಟು ಕಳಿಸಿದರು. ಅವರು ಬಂದು, "ಸ್ವಾಮಿ, ನೀನು ಧರ್ಮವನ್ನು ನುಡಿಯುವೆ, ಧರ್ಮದಂತೆ ನಡೆಯುವೆ. ನೀನು ಯಾರನ್ನೂ ಲೆಕ್ಕಮಾಡುವವನಲ್ಲ, ಸತ್ಯವನ್ನೇ ಬೋಧಿಸುವೆ. ಕೈಸರನಿಗೆ ಕಾಣಿಕೆಯೊಪ್ಪಿಸುವುದು ಧರ್ಮವೋ ಅಲ್ಲವೋ? ತಿಳಿಸು" ಎಂದರು.

ಅವರ ದುಷ್ಟಬುದ್ಧಿ ಯೇಸುವಿಗೆ ತಿಳಿಯಿತು. ಅವನು "ನನ್ನನ್ನು ಏಕೆ ಪರೀಕ್ಷಿಸುವಿರಿ, ಕಪಟಿಗಳೇ? ಕಾಣಿಕೆ ಕೊಡಬೇಕಾದ ನಾಣ್ಯ ತೋರಿಸಿ" ಎಂದನು ಅವರು ಒಂದು ನಾಣ್ಯ ತೋರಿಸಿದರು. "ಇದರ ಮೇಲಿನ ಚಿತ್ರವೂ ಬರೆಹವೂ ಯಾರದು?" ಎಂದು ಯೇಸು ಕೇಳಿದನು. "ಕೈಸರನದು" ಎಂದರವರು. ಆಗ ಯೇಸು "ಕೈಸರನದನ್ನು ಕೈಸರನಿಗೆ ಕೊಡಿರಿ, ದೇವರದನ್ನು ದೇವರಿಗೆ ಕೊಡಿರಿ" ಎಂದನು.

ಅವನು ಆಡಿದುದರಲ್ಲಿ ತಪ್ಪು ಕಂಡುಹಿಡಿಯಲಾರದೆ ಅವರು ಬಾಯಿ ಮುಚ್ಚಿಕೊಂಡು ಬಂದ ದಾರಿ ಹಿಡಿದುಹೋದರು.

ಅವರಂತೆಯೇ ಇನ್ನೂ ಅನೇಕರು ಯೇಸುವನ್ನು ಪರೀಕ್ಷಿಸಲು ಪ್ರಶ್ನೆಗಳನ್ನು ಎತ್ತಿದರು. ಅವನು ಕೊಟ್ಟ ಪ್ರತಿಯೊಂದು ಉತ್ತರಕ್ಕೂ ಜನ ಇನ್ನೂ ಮೆಚ್ಚಿಕೊಳ್ಳುತ್ತಿತ್ತು. ಯೆಹೂದ್ಯರ ಮುಖಂಡರಲ್ಲೇ ಅನೇಕರು ಯೇಸುವಿನ ಬೋಧೆಯನ್ನು ಕೇಳಿ ಅವನ ಮಹಿಮೆಯಲ್ಲಿ ನಂಬಿದರು. ಆದರೂ ಫರಿಸಾಯರ ಹೆದರಿಕೆಗಾಗಿ ಅವರು ಅದನ್ನು ಪ್ರಕಾಶವಾಗಿ ಒಪ್ಪಿಕೊಳ್ಳಲಿಲ್ಲ. ಕಾರಣ, ತಮ್ಮನ್ನು ಸಭಾಮಂದಿರಗಳಿಂದ ಬಹಿಷ್ಕರಿಸಬಹುದೆಂದು ಅಂಜುತ್ತಿದ್ದರು ದೇವರಿಂದ ಬರುವ ದೊಡ್ಡತನಕ್ಕಿಂತ ಜನರು ಕೊಡುವ ದೊಡ್ಡತನವೇ ಅವರಿಗೆ ಇಷ್ಟವಾಗಿತ್ತು.

## ಯೂದನ ದ್ರೋಹ

ಹೀಗೆ ಯೇಸು ಹಗಲೆಲ್ಲಾ ದೇವಾಲಯದಲ್ಲಿ ಬೋಧಿಸುವನು, ರಾತ್ರಿಯಾಗಲು ಬಳಿಯಲ್ಲಿಯೇ ಇದ್ದ ಎಣ್ಣೆಯ ಮರಗಳ ಗುಡ್ಡಕ್ಕೆ ಹೋಗಿ ಅಲ್ಲಿ ತಂಗುವನು. ಪುನಃ ಬೆಳಗಾಗಲು ಬಂದು ದೇವಾಲಯ

ದಲ್ಲಿ ಬೋಧಿಸುವನು. ಅವನನ್ನು ಕೇಳುವುದಕ್ಕೆ ಜನ ಬಂದು ಕಿಕ್ಕಿರಿಯುವುದು.

ಹೀಗೇ ನಾಲ್ಕು ದಿನ ಕಳೆಯಿತು, ಪಸ್ಕ ಹಬ್ಬಕ್ಕೆ ಇನ್ನು ಎರಡು ದಿನ ಮಾತ್ರ ಉಳಿಯಿತು. ಆಗ ಯೇಸು ತನ್ನ ಶಿಷ್ಯರನ್ನು ಕರೆದು, "ಇನ್ನು ಎರಡು ದಿನದ ತರುವಾಯ ಪಸ್ಕ ಹಬ್ಬ. ಆಗ ಮನುಷ್ಯ ಕುಮಾರನನ್ನು ಶಿಲುಬೆಗೆ ಏರಿಸುವುದಕ್ಕಾಗಿ ಒಪ್ಪಿಸುವರು" ಎಂದನು.

ಆದೇ ವೇಳೆಯಲ್ಲಿ ಯೆಹೂದ್ಯರ ಹಿರಿಯರೂ ಮುಖ್ಯ ಅರ್ಚಕರೂ ಕಾಯಫನ ಮನೆಯಂಗಳದಲ್ಲಿ ನೇರಿ, ಯೇಸುವನ್ನು ಯಾವ ಉಪಾಯದಿಂದ ಹಿಡಿಯಬೇಕೆಂದು ಆಲೋಚಿಸಿದರು. "ಹಬ್ಬದ ದಿನ ಬೇಡ. ಜನರಿಗೆ ತಿಳಿದರೆ ತೊಂದರೆಯಾದೀತು'' ಎಂದುಕೊಂಡರು

ಅಷ್ಟುಹೊತ್ತಿಗೆ, ಯೇಸುವಿನ ಶಿಷ್ಯರಲ್ಲೊಬ್ಬನಾದ ಇಸ್ಕರಿಯೋತ ಯೂದನು ಹಣದ ದುರಾಸೆಗೆ ವಶನಾಗಿ, ಅವರ ಬಳಿಗೆ ಬಂದು, "ಯೇಸುವನ್ನು ನಿಮಗೆ ಒಪ್ಪಿಸಿದರೆ ನನಗೆ ಏನು ಕೊಡುತ್ತೀರಿ?" ಎಂದು ಕೇಳಿದನು. ಅವರೆಲ್ಲರೂ ಅದಕ್ಕೆ ಸಂತೋಷಿಸಿ, ಅವನಿಗೆ ಮೂವತ್ತು ಬೆಳ್ಳಿಯ ನಾಣ್ಯ ಕೊಡಲು ಒಪ್ಪಿಕೊಂಡರು. ಅವನೂ ಯೇಸುವನ್ನು ಅವರ ಕೈವಶಪಡಿಸಲು ಒಪ್ಪಿದನು. ಅಂದಿನಿಂದ, ಜನರ ಗುಂಪು ಇಲ್ಲದಿರುವ ಹೊತ್ತಿನಲ್ಲಿ ಅವನನ್ನು ಹಿಡಿದೊಪ್ಪಿಸಬೇಕೆಂದು ಯೂದನು ಸಮಯ ಕಾಯುತ್ತಿದ್ದನು.

## ಯೇಸುವಿನ ಕೊನೆಯ ಊಟ

ಪಸ್ಕಹಬ್ಬ ಪ್ರಾರಂಭವಾಯಿತು, ಪಸ್ಕಹಬ್ಬದ ಕುರಿಮರಿಯನ್ನು ಕೊಲ್ಲುವ ದಿನ ಬಂತು. ಆಗ ಯೇಸು ಪೇತ್ರನನ್ನೂ ಯೋಹಾನನನ್ನೂ ಕರೆದು, "ಪಸ್ಕದ ಊಟಕ್ಕೆ ಸಿದ್ಧಮಾಡಿರಿ" ಎಂದನು. "ಎಲ್ಲಿ ಸಿದ್ಧಪಡಿಸಬೇಕು?" ಎಂದು ಅವರು ಕೇಳಿದಾಗ, ಯೇಸು "ಊರೊಳಕ್ಕೆ ಹೋಗಿರಿ. ನೀರನ್ನು ಹೊತ್ತುಕೊಂಡು ಒಬ್ಬನು ಎದುರಿಗೆ ಬರುತ್ತಾನೆ. ಅವನ ಹಿಂದೆ ಅವನ ಮನೆಗೆ ಹೋಗಿರಿ. ಹೋಗಿ, ಆ ಮನೆಯ ಯಜಮಾನನನ್ನು ಕುರಿತು, 'ನಿಮ್ಮ ಭೋಜನಶಾಲೆಯೆಲ್ಲಿ? ಎಂದು ಗುರು

ಕೇಳುತ್ತಾನೆ, ಅಲ್ಲಿ ಶಿಷ್ಯರೊಡನೆ ಹಬ್ಬದೂಟ ಉಣಬೇಕಂತೆ' ಎಂದು ಹೇಳಿ. ಅಣಿಮಾಡಿದ ಭೋಜನಶಾಲೆಯೊಂದನ್ನು ಅವನು ತೋರಿಸುವನು. ಅಲ್ಲಿ ಊಟಕ್ಕೆ ಸಿದ್ಧಗೊಳಿಸಿರಿ" ಎಂದನು.

ಅವರು ಅದರಂತೆಯೇ ಹೋಗಿ ಹಬ್ಬದೂಟವನ್ನು ಸಿದ್ಧಗೊಳಿಸಿದರು. ಸಂಜೆಯ ವೇಳೆಗೆ ಯೇಸು ಬಂದು ತನ್ನ ಹನ್ನೆರಡು ಜನ ಶಿಷ್ಯರೊಡನೆ ಅಲ್ಲಿ ಊಟಕ್ಕೆ ಕುಳಿತನು. ಕುಳಿತು, "ಇದೇ ನನ್ನ ಕಡೆಯ ಊಟ. ನಾನು ಪರಲೋಕವನ್ನು ಪಡೆಯುವವರೆಗೂ ಇನ್ನು ಊಟ ಮಾಡುವುದಿಲ್ಲ" ಎಂದನು. ಅನಂತರ ದ್ರಾಕ್ಷಾರಸದ ಬಟ್ಟಲನ್ನು ಎತ್ತಿ, "ಇದನ್ನು ನೀವು ಹಂಚಿಕೊಳ್ಳಿರಿ. ಪರಲೋಕದ ರಾಜ್ಯ ಬರುವವರೆಗೂ ನಾನು ಇನ್ನು ದ್ರಾಕ್ಷಾರಸ ಮುಟ್ಟುವುದಿಲ್ಲ" ಎಂದನು.

ಊಟವಾದ ಬಳಿಕ, ಯೇಸು ಎದ್ದು, ತನ್ನ ಮೇಲುವಸ್ತ್ರವನ್ನು ತೆಗೆದಿರಿಸಿ, ಬೇರೊಂದು ವಸ್ತ್ರವನ್ನು ಸೊಂಟಕ್ಕೆ ಸುತ್ತಿಕೊಂಡನು. ಅನಂತರ ಒಂದು ಬೋಗುಣಿಗೆ ನೀರು ಸುರಿದುಕೊಂಡು ತನ್ನ ಶಿಷ್ಯರ ಕಾಲು ತೊಳೆದನು, ಸುತ್ತಿಕೊಂಡಿದ್ದ ವಸ್ತ್ರದಿಂದ ಅವರ ಕಾಲು ಒರಸಿದನು.

ಆದರೆ ಪೇತ್ರನ ಹತ್ತಿರ ಬಂದಾಗ ಮಾತ್ರ, ಅವನು "ಸ್ವಾಮಿ, ನೀನು ನನ್ನ ಕಾಲು ತೊಳೆಯುವೆಯಾ?" ಎಂದನು. "ನಾನು ಮಾಡುವುದು ನಿನಗೆ ಈಗ ಅರ್ಥವಾಗುವುದಿಲ್ಲ, ಇನ್ನು ಮೇಲೆ ಅರ್ಥವಾಗುತ್ತದೆ" ಎಂದನು ಯೇಸು. ಅದಕ್ಕೆ ಪೇತ್ರನು "ನೀನು ಎಂದೂ ನನ್ನ ಕಾಲು ತೊಳೆಯಲಾರೆ" ಎಂದು ತಡೆದನು. ಅದಕ್ಕೆ ಯೇಸು "ನಿನ್ನ ಕಾಲು ನಾನು ತೊಳೆಯದಿದ್ದರೆ ನನ್ನಲ್ಲಿ ನಿನಗೆ ಪಾಲಿಲ್ಲ" ಎನ್ನಲು, ಪೇತ್ರನು "ಸ್ವಾಮಿ, ನನ್ನ ಕಾಲನ್ನು ಮಾತ್ರವಲ್ಲ, ನನ್ನ ಕೈಗಳನ್ನೂ ತಲೆಯನ್ನೂ ತೊಳೆ" ಎಂದನು. ಆಗ ಯೇಸು "ಕಾಲು ಮಾತ್ರ ತೊಳೆದರೆ ಸಾಕು, ಅವನು ಸಂಪೂರ್ಣ ಶುದ್ಧನಾದಂತೆಯೇ" ಎಂದು ಹೇಳಿ, ಪುನಃ "ನೀವು ಶುದ್ಧರಾಗಿದ್ದೀರಿ. ಆದರೂ ನಿಮ್ಮಲ್ಲಿ ಎಲ್ಲರೂ ಶುದ್ಧರಲ್ಲ" ಎಂದನು. ತನಗೆ ದ್ರೋಹಮಾಡಿ ತನ್ನನ್ನು ಯೆಹೂದ್ಯರಿಗೆ ಒಪ್ಪಿಸುವವನಾರೆಂದು ತಿಳಿದಿದ್ದುದರಿಂದಲೇ ಅವನು 'ನಿಮ್ಮಲ್ಲಿ ಎಲ್ಲರೂ ಶುದ್ಧರಲ್ಲ' ಎಂದನು.

ಹೀಗೆ ಅವರ ಕಾಲು ತೊಳೆದ ಮೇಲೆ, ಯೇಸು, ತನ್ನ ಮೇಲು ಹೊದಿಕೆಯನ್ನು ಹೊದ್ದುಕೊಂಡು ಕುಳಿತು, "ನಾನು ನಿಮಗೆ ಏನು ಮಾಡಿರುವೆನೆಂದು ನಿಮಗೆ ಗೊತ್ತೆ? ನೀವು ನನ್ನನ್ನು ಗುರುವೆನ್ನುವಿರಿ, ಸ್ವಾಮಿಯೆನ್ನುವಿರಿ. ನೀವು ಹೇಳುವುದು ಸರಿಯೇ; ನಾನು ಗುರು, ನಾನು ಸ್ವಾಮಿ. ನಿಮಗೆ ಗುರುವೂ ಸ್ವಾಮಿಯೂ ಆದ ನಾನೇ ನಿಮ್ಮ ಕಾಲು ತೊಳೆದ ಮೇಲೆ ನೀವೂ ಒಬ್ಬರು ಇನ್ನೊಬ್ಬರ ಕಾಲು ತೊಳೆಯುವುದು ತಕ್ಕುದು. ನಾನು ನಿಮಗೆ ಒಂದು ಉದಾಹರಣೆ ತೋರಿಸಿದ್ದೇನೆ, ನಾನು ನಿಮಗೆ ಮಾಡಿದಂತೆಯೇ ನೀವೂ ಇತರರಿಗೆ ಮಾಡಿ. ಸ್ವಾಮಿಗಿಂತ ಸೇವಕನು ದೊಡ್ಡವನಲ್ಲವೆಂದು ಹೇಳುತ್ತೇನೆ. ಇದು ನಿಮಗೆ ಅರ್ಥವಾಗಿ, ನೀವು ಇದರಂತೆ ನಡೆದರೆ, ನೀವು ಧನ್ಯರು" ಎಂದನು.

ಪುನಃ ಯೇಸು ಅವರನ್ನು ಕುರಿತು "ನಾನು ನಿಮ್ಮೆಲ್ಲರನ್ನೂ ಕುರಿತು ಹೇಳುತ್ತಿಲ್ಲ; ಯಾರನ್ನು ಆರಿಸಿಕೊಂಡಿರುವೆನೆಂಬುದು ನನಗೆ ಗೊತ್ತು. ನನ್ನೊಡನೆ ಊಟಮಾಡಿದವನು ನನ್ನನ್ನು ಒದೆಯಲು ಕಾಲೆತ್ತುವನು. ಇದು ನಡೆಯುವ ಮುಂಚೆಯೇ ನಿಮಗೆ ಹೇಳುತ್ತೇನೆ, ನಡೆದ ಮೇಲೆ ನನ್ನಲ್ಲಿ ನಿಮಗೆ ನಂಬಿಕೆ ಬರಲಿ" ಎಂದು ಹೇಳಿದನು.

"ನಿಮ್ಮಲ್ಲಿ ಒಬ್ಬನು ನನಗೆ ದ್ರೋಹಮಾಡುತ್ತೀರಿ" ಎಂದು ಯೇಸು ಹೇಳಿದಾಗ ಶಿಷ್ಯರು ಒಬ್ಬರನ್ನು ಒಬ್ಬರು ಸಂಶಯದಿಂದ ನೋಡಿದರು, ಕಳವಳಗೊಂಡರು ಪ್ರತಿಯೊಬ್ಬನೂ "ನಾನೇ, ಸ್ವಾಮಿ?" ಎಂದು ಕೇಳತೊಡಗಿದನು ಅದಕ್ಕೆ ಯೇಸು "ಇದೋ, ನೋಡಿ. ನನ್ನನ್ನು ಹಿಡಿದೊಪ್ಪಿಸುವವನ ಕೈ ನನ್ನೊಡನೆ ಈ ಮೇಜಿನ ಮೇಲಿದೆ. ನನ್ನೊಡನೆ ಈ ತಟ್ಟೆಯಲ್ಲಿ ಕೈಯಿಡುವ ನಿಮ್ಮ ಹನ್ನೆರಡು ಜನರಲ್ಲಿ ಒಬ್ಬನು ನನ್ನನ್ನು ಹಿಡಿದೊಪ್ಪಿಸುತ್ತಾನೆ" ಎಂದನು.

ಆಗ ಯೂದನು, ಯೇಸುವಿಗೆ ದ್ರೋಹಮಾಡಬೇಕೆಂದಿದ್ದವನು, "ಯಾರು? ನಾನೇ, ಸ್ವಾಮಿ?" ಎಂದು ಮೆಲ್ಲಗೆ ಕೇಳಿದನು. ಯೇಸು "ನೀನೇ ಹೇಳಿರುವೆ" ಎಂದನು.

ಆ ಸಮಯದಲ್ಲಿ ಯೇಸುವಿಗೆ ಬಹು ಪ್ರೀತಿಪಾತ್ರನಾದ ಶಿಷ್ಯನೊಬ್ಬನು ಅವನ ಎದೆಯ ಮೇಲೆ ಒರಗಿದ್ದನು. ಪೇತ್ರನು "ಯಾರನ್ನು

ಕುರಿತು ಹೇಳಿದನೆಂದು ಕೇಳು?" ಎಂದು ಅವನಿಗೆ ಸನ್ನೆಮಾಡಿದನು. ಅವನು ಯೇಸುವಿನ ಮೇಲೆ ಒರಗಿ, "ಅದು ಯಾರು, ಸ್ವಾಮಿ?" ಎಂದು ಕೇಳಿದನು. ಯೇಸು "ನಾನು ರೊಟ್ಟಿಯ ತುತ್ತನ್ನು ಇಲ್ಲಿ ಯಾರಿಗೆ ಅದ್ದಿ ಕೊಡುವೆನೋ ಅವನು" ಎಂದು ಹೇಳಿ, ರೊಟ್ಟಿಯ ತುತ್ತನ್ನು ಅದ್ದಿ ಇಸ್ಕರಿಯೋತ ಯೂದನಿಗೆ ಕೊಟ್ಟು, "ನೀನೇನು ಮಾಡುವೆಯೋ ಅದನ್ನು ಬೇಗ ಮಾಡು" ಎಂದನು. ಯೇಸು ಏಕೆ ಹಾಗೆ ಹೇಳಿದನೆಂದು ಅಲ್ಲಿ ಇದ್ದವರಿಗೆ ತಿಳಿಯಲಿಲ್ಲ. ಯೂದನ ಬಳಿ ಹಣದ ಚೀಲವಿದ್ದುದರಿಂದ 'ಹೋಗಿ ಹಬ್ಬದ ಪದಾರ್ಥಗಳನ್ನು ತೆಗೆದುಕೊಂಡು ಬಾ' ಎಂದೋ 'ಬಡವರಿಗೆ ಏನಾದರೂ ಕೊಡು' ಎಂದೋ ಯೇಸು ಹೇಳಿದನೆಂದು ಅವರು ಎಂದುಕೊಂಡರು.

ಯೂದನು ಆ ತುತ್ತನ್ನು ತೆಗೆದುಕೊಂಡು ತತ್‌ಕ್ಷಣವೇ ಹೊರಟು ಹೋದನು. ಆಗ ರಾತ್ರಿಯಾಗಿತ್ತು.

### ಯೇಸುವಿನ ದುಃಖ

ಅವನು ಹೋದ ಮೇಲೆ, ಯೇಸು ತನ್ನ ಶಿಷ್ಯರನ್ನು ಕುರಿತು "ಈಗ ಮನುಷ್ಯಕುಮಾರನ ಮಹಿಮೆ ವ್ಯಕ್ತವಾಗುತ್ತದೆ, ಅದರಿಂದ ದೇವರ ಮಹಿಮೆ ಗೊತ್ತಾಗುತ್ತದೆ. ಮಕ್ಕಳೆ, ಇನ್ನು ಕೊಂಚಕಾಲ ನಾನು ನಿಮ್ಮೊಡನೆ ಇರುವೆನು. ನೀವು ನನ್ನನ್ನು ಹುಡುಕುವಿರಿ; ಆದರೆ ನಾನು ಹೋದಕಡೆ ನೀವು ಬರಲಾರಿರೆಂದು ಹೇಳುತ್ತೇನೆ. ನಿಮಗೊಂದು ಹೊಸ ಆಜ್ಞೆ ಕೊಡುತ್ತೇನೆ: ನಾನು ನಿಮ್ಮನ್ನು ಪ್ರೀತಿಸಿರುವಂತೆಯೇ ನೀವೂ ಒಬ್ಬರನ್ನೊಬ್ಬರು ಪ್ರೀತಿಸಿರಿ. ನಿಮ್ಮ ಈ ಪರಸ್ಪರ ಪ್ರೀತಿಯನ್ನು ಕಂಡು ನೀವು ನನ್ನ ಶಿಷ್ಯರೆಂಬುದು ಜನರಿಗೆ ತಿಳಿಯಲಿ" ಎಂದನು.

ಅದಕ್ಕೆ ಪೇತ್ರನು "ನೀನೆಲ್ಲಿ ಹೋಗುವೆ, ಸ್ವಾಮಿ?" ಎಂದನು.

ಯೇಸು "ನಾನು ಹೋಗುವ ಕಡೆಗೆ ನೀನು ಈಗ ಬರಲಾರೆ, ಆದರೆ ಮುಂದೆ ಬರುತ್ತೀಯೆ" ಎಂದನು.

ಪೇತ್ರನು "ನಿನ್ನ ಹಿಂದೆ ಈಗ ಏಕೆ ಬರಲು ಆಗುವುದಿಲ್ಲ? ನಾನು ನಿನಗಾಗಿ ಜೀವವನ್ನಾದರೂ ಕೊಟ್ಟೇನು" ಎಂದನು.

ಆಗ ಯೇಸು "ನನಗಾಗಿ ಜೀವವನ್ನು ಕೊಡುವೆಯ ? ನಾನು ಹೇಳುತ್ತೇನೆ, ಕೇಳು: ನಾಳೆ ಕೋಳಿ ಕೂಗುವುದರೊಳಗಾಗಿ ಮೂರು ಸಲ ನನ್ನನ್ನು ಅರಿಯೆನೆಂದು ನೀನೇ ಹೇಳಿಬಿಡುತ್ತೀಯೆ" ಎಂದನು.

ಆಗಲೂ ಪೇತ್ರನು "ನಾನು ನಿನ್ನೊಡನೆ ಮಡಿದರೂ ಸಮನೆ, ನಿನ್ನನ್ನುಅರಿಯೆನೆಂದು ಹೇಳುವುದಿಲ್ಲ" ಎಂದು ಖಂಡಿತವಾಗಿ ಹೇಳಿದನು.

ತರುವಾಯ ಅವರೆಲ್ಲರೂ ಗೆತ್ಸೇಮನೆ ಎಂಬ ತೋಟಕ್ಕೆ ಬಂದರು. ಅಲ್ಲಿ ಯೇಸು "ನೀವು ಇಲ್ಲಿ ಕುಳಿತುಕೊಳ್ಳಿ ನಾನು ಆಚೆ ಹೋಗಿ ಪ್ರಾರ್ಥಿಸುತ್ತೇನೆ" ಎಂದು ತನ್ನ ಶಿಷ್ಯರಿಗೆಂದನು. ಬಳಿಕ ಪೇತ್ರ ಯಾಕೋಬ ಯೋಹಾನರನ್ನು ಕರೆದುಕೊಂಡು ಹೋದನು. ಅವನ ಮನಸ್ಸು ಖಿನ್ನವಾಗಿತ್ತು. 'ಸಾಯುವಷ್ಟು ದುಃಖವಾಗುತ್ತಿದೆ. ನೀವು ಇಲ್ಲಿಯೇ ನಿಂತುಕೊಳ್ಳಿ. ಎಚ್ಚರದಿಂದಿರಿ' ಎಂದು ಹೇಳಿದನು. ಅನಂತರ ಕೊಂಚ ದೂರ ಹೋಗಿ, ಮೊಣಕಾಲೂರಿ, ನೆಲದ ಮೇಲೆ ಅಡ್ಡಬಿದ್ದು, "ಓ ತಂದೆ, ಈ ಕಷ್ಟದ ಬಟ್ಟಲನ್ನು ದೂರಮಾಡು ನಿನಗೆ ಎಲ್ಲವೂ ಸಾಧ್ಯ. ಆದರೂ ನನ್ನ ಇಷ್ಟದಂತೆ ಆಗದೆ ನಿನ್ನ ಇಷ್ಟದಂತೆಯೇ ಆಗಲಿ" ಎಂದು ಬೇಡಿದನು.

ಬಳಿಕ ತನ್ನ ಶಿಷ್ಯರಿದ್ದ ಕಡೆ ಬಂದನು. ಅವರಿಗೆ ನಿದ್ರೆ ಬಂದಿತ್ತು. ಆಗ ಪೇತ್ರನನ್ನು ಕುರಿತು "ಏನಿದು ? ಒಂದು ಗಂಟೆ ನನ್ನೊಡನೆ ಎಚ್ಚರದಿಂದ ಇರಲಾರದೆಹೋದೆಯ ? ಎದ್ದು ಪ್ರಾರ್ಥನೆ ಮಾಡು, ಮರೆವಿಗೆ ವಶನಾಗಬೇಡ. ಮನಸ್ಸಿಗೇನೋ ಇಷ್ಟವೇ ಆದರೂ ದೇಹಕ್ಕೆ ಬಲ ಸಾಲದು" ಎಂದನು.

ಪುನಃ ಎರಡನೆಯ ಸಲ ಹೋಗಿ ಪ್ರಾರ್ಥಿಸಿದನು. "ಓ ತಂದೆ, ನಾನು ಕುಡಿದ ಹೊರತು ಈ ಕಷ್ಟದ ಬಟ್ಟಲು ಕಳೆದುಹೋಗಲಾರದಾದರೆ, ನಿನ್ನ ಇಷ್ಟದಂತಾಗಲಿ" ಎಂದನು. ಪುನಃ ಬಂದು ನೋಡಿದಾಗಲೂ ಅವರಿಗೆ ನಿದ್ದೆ ಬಂದಿತ್ತು, ಅವರ ಕಣ್ಣು ಭಾರವಾಗಿತ್ತು. ಅವರನ್ನು ಅಲ್ಲಿಯೇ ಬಿಟ್ಟುಹೋಗಿ, ಯೇಸು ಪುನಃ ಮೊದಲಿನಂತೆಯೇ ಪ್ರಾರ್ಥಿಸಿದನು. ಮನೋವ್ಯಥೆ ಬಹಳವಾಗಿ, ರಕ್ತದಷ್ಟು ಗಾತ್ರದ ಬೆವರುಹನಿಗಳು ಅವನ ಮೈಯಿಂದ ಬಸಿದುಬಿದ್ದುವು.

ಮೂರನೆಯ ಸಲ ಅವನು ತನ್ನ ಶಿಷ್ಯರ ಬಳಿ ಸಾರಿ, "ಈಗ ಮಲಗಿ ವಿಶ್ರಮಿಸಿಕೊಳ್ಳಿ. ಸಾಕು, ಸಮಯ ಸಮೀಪಿಸಿತು. ಮನುಷ್ಯಕುಮಾರನು ಪಾಪಿಗಳಿಗೆ ಕೈವಶನಾಗುವನು. ಏಳಿ, ಹೋಗೋಣ. ಇದೋ ನೋಡಿ, ನನ್ನನ್ನು ಹಿಡಿದೊಪ್ಪಿಸುವವನು ಹತ್ತಿರವಿದ್ದಾನೆ" ಎಂದನು

## ಯೇಸುವಿನ ಬಂಧನ

ಯೇಸುವಿಗೆ ದ್ರೋಹಮಾಡಿದ ಯೂದನಿಗೆ ಆ ಸ್ಥಳ ಗೊತ್ತಿತ್ತು. ಯೇಸು ಅನೇಕ ಸಲ ತನ್ನ ಶಿಷ್ಯರೊಡನೆ ಅಲ್ಲಿಗೆ ಬಂದಿದ್ದ. ಅದರಿಂದ ಯೂದನು ಒಂದು ಸೈನಿಕರ ಪಡೆಯನ್ನೂ ಮುಖ್ಯ ಅರ್ಚಕರ ಹಾಗೂ ಫರಿಸಾಯರ ಸೇವಕರನ್ನೂ ಕಟ್ಟಿಕೊಂಡು, ಯೇಸುವಿಗೆ ಮುತ್ತು ಕೊಡುವುದಕ್ಕಾಗಿ ಮುಂದೆ ಬಂದನು. "ನಾನು ಯಾರಿಗೆ ಮುತ್ತು ಕೊಡುವೆನೋ ಅವನೇ ಯೇಸು. ಅವನನ್ನು ಹಿಡಿದು ಎಚ್ಚರದಿಂದ ಒಯ್ಯಿರಿ" ಎಂದು ಅವನು ಅವರಿಗೆ ಗುರುತು ಹೇಳಿದ್ದನು.

ಅದರಂತೆಯೇ ಯೂದನು "ಗುರುವೇ, ಜಯವಾಗಲಿ" ಎಂದು ಬಂದು ಯೇಸುವಿಗೆ ಮುತ್ತಿಟ್ಟನು

ಆಗ ಯೇಸು "ಗೆಳೆಯಾ, ನೀನೇಕೆ ಬಂದೆ? ಯೂದ, ಮನುಷ್ಯ ಕುಮಾರನಿಗೆ ಮುತ್ತುಕೊಟ್ಟು ದ್ರೋಹಮಾಡುವೆಯಾ?" ಎಂದನು.

ತನಗೆ ಏನೇನು ಸಂಭವಿಸುವುದೆಂದು ಯೇಸುವಿಗೆ ತಿಳಿದಿತ್ತು. ಆದ್ದರಿಂದ ಅವನು ಮುಂದೆ ಬಂದು, "ಆರನ್ನು ಅರಸುವಿರಿ?" ಎಂದನು. "ನಜರೇತಿನ ಯೇಸುವನ್ನು" ಎಂದರು. ಯೇಸು "ನಾನೇ ಅವನು" ಎಂದನು.

ಆಗ ಅವನನ್ನು ಹಿಡಿದೊಪ್ಪಿಸಿದ ಯೂದನೂ ಅವರೊಡನೆಯೇ ನಿಂತಿದ್ದನು. ಯೇಸು "ನಾನೇ ಅವನು" ಎಂದೊಡನೆಯೆ ಅವರು ಹಿಂದಕ್ಕೆ ಸರಿದು ನೆಲದ ಮೇಲೆ ಬಿದ್ದರು. ಯೇಸು ಪುನಃ "ಆರನ್ನು ಅರಸುವಿರಿ?" ಎಂದು ಕೇಳಿದನು. "ನಜರೇತಿನ ಯೇಸುವನ್ನು" ಎಂದರು ಅವರು. ಅದಕ್ಕೆ ಯೇಸು "ನಾನೇ ಅವನೆಂದು ಹೇಳಿದೆನಲ್ಲ?

ನೀವು ನನ್ನನ್ನು ಹುಡುಕುವುದಾದರೆ, ಇವರನ್ನು ಹೋಗಗೊಡಿರಿ" ಎಂದನು.

ಆಗ ಅವರು ಅವನ ಹತ್ತಿರ ಬಂದು, ಕೈಹಾಕಿ ಅವನನ್ನು ಹಿಡಿದರು. ಅವನ ಸುತ್ತಲೂ ಇದ್ದವರು ಮುಂದಾಗುವುದನ್ನು ಕಂಡು, "ಸ್ವಾಮಿ, ಕತ್ತಿ ಎತ್ತಿ ಹೊಡೆಯೋಣವೆ?" ಎಂದರು. ಪೇತ್ರನ ಹತ್ತಿರ ಕತ್ತಿಯಿತ್ತು. ಅವನು ಅದನ್ನು ಹಿರಿದು ಮಹಾಅರ್ಚಕನ ಕಡೆಯ ಸೇವಕನ ಬಲಕಿವಿಯನ್ನು ಕತ್ತರಿಸಿಬಿಟ್ಟನು. ಆಗ ಯೇಸು "ಇಷ್ಟು ಸಾಕು" ಎಂದು ಅವನ ಕಿವಿಯನ್ನು ಮುಟ್ಟಿ ಗುಣಪಡಿಸಿದನು.

ಅನಂತರ ಪೇತ್ರನನ್ನು ಕುರಿತು, "ನಿನ್ನ ಕತ್ತಿಯನ್ನು ಅದರ ಸ್ಥಾನಕ್ಕೆ ಸೇರಿಸು. ನಾನು ನನ್ನ ತಂದೆಯನ್ನು ಕೇಳಿದರೆ, ಹನ್ನೆರಡು ಪಡೆಗೂ ಮೀರಿದ ದೇವದೂತರನ್ನು ಅವನು ಕಳುಹಿಸುವುದಿಲ್ಲವೆಂದು ಕೊಂಡೆಯ? ನನ್ನ ತಂದೆಯು ನನಗೆ ಕೊಟ್ಟಿರುವ ನನ್ನ ಕಷ್ಟದ ಬಟ್ಟಲನ್ನು ನಾನು ಕುಡಿದು ಮುಗಿಸಬೇಡವೆ?" ಎಂದನು.

ಆಗ ಯೇಸು ಅಲ್ಲಿ ಬಂದಿದ್ದ ಮುಖ್ಯ ಅರ್ಚಕರನ್ನೂ ದೇವಾಲಯದ ಧರ್ಮಾಧಿಕಾರಿಗಳನ್ನೂ ಕುರಿತು, "ಕಳ್ಳರನ್ನು ಹಿಡಿಯುವುದಕ್ಕೆ ಬರುವಂತೆ ಕತ್ತಿ ಕೋಲುಗಳನ್ನು ಕೊಂಡು ನನ್ನನ್ನು ಹಿಡಿಯಲು ಬಂದಿರುವಿರ? ನಾನು ಪ್ರತಿದಿನವೂ ದೇವಾಲಯದಲ್ಲಿ ಬೋಧಿಸುತ್ತಾ ನಿಮ್ಮ ನಡುವೆಯೇ ಇದ್ದೆ, ಆದರೂ ನೀವು ನನ್ನ ಮೇಲೆ ಕೈಮಾಡಲಿಲ್ಲ. ಆದರೆ ನಿಮಗೆ ಇದೇ ವೇಳೆ, ಇದೇ ಕತ್ತಲಿನ ಪ್ರಭಾವ" ಎಂದನು.

ಆಗ ಅವನ ಶಿಷ್ಯರೆಲ್ಲರೂ ಅವನನ್ನು ತೊರೆದು ಓಡಿಹೋದರು ಅವನನ್ನು ಹಿಂಬಾಲಿಸುತ್ತಿದ್ದವನೊಬ್ಬನನ್ನು ಹಿಡಿಯಬೇಕೆಂದು ಅವನ ಬಟ್ಟೆಗೆ ಕೈ ತುಡುಕಿದಾಗ, ಅವನು ತನ್ನ ಬಟ್ಟೆಯನ್ನೂ ಬಿಟ್ಟು ಬೆತ್ತಲೆಯಾಗಿಯೇ ಓಡಿಹೋದನು.

ಅನಂತರ, ಅಲ್ಲಿ ಬಂದಿದ್ದ ಯೆಹೂದ್ಯರ ಸೇವಕರು ಯೇಸುವನ್ನು ಕಟ್ಟಿ ಕೊಂಡುಹೋದರು.

# ವಿಚಾರಣೆ, ಮುಕ್ತಾಯ

## ಅನ್ನನ ವಿಚಾರಣೆ

ಯೇಸುವನ್ನು ಮೊದಲು ಅನ್ನ ಎಂಬವನ ಬಳಿಗೆ ಒಯ್ದರು. ಇವನು ಆ ವರುಷದ ಮಹಾಅರ್ಚಕನಾಗಿದ್ದ ಕಾಯಫನ ಮಾವ. ಯೇಸುವನ್ನು ದೇಶಕ್ಕಾಗಿ ಬಲಿಕೊಡಬೇಕೆಂದು ಈ ಕಾಯಫನೇ ಸೂಚಿಸಿದ್ದವನು.

ಪೇತ್ರನೂ ಇನ್ನೊಬ್ಬ ಶಿಷ್ಯನೂ ಯೇಸುವನ್ನು ದೂರವಾಗಿ ಹಿಂಬಾಲಿಸಿದರು ಇನ್ನೊಬ್ಬ ಶಿಷ್ಯನು ಮುಖ್ಯ ಅರ್ಚಕನನ್ನು ಬಲ್ಲವನಾದುದರಿಂದ ಯೇಸುವಿನೊಡನೆ ಒಳಅಂಗಳಕ್ಕೆ ಹೋದನು. ಪೇತ್ರನು ಮಾತ್ರ ಬಾಗಿಲ ಹೊರಗೇ ನಿಂತನು. ಆಗ ಆ ಇನ್ನೊಬ್ಬ ಶಿಷ್ಯನು ಹೊರಗೆ ಬಂದು, ಬಾಗಿಲುಕಾಯುವವಳಿಗೆ ಹೇಳಿ, ಪೇತ್ರನನ್ನು ಒಳಕ್ಕೆ ಒಯ್ದನು ಆ ಬಾಗಿಲುಕಾಯುವವಳು "ಇವನ ಶಿಷ್ಯರಲ್ಲಿ ನೀನೂ ಒಬ್ಬನಲ್ಲವೆ?" ಎಂದು ಪೇತ್ರನನ್ನು ಕೇಳಿದಳು. ಅವನು "ನಾನಲ್ಲ" ಎಂದನು.

ಆಗ ಅಧಿಕಾರಿಗಳೂ ಆಳುಗಳೂ ಬಂದು ಅಗ್ಗಿಷ್ಟಿಕೆಯ ಬಳಿ ನಿಂತು ಚಳಿ ಕಾಯಿಸಿಕೊಳ್ಳುತ್ತಿದ್ದರು. ಪೇತ್ರನು ತಾನೂ ನಿಂತು ಚಳಿ ಕಾಯಿಸಿಕೊಳ್ಳುತ್ತಿದ್ದನು. ಅಲ್ಲಿಗೆ ಮುಖ್ಯಅರ್ಚಕನ ದಾಸಿಯೊಬ್ಬಳು ಬಂದಳು, ಪೇತ್ರನನ್ನು ಕಂಡಳು; "ಗಲಿಲಾಯದ ನಜರೇತಿನ ಯೇಸುವಿನೊಡನೆ ನೀನೂ ಇದ್ದೆಯಲ್ಲವೆ?" ಎಂದಳು. ಆದರೆ ಅವನು "ನಾನು ಅವನನ್ನು ಅರಿಯೆ. ನೀನು ಹೇಳುವುದೂ ನನಗೆ ಗೊತ್ತಿಲ್ಲ, ತಿಳಿಯದು" ಎಂದು ಎಲ್ಲರೆದುರಿಗೂ ಹೇಳಿಬಿಟ್ಟು ಅಂಗಳದಿಂದ ಆಚೆ ಹೋದನು.

ಮುಖ್ಯ ಅರ್ಚಕನು ಅನಂತರ ಯೇಸುವಿನ ಶಿಷ್ಯರನ್ನೂ ಅವನ ತತ್ತ್ವಗಳನ್ನೂ ಕುರಿತು ಕೇಳಿದನು. ಅದಕ್ಕೆ ಯೇಸು "ನಾನು ಪ್ರಪಂಚಕ್ಕೆ ಬಹಿರಂಗವಾಗಿ ಹೇಳಿದ್ದೇನೆ. ಸಭಾಮಂದಿರಗಳಲ್ಲೂ ದೇವಾಲಯಗಳಲ್ಲೂ ಹೇಳಿದ್ದೇನೆ. ಅಲ್ಲೆಲ್ಲಾ ಯೆಹೂದ್ಯರೂ ಬಂದಿದ್ದಾರೆ. ನಾನು ಹೇಳಿದುದನ್ನು ಯಾರು ಕೇಳಿದರೋ ಅವರನ್ನು ಪ್ರಶ್ನಿಸಿರಿ. ನಾನು ಏನೇನು ಹೇಳಿರುವೆನೆಂದು ಅವರು ಬಲ್ಲರು" ಎಂದನು.

ಅವನು ಹೀಗೆ ಹೇಳಲು, ಬಳಿಯಲ್ಲಿ ನಿಂತ ಆಳೊಬ್ಬನು "ಮುಖ್ಯ ಅರ್ಚಕನಿಗೆ ಹೀಗೆ ಉತ್ತರ ಕೊಡುವೆಯ ?" ಎಂದು ಒಂದು ಏಟು ಬಿಗಿದನು. ಆದಕ್ಕೆ ಯೇಸು "ನಾನು ಕೆಟ್ಟದ್ದು ಹೇಳಿದರೆ, ಅದನ್ನು ತೋರಿಸಿರಿ. ಒಳ್ಳೆಯದು ಹೇಳಿದರೆ, ನನ್ನನ್ನು ಏಕೆ ಹೊಡೆಯುವಿರಿ ?" ಎಂದನು.

ಆಗ ಅನ್ನನು ಅವನನ್ನು ಕಟ್ಟಿ ಕಾಯಫನ ಕಡೆಗೆ ಕಳಿಸಿದನು.

## ಕಾಯಫನ ವಿಚಾರಣೆ

ಯೇಸುವನ್ನು ಕಾಯಫನ ಮನೆಗೆ ಕರೆದೊಯ್ದರು. ಪೇತ್ರನು ಅಲ್ಲಿಗೂ ಅವನ ಹಿಂದೆ ಹೋದನು. ಅಲ್ಲಿಯ ಅಂಗಳದ ಬಾಗಿಲನ್ನು ದಾಟುವಾಗ ಇನ್ನೊಬ್ಬ ದಾಸಿ "ಇವನು ನಜರೇತಿನ ಯೇಸುವಿನ ಜೊತೆಯಲ್ಲಿದ್ದನು" ಎಂದು ಪಕ್ಕದವರಿಗೆ ಹೇಳಿದಳು ಪೇತ್ರನು ಪುನಃ "ಅವನನ್ನು ನಾನು ಅರಿಯೆ" ಎಂದು ಪ್ರಮಾಣಮಾಡಿ ಹೇಳಿದನು.

ಮುಖ್ಯ ಅರ್ಚಕರ ಸಭೆ ಯೇಸುವಿನ ವಿಚಾರಣೆಗೆ ಸೇರಿತು. ಸುಳ್ಳುಸಾಕ್ಷಿ ತಂದು ಯೇಸುವನ್ನು ಸಾಯಿಸಬೇಕೆಂದು ಅವರು ಯತ್ನಿಸಿದರು. ಸುಳ್ಳು ಸಾಕ್ಷಿಗಳೇನೋ ಬಂದರು, ಆದರೆ ಅವರ ಸಾಕ್ಷಿಗಳು ಹೊಂದಿಬರಲಿಲ್ಲ. ಕಡೆಗೆ ಇಬ್ಬರು ಸುಳ್ಳುಸಾಕ್ಷಿ ಬಂದರು: "ಇವನು 'ಕೈಯಿಂದ ಕಟ್ಟಿದ ಈ ದೇವಾಲಯವನ್ನು ಕೆಡವಿಬಿಡಿರಿ. ಕೈಯಿಂದ ಕಟ್ಟದ ದೇವಾಲಯವೊಂದನ್ನು ಇನ್ನು ಮೂರು ದಿನಗಳೊಳಗಾಗಿ ನಾನು ಎತ್ತುತ್ತೇನೆ' ಎಂದು ಹೇಳಿದುದನ್ನು ನಾವು ಕಿವಿಯಾರೆ ಕೇಳಿದ್ದೇವೆ" ಎಂದರು. ಆದರೂ ಅವರ ಸಾಕ್ಷಿ ಒಂದಕ್ಕೊಂದು ಹೊಂದಲಿಲ್ಲ.

ಆಗ ಮುಖ್ಯ ಅರ್ಚಕನು ಎದ್ದು, ಯೇಸುವನ್ನು ಕುರಿತು "ಈ ಜನ ನಿನ್ನಮೇಲೆ ತಂದಿರುವ ಆರೋಪಣೆಗಳಿಗೆ ನೀನು ಏನೂ ಹೇಳುವುದಿಲ್ಲವೊ ?" ಎಂದು ಕೇಳಿದನು. ಯೇಸು ಮಾತನಾಡದೆ ಮೌನದಿಂದಿದ್ದನು.

ಆಗ ಮುಖ್ಯ ಅರ್ಚಕನು "ದೇವರ ಮೇಲೆ ಆಣೆಯಿರಿಸಿ ಕೇಳುತ್ತೇನೆ. ನೀನು ದೇವರ ಮಗನಾದ ಕ್ರಿಸ್ತನೆ? ಹೇಳು" ಎಂಧನು.

ಅದಕ್ಕೆ ಯೇಸು " ನೀನೇ ಹೇಳಿರುವೆ. ಆದರೂ ನಿಮಗೆ ಹೇಳುತ್ತೇನೆ: ಇನ್ನುಮುಂದೆ ಮನುಷ್ಯಕುಮಾರನು ಸರ್ವಶಕ್ತನಾದ ದೇವರ ಬಲಗಡೆ ಕುಳಿತು ಆಕಾಶದ ಮೇಘಗಳಲ್ಲಿ ಬರುವುದನ್ನು ಕಾಣುವಿರಿ" ಎಂದನು.

ಆಗ ಮುಖ್ಯ ಅರ್ಚಕನು ತನ್ನ ಬಟ್ಟೆಗಳನ್ನು ಸೀಳಿಕೊಂಡು, "ಇವನು ದೈವದೂಷಣೆ ಮಾಡಿದ್ದಾನೆ ಇನ್ನೇನು ಸಾಕ್ಷಿ ಬೇಕು ನಮಗೆ? ಇದೋ, ದೈವದೂಷಣೆಯನ್ನು ನೀವೇ ಕೇಳಿದ್ದೀರಿ; ಏನು ಹೇಳುವಿರಿ ?" ಎಂದನು. ಅವರು "ಇವನ ತಪ್ಪಿಗೆ ಮರಣವೇ ದಂಡನೆ" ಎಂದರು.

ಆಗ ಮುಖ್ಯ ಅರ್ಚಕನ ಸೇವಕನೊಬ್ಬನು ಪೇತ್ರನನ್ನು ಕಂಡು, "ನಿನ್ನನ್ನು ಅವನೊಡನೆ ತೋಟದಲ್ಲಿ ನೋಡಲಿಲ್ಲವೆ?" ಎಂದನು. ಪುನಃ ಪೇತ್ರನು ಅವನನ್ನು ತಾನು ಅರಿಯೆನೆಂದನು. ಸ್ವಲ್ಪ ಹೊತ್ತಾದಮೇಲೆ ಅಲ್ಲಿದ್ದವರು "ನೀನೂ ಅವನ ಶಿಷ್ಯರಲ್ಲಿ ಒಬ್ಬನಲ್ಲವೆ? ನೀನೂ ಗಲಿಲಾಯದವನಲ್ಲವೆ? ನಿನ್ನ ಮಾತು ಕೇಳಿದರೇ ಗೊತ್ತಾಗುತ್ತದೆ" ಎಂದರು. ಆಗ ಪೇತ್ರನು ಶಪಿಸಿ ಆಣೆಯಿಟ್ಟುಕೊಂಡು, " ಈ ಮನುಷ್ಯನನ್ನು ನಾನು ಖಂಡಿತ ಕಾಣೆ" ಎಂದನು. ಒಡನೆಯೇ ಕೋಳಿ ಪುನಃ ಕೂಗಿತು.

ಯೇಸುಸ್ವಾಮಿಯು ತಿರುಗಿ ಪೇತ್ರನನ್ನು ನೋಡಿದನು. 'ಕೋಳಿ ಕೂಗುವುದರೊಳಗಾಗಿ ಮೂರು ಸಲ ನನ್ನನ್ನು ಅರಿಯೆನೆಂದು ನೀನು ಹೇಳುವೆ' ಎಂದು ಅವನು ಹೇಳಿದ್ದುದು ಪೇತ್ರನಿಗೆ ನೆನಪಾಯಿತು. ಅಲ್ಲಿಂದ ಹೊರಗೆ ಹೋಗಿ, ಪೇತ್ರನು ಬಿಕ್ಕಿಬಿಕ್ಕಿ ಅತ್ತನು.

ಯೇಸುವನ್ನು ಹಿಡಿದಿದ್ದ ಜನರು ಅವನನ್ನು ಅಣಕಿಸಿದರು, ಹೊಡೆದರು. ಅವನ ಮುಖದ ಮೇಲೆ ಉಗುಳಿದರು, ಗುದ್ದಿದರು. ಅವನಿಗೆ ಕಣ್ಣುಕಟ್ಟಿ, ಅಂಗೈಗಳಿಂದ ಅವನ ಮುಖದ ಮೇಲೆ ಹೊಡೆದು, "ಓ ಕ್ರಿಸ್ತ, ನಿನ್ನನ್ನು ಹೊಡೆದವರಾರು ? ಭವಿಷ್ಯ ಹೇಳು, ನೋಡೋಣ" ಎಂದರು. ಹೀಗೆಯೇ ದೈವದೂಷಣೆ ಮಾಡುತ್ತಾ ಇನ್ನೂ ಏನೇನೋ ಎಂದರು.

ಬೆಳಗಾಯಿತು. ಮುಖ್ಯ ಅರ್ಚಕರೂ ಊರ ಹಿರಿಯರೂ ಸೇರಿ ಯೇಸುವನ್ನು ಕೊಲ್ಲುವುದಕ್ಕೆ ಸಭೆ ನಡಸಿದರು. ಸಭೆಯ ಮುಂದೆ ಅವನನ್ನು ಕರೆತಂದು, "ನೀನು ಕ್ರಿಸ್ತನೆ ? ಹೇಳು" ಎಂದರು. ಅವನು

“ನಾನು ಹೇಳಿದರೆ, ನೀವು ನಂಬುವುದಿಲ್ಲ. ನಾನು ನಿಮ್ಮನ್ನು ಏನಾದರೂ ಕೇಳಿದರೆ, ನೀವು ನನಗೆ ಉತ್ತರ ಕೊಡುವುದಿಲ್ಲ, ನನ್ನನ್ನು ಹೋಗಲೂ ಬಿಡುವುದಿಲ್ಲ. ಆದರೆ ಇನ್ನುಮುಂದೆ ಮನುಷ್ಯಕುಮಾರನು ಸರ್ವಶಕ್ತನ ಬಲಗಡೆ ಕುಳಿತಿರುವುದನ್ನು ನೀವು ಕಾಣುವಿರಿ” ಎಂದನು. ಆಗ ಅವರು “ಹಾಗಾದರೆ ನೀನು ದೇವರ ಮಗನೆ?” ಎಂದು ಕೇಳಿದರು. “ನಾನು ಅವನೆಂದು ನೀವು ಹೇಳುತ್ತೀರಿ” ಎಂದನು ಯೇಸು. ಆಗ ಅವರು “ಇನ್ನೇನು ಸಾಕ್ಷಿ ಬೇಕು? ನಾವು ಇವನ ಬಾಯಿಂದಲೇ ಕೇಳಿದ್ದೇವೆ” ಎಂದು ಎದ್ದು, ಯೇಸುವನ್ನು ಕಟ್ಟಿ ಕರೆದುಕೊಂಡುಹೋಗಿ ಯೆರೂಸಲೇಮಿನ ಅಧಿಪತಿಯಾದ ಪಿಲಾತನಿಗೆ ಒಪ್ಪಿಸಿದರು.

### ಯೂದನ ದುರ್ಮರಣ

ಆಗ, ಯೇಸುವನ್ನು ಹಿಡಿದೊಪ್ಪಿಸಿದ ಯೂದನು ಅವನಿಗೆ ಮರಣ ದಂಡನೆಯಾದುದನ್ನು ಕಂಡು ಪಶ್ಚಾತ್ತಾಪಪಟ್ಟನು. “ನಿರ್ದೋಷಿಯನ್ನು ಮರಣಕ್ಕೆ ತಳ್ಳಿ ತಾನು ಪಾಪಿಯಾದೆ” ಎಂದು, ತಾನು ತೆಗೆದುಕೊಂಡ ಮೂವತ್ತು ಬೆಳ್ಳಿಯ ನಾಣ್ಯಗಳನ್ನು ಹಿಂದಕ್ಕೆ ತಂದು, ಮುಖ್ಯ ಅರ್ಚಕರಿಗೆ ಕೊಡಹೋದನು ಆದರೆ ಅವರು “ಅದು ಕಟ್ಟಿಕೊಂಡು ನಮಗೇನು? ಅದನ್ನು ನೀನು ನೋಡಿಕೊ” ಎಂದುಬಿಟ್ಟರು ಆಗ ಅವನು ಆ ಹಣವನ್ನು ಅಲ್ಲಿಯೇ ದೇವಾಲಯದಲ್ಲಿ ಬಿಸುಟು, ಹೊರಗೆ ಹೋಗಿ, ನೇಣುಹಾಕಿಕೊಂಡು ಸತ್ತನು

ಮುಖ್ಯ ಅರ್ಚಕರು ಅವನು ಬಿಸುಟುಹೋದ ಹಣವನ್ನು ತೆಗೆದುಕೊಂಡು, “ಇದು ಕೊಲೆಗೆ ಕೊಟ್ಟ ಕ್ರಯವಾದುದರಿಂದ ಇದನ್ನು ಕಾಣಿಕೆ ಪೆಟ್ಟಿಗೆಯಲ್ಲಿ ಹಾಕಬಾರದು” ಎಂದು ಆಲೋಚನೆ ಮಾಡಿ, ಪರದೇಶಿಗಳನ್ನು ಹೂಳುವುದಕ್ಕೋಸ್ಕರ ಒಬ್ಬ ಕುಂಬಾರನ ಹೊಲವನ್ನು ಆ ಹಣ ಕೊಟ್ಟು ತೆಗೆದುಕೊಂಡರು.

### ಪಿಲಾತನ ಮುಂದೆ ಯೇಸು

ಬೆಳಗ್ಗೆ ಯೇಸುವನ್ನು ಕಾಯಫನ ಮನೆಯಿಂದ ಪಿಲಾತನ ಬಳಿಗೆ ಕರೆದೊಯ್ದರಷ್ಟೆ. ಅಲ್ಲಿ ಅವರು ಒಳಗೆ ಹೋದರೆ ಮಡಿ ಕೆಟ್ಟು ಪಸ್ಕದ ಊಟಕ್ಕೆ ಅಡ್ಡಿಯಾದೀತೆಂದು ಹೊರಗೇ ನಿಂತಿದ್ದರು. ಆದ್ದರಿಂದ ಪಿಲಾ

ತನೇ ಅವರ ಬಳಿಗೆ ಬಂದು, "ಇವನ ಮೇಲೆ ನಿಮ್ಮದೇನು ದೂರು?" ಎಂದು ಕೇಳಿದನು. ಅವರು "ಇವನು ತಪ್ಪುಮಾಡಿದವನಲ್ಲದಿದ್ದರೆ, ಇವನನ್ನು ನಿನಗೆ ಹಿಡಿದೊಪ್ಪಿಸುತ್ತಿರಲಿಲ್ಲ" ಎಂದರು. ಅದಕ್ಕೆ ಪಿಲಾತನು "ನೀವೇ ಕರೆದುಕೊಂಡು ಹೋಗಿ. ನಿಮ್ಮ ಶಾಸ್ತ್ರದ ಪ್ರಕಾರ ಶಿಕ್ಷಿಸಿರಿ" ಎಂದನು. ಅದಕ್ಕೆ ಅವರು "ನಮ್ಮ ಶಾಸ್ತ್ರದ ಪ್ರಕಾರ ಯಾರಿಗೂ ಮರಣ ದಂಡ ವಿಧಿಸುವ ಅಧಿಕಾರ ನಮಗಿಲ್ಲ" ಎಂದು ಹೇಳಿ, "ಇವನು ನಮ್ಮ ಜನಾಂಗವನ್ನು ಕೆಡಿಸುತ್ತಿದ್ದಾನೆ, ಕೈಸರನಿಗೆ ಕಾಣಿಕೆ ಕೊಡಬೇಡವೆನ್ನುತ್ತಾನೆ, ತಾನು ಅರಸನಾದ ಕ್ರಿಸ್ತನೆಂದು ಹೇಳಿಕೊಳ್ಳುತ್ತಾನೆ" ಎಂದು ದೂರಿದರು.

ಆಗ ಪಿಲಾತನು ತನ್ನ ಅರಮನೆಯೊಳಕ್ಕೆ ಹೋಗಿ, ಯೇಸುವನ್ನು ಕರೆದು, "ನೀನು ಯೆಹೂದ್ಯರ ರಾಜನೊ?" ಎಂದು ಕೇಳಿದನು. ಅದಕ್ಕೆ ಯೇಸು "ಇದನ್ನು ನೀನೇ ಹೇಳುವೆಯೊ? ಅಥವಾ ಬೇರಾರಾದರೂ ನನ್ನನ್ನು ಕುರಿತು ನಿನಗೆ ಹೀಗೆ ಹೇಳಿದರೊ? ಎನ್ನಲು, ಪಿಲಾತನು "ನಾನೇನು ಯೆಹೂದ್ಯನೆ? ನಿನ್ನ ಸ್ವಂತ ಜನವೂ ಮುಖ್ಯ ಅರ್ಚಕರೂ ನಿನ್ನನ್ನು ಹಿಡಿದು ತಂದು ನನಗೆ ಒಪ್ಪಿಸಿದ್ದಾರೆ. ನೀನು ಏನು ಮಾಡಿರುವೆ?" ಎಂದನು.

ಅದಕ್ಕೆ ಯೇಸು "ನನ್ನ ರಾಜ್ಯ ಈ ಲೋಕದ್ದಲ್ಲ. ನನ್ನ ರಾಜ್ಯ ಈ ಲೋಕದ್ದು ಆಗಿದ್ದರೆ, ಯೆಹೂದ್ಯರ ಕೈಗೆ ನಾನು ಬೀಳದಂತೆ ನನ್ನ ಸೇವಕರು ಖಂಡಿತ ಹೋರಾಡುತ್ತಿದ್ದರು. ಆದರೆ ನನ್ನ ರಾಜ್ಯ ಇಲ್ಲಿಯದಲ್ಲ" ಎಂದನು.

"ಹಾಗಾದರೆ ನೀನು ಅರಸನೊ?" ಎಂದನು ಪಿಲಾತ. ಅದಕ್ಕೆ ಯೇಸು "ನಾನು ಅರಸನೆಂದು ನೀನು ಹೇಳುವೆ. ಸತ್ಯವನ್ನು ಕುರಿತು ಸಾಕ್ಷಿ ಹೇಳುವುದಕ್ಕಾಗಿಯೇ ನಾನು ಹುಟ್ಟಿದುದು, ಅದಕ್ಕಾಗಿಯೇ ನಾನು ಭೂಮಿಗೆ ಬಂದುದು. ಸತ್ಯಪರರೆಲ್ಲರೂ ನನ್ನ ಮಾತು ಕೇಳುವರು" ಎಂದನು.

ಆಗ ಪಿಲಾತನು "ಸತ್ಯವೆಂದರ ಏನು?" ಎಂದು ಪ್ರಶ್ನಿಸಿ, ಅಲ್ಲಿ ನಿಲ್ಲದೆ ಹೊರಗೆ ಯೆಹೂದ್ಯರ ಬಳಿಗೆ ಬಂದು, "ಅವನಲ್ಲಿ ನಾನು ಏನೂ

ದೋಷ ಕಾಣೆ” ಎಂದನು. ಆಗ ಯೆಹೂದ್ಯರು ಅವನ ಮೇಲೆ ಅನೇಕ ದೂರು ತಂದರು. ಆದರೂ ಯೇಸು ಅವರ ದೂರಿಗೆ ಉತ್ತರ ಕೊಡಲಿಲ್ಲ. ಪಿಲಾತನು “ನಿನ್ನ ಮೇಲೆ ಎಂತೆಂತಹ ಆರೋಪಣೆಗಳನ್ನು ತರುವರು, ಕೇಳಿಸುವುದಿಲ್ಲವೆ?” ಎಂದನು. ಆದರೂ ಅವನು ಒಂದು ಮಾತೂ ಆಡಲಿಲ್ಲ. ಪಿಲಾತನಿಗೆ ಬಹಳ ಆಶ್ಚರ್ಯವಾಯಿತು.

ಪಿಲಾತನು ಪುನಃ ಅವರನ್ನು ಕುರಿತು “ಇವನಲ್ಲಿ ನಾನು ಏನೂ ದೋಷ ಕಾಣೆ” ಎಂದನು. ಆದರೆ ಅವರು “ಗಲಿಲಾಯ ಮೊದಲು ಗೊಂಡು ಯೂದಾಯದಲ್ಲೆಲ್ಲಾ ಇವನು ಜನರನ್ನೆಲ್ಲಾ ಎತ್ತಿಕಟ್ಟು ತ್ತಾನೆ” ಎಂದು ಉದ್ರೇಕದಿಂದ ಹೇಳಿದರು

ಗಲಿಲಾಯದ ಹೆಸರನ್ನು ಕೇಳಿ, ಪಿಲಾತನು ‘ಇವನು ಗಲಿಲಾಯ ದವನೇ?’ ಎಂದು ಕೇಳಿದನು. ಆದ್ದರಿಂದ ಅವನು ಹೆರೋದನ ಅಧಿ ಕಾರಕ್ಕೆ ಒಳಪಟ್ಟವನೆಂದು ತಿಳಿದು, ಅವನನ್ನು ಹೆರೋದನ ಬಳಿಗೆ ಕಳಿಸಿದನು. ಹೆರೋದನೂ ಅದೇ ಕಾಲದಲ್ಲಿ ಯೆರೂಸಲೇಮಿಗೆ ಬಂದಿದ್ದನು.

### ಹೆರೋದನ ಮುಂದೆ ಯೇಸು

ಯೇಸುವನ್ನು ಕಂಡು ಹೆರೋದನಿಗೆ ಸಂತೋಷವಾಯಿತು. ಹೆರೋದನು ಬಹುಕಾಲದಿಂದ ಅವನನ್ನು ಕಾಣಬೇಕೆಂದಿದ್ದನು. ಅವನ ಅನೇಕ ಅದ್ಭುತಕಾರ್ಯಗಳನ್ನು ಕೇಳಿದ್ದನು, ಕಾಣಬೇಕೆಂದೂ ಆಸೆ ಪಡುತ್ತಿದ್ದನು. ಯೇಸುವನ್ನು ಕಂಡಾಗ ಅನೇಕವಾಗಿ ಪ್ರಶ್ನಿಸಿದನು. ಯೇಸು ಒಂದಕ್ಕೂ ಉತ್ತರ ಕೊಡಲಿಲ್ಲ. ಮುಖ್ಯ ಅರ್ಚಕರೂ ಯೆಹೂದ್ಯ ಶಾಸ್ತ್ರಿಗಳೂ ಹತ್ತಿರದಲ್ಲಿಯೇ ನಿಂತು ಅವನನ್ನು ಮೇಲಿಂದ ಮೇಲೆ ದೂರಿದರು. ಹೆರೋದನು ತನ್ನ ಸೈನಿಕರನ್ನು ಸೇರಿಸಿಕೊಂಡು ಯೇಸು ವನ್ನು ತಿರಸ್ಕರಿಸಿದನು, ಅಣಕಿಸಿದನು, ಅವನಿಗೆ ಬಿಳಿಯ ಉಡುಪನ್ನು ಉಡಿಸಿ ಪುನಃ ಪಿಲಾತನ ಬಳಿಗೇ ಕಳಿಸಿಕೊಟ್ಟನು.

### ಪುನಃ ಪಿಲಾತನ ಮುಂದೆ ಯೇಸು

ಪಿಲಾತನು ಮುಖ್ಯ ಅರ್ಚಕರನ್ನೂ ಇತರ ಜನರನ್ನೂ ಕರೆದು, “ಇವನು ಜನರನ್ನು ಕೆಡಿಸುವನೆಂದು ಇಲ್ಲಿಗೆ ಕರೆತಂದಿರುವಿರಿ. ನಾನು

ನಿಮ್ಮ ಎದುರಿಗೇ ಇವನನ್ನು ವಿಚಾರಿಸಿದ್ದೇನೆ, ನೀವು ದೂರುವಂತಹ ದೋಷಗಳು ಇವನಲ್ಲಿ ಕಂಡುಬರುವುದಿಲ್ಲ. ಹೆರೋದನಿಗೆ ಕೂಡ ಇವನಲ್ಲಿ ಏನೂ ದೋಷ ಕಂಡುಬರಲಿಲ್ಲ. ನಿಮ್ಮನ್ನೇ ಹೆರೋದನ ಬಳಿಗೆ ಕಳಿಸಿದೆ, ಇವನು ಮರಣದಂಡನೆಗೆ ಯೋಗ್ಯನೆಂದಾಗಲಿಲ್ಲ. ಆದ್ದರಿಂದ ಇವನನ್ನು ಹೊಡೆಸಿ ಬಿಟ್ಟುಬಿಡುತ್ತೇನೆ'' ಎಂದನು.

ಆ ಹಬ್ಬದ ದಿನದಲ್ಲಿ ಆಗ ಒಂದು ಪದ್ಧತಿಯಿತ್ತು : ಜನರು ತಮಗೆ ಬೇಕಾದವನೊಬ್ಬನನ್ನು ಸೆರೆಮನೆಯಿಂದ ಆಯ್ದು ಬಿಡಿಸಬಹುದಾಗಿತ್ತು ಆಗ ಬರಬ್ಬನೆಂಬವನು ಸೆರೆಯಲ್ಲಿದ್ದನು. ಇವನು ಒಂದು ದಂಗೆಯಲ್ಲಿ ಭಾಗವಹಿಸಿ, ಆ ಸಮಯದಲ್ಲಿ ಕೊಲೆ ಮಾಡಿ ಸೆರೆ ಸೇರಿದ್ದನು. ಪಿಲಾತನು ಅಲ್ಲಿ ಸೇರಿದ್ದ ಜನರನ್ನು ಕುರಿತು, "ಬರಬ್ಬನನ್ನು ಬಿಡಲೆ? ಅಥವಾ ಕ್ರಿಸ್ತನೆಂದು ಹೆಸರಾಗಿರುವ ಯೇಸುವನ್ನು ಬಿಡಲೆ?" ಎಂದು ಕೇಳಿದನು.

ಬರಬ್ಬನನ್ನು ಬಿಟ್ಟುಕೊಟ್ಟು ಯೇಸುವನ್ನು ಕೊಲ್ಲಬೇಕೆಂದು ಕೇಳಿಕೊಳ್ಳುವಂತೆ ಮುಖ್ಯ ಅರ್ಚಕರೂ ಹಿರಿಯರೂ ಜನಕ್ಕೆ ಪ್ರೋತ್ಸಾಹಿಸಿದರು. ಅದರಂತೆಯೇ ಅವರೆಲ್ಲರೂ ಒಂದೇ ಗಂಟಲಿನಿಂದ "ಬರಬ್ಬನನ್ನು ಬಿಟ್ಟುಕೊಡು, ಇವನನ್ನು ಕೊಲ್ಲು" ಎಂದು ಕೂಗಿದರು. ಅವರು ಕೇಳಿದ ಆ ಬರಬ್ಬನು ಕೊಲೆ ಮಾಡಿದ್ದ ಕಳ್ಳ.

ಪುನಃ ಪಿಲಾತನು ಯೇಸುವನ್ನು ಬಿಟ್ಟುಬಿಡಲು ಬಯಸಿ, "ಕ್ರಿಸ್ತನೆಂದು ಹೆಸರಾಗಿರುವ ಯೇಸುವನ್ನು, ಯೆಹೂದ್ಯರ ರಾಜನನ್ನು, ಏನು ಮಾಡಲಿ?" ಎಂದು ಕೇಳಿದನು. ಅವರು ಪುನಃ "ಅವನನ್ನು ಶಿಲುಬೆಗೇರಿಸು, ಅವನನ್ನು ಶಿಲುಬೆಗೇರಿಸು" ಎಂದು ಕೂಗಿಕೊಂಡರು.

ಪಿಲಾತನು ಪುನಃ ಮೂರನೆಯ ಸಲ "ಈ ಮನುಷ್ಯನು ಏನು ಕೇಡುಮಾಡಿದ್ದಾನೆ? ಇವನಿಗೆ ಮರಣ ವಿಧಿಸಲು ನನಗೇನೂ ಕಾರಣ ಕಾಣುವುದಿಲ್ಲ. ಆದ್ದರಿಂದ ಇವನನ್ನು ಹೊಡೆಸಿ ಬಿಟ್ಟುಬಿಡುವೆನು" ಎಂದನು. ಆದರೆ ಅವನನ್ನು ಶಿಲುಬೆಗೇರಿಸಬೇಕೆಂದು ಅವರು ಒಂದೇ ಸಮನೆ ಕೂಗಿಕೊಂಡರು. ಅವರ ಮಾತೇ ನಡೆಯಿತು.

ಹೀಗೆ ಪಿಲಾತನು ವಿಚಾರಣೆ ನಡಸುತ್ತಾ ಕುಳಿತಿರುವಾಗ, ಅವನ ಹೆಂಡತಿಯು "ಆ ನ್ಯಾಯಪರನ ಗೊಡವೆ ನಿನಗೆ ಬೇಡ. ಅವನಿಂದಾಗಿ

ಈ ರಾತ್ರಿ ನಾನು ಸ್ವಪ್ನದಲ್ಲಿ ಬಹಳ ಅನುಭವಿಸಿದ್ದೇನೆ'' ಎಂದು ಹೇಳಿ ಕಳಿಸಿದಳು.

ಪಿಲಾತನು ತನ್ನಿಂದ ಏನೂ ನಡೆಯದುದನ್ನೂ ಬರಿಯ ಗಲಭೆ ಯಾಗುತ್ತಿದ್ದುದನ್ನೂ ಕಂಡು, ನೀರು ತೆಗೆದುಕೊಂಡು, ಜನರ ಎದುರಿಗೆ ಕೈ ತೊಳೆದುಕೊಂಡು, ``ಈ ನ್ಯಾಯಪರನ ಮರಣದ ಪಾಪ ನನ್ನದಲ್ಲ, ಅದು ನಿಮಗೇ ಸೇರಿದ್ದು'' ಎಂದನು. ``ಆ ಪಾಪ ನಮಗಿರಲಿ, ನಮ್ಮ ಮಕ್ಕಳಿಗಿರಲಿ'' ಎಂದು ಎಲ್ಲರೂ ಕೂಗಿಕೊಂಡರು.

ಆಗ ಪಿಲಾತನು ಜನರನ್ನು ತೃಪ್ತಿಗೊಳಿಸುವುದಕ್ಕೋಸ್ಕರ ಅವರು ಹೇಳಿದಂತೆಯೇ ಆಗಲೆಂದು ತೀರ್ಪುಕೊಟ್ಟನು ಕೊಲೆ ದಂಗೆಗಳಿಗಾಗಿ ಸೆರೆ ಸೇರಿದ್ದ ಬರಬ್ಬನನ್ನು ಅವರ ಇಷ್ಟದಂತೆಯೇ ಬಿಟ್ಟುಕೊಟ್ಟನು ಆದರೆ ಯೇಸುವನ್ನು ಕಶೆಯಿಂದ ಹೊಡೆಸಿ, ಅವರ ಇಷ್ಟದಂತೆ ಶಿಲುಬೆಗೆ ಏರಿಸಲು ಒಪ್ಪಿಸಿದನು.

ಅನಂತರ ಪಿಲಾತನ ಸೈನಿಕರು ಯೇಸುವನ್ನು ಅಂಗಳಕ್ಕೆ ಕರೆ ತಂದರು. ಪಡೆಯೆಲ್ಲವೂ ಅವನ ಸುತ್ತಾ ಸೇರಿ, ಅವನ ಬಟ್ಟೆಯನ್ನು ಸುಲಿದು, ಕೆಂಪು ಬಟ್ಟೆಯನ್ನು ಹೊದಿಸಿದರು. ಮುಳ್ಳುಗಳ ಕಿರೀಟ ವನ್ನು ಹೆಣೆದು ಅವನ ತಲೆಯ ಮೇಲಿಟ್ಟು, ಬಲಗೈಯಲ್ಲಿ ಒಂದು ಬೆತ್ತ ವನ್ನು ಕೊಟ್ಟರು. ಅವನ ಮುಂದೆ ಮೊಣಕಾಲೂರಿ ``ಯೆಹೂದ್ಯರ ಅರಸನಿಗೆ ಜಯವಾಗಲಿ!'' ಎಂದು ಘೋಷಿಸಿದರು. ಬಳಿಕ ಅವನ ಮೇಲೆ ಉಗಿದರು, ಕೈಯ ಬೆತ್ತವನ್ನು ತೆಗೆದುಕೊಂಡು ತಲೆಯ ಮೇಲೆ ಬಡಿದರು.

ಪಿಲಾತನು ಪುನಃ ಹೊರಗೆ ಬಂದು, ಯೇಸುವನ್ನು ಕರೆತಂದು, ``ಇದೋ ಇವನನ್ನು ನೋಡಿ. ಇವನಲ್ಲಿ ನಾನು ಏನೂ ದೋಷ ಕಾಣೆ.'' ಎಂದನು. ಮುಖ್ಯ ಅರ್ಚಕರೂ ಇತರ ಸೇವಕರೂ ಅವನನ್ನು ಕಂಡು, ``ಅವನನ್ನು ಶಿಲುಬೆಗೇರಿಸು! ಅವನನ್ನು ಶಿಲುಬೆಗೇರಿಸು'' ಎಂದು ಕೂಗಿಕೊಂಡರು. ಆಗ ಪಿಲಾತನು ``ನೀವೇ ಇವನನ್ನು ಕೊಂಡು ಹೋಗಿ ಶಿಲುಬೆಗೆ ಹಾಕಿ. ಇವನಲ್ಲಿ ನಾನು ಏನೂ ದೋಷ ಕಾಣೆ'' ಎಂದನು. ಅದಕ್ಕೆ ಯೆಹೂದ್ಯರು ``ನಮಗೊಂದು ನಿಯಮವುಂಟು.

ಅದರ ಪ್ರಕಾರ, ಇವನು ತಾನು ದೇವರ ಮಗನೆಂದುಕೊಂಡದ್ದರಿಂದ ಮರಣಕ್ಕೆ ಗುರಿಯಾಗಬೇಕು" ಎಂದರು.

ಪಿಲಾತನು ಅವರ ಮಾತು ಕೇಳಿ ಇನ್ನೂ ಹೆದರಿದನು ಪುನಃ ಅರಮನೆಯೊಳಕ್ಕೆ ಬಂದು, "ನೀನು ಎಲ್ಲಿಂದ ಬಂದವನು ?" ಎಂದನು. ಯೇಸು ಉತ್ತರ ಕೊಡಲಿಲ್ಲ.

ಅದಕ್ಕೆ ಪಿಲಾತನು "ನನ್ನೊಡನೆ ನೀನು ಮಾತನಾಡುವುದಿಲ್ಲವೋ? ನಿನ್ನನ್ನು ಶಿಲುಬೆಗೆ ಹಾಕುವುದಕ್ಕೂ ನಿನ್ನನ್ನು ಬಿಡುಗಡೆ ಮಾಡುವುದಕ್ಕೂ ನನಗೆ ಅಧಿಕಾರವಿದೆಯೆಂಬುದು ತಿಳಿಯದೋ?" ಎಂದು ಕೇಳಿದನು.

ಅದಕ್ಕೆ ಯೇಸು "ಮೇಲಿನಿಂದ ಕೊಟ್ಟ ಹೊರತು ನನ್ನ ಮೇಲೆ ನಿನಗೆ ಏನೂ ಅಧಿಕಾರವಿರುತ್ತಿರಲಿಲ್ಲ. ಆದ್ದರಿಂದ ನನ್ನನ್ನು ನಿನಗೆ ಒಪ್ಪಿಸಿದವನಿಗೆ ಹೆಚ್ಚು ಪಾಪ" ಎಂದನು

ತರುವಾಯ ಯೇಸುವನ್ನು ಬಿಟ್ಟುಬಿಡಲು ಪಿಲಾತನು ನೋಡಿದನು. ಆದರೆ ಯೆಹೂದ್ಯರು "ನೀನು ಇವನನ್ನು ಬಿಟ್ಟುಕೊಟ್ಟರೆ ನೀನು ಕೈಸರನ ಸ್ನೇಹಿತನಲ್ಲ ತನ್ನನ್ನು ಅರಸನೆಂದು ಮಾಡಿಕೊಳ್ಳುವವನು ಕೈಸರನ ವಿರೋಧಿ" ಎಂದು ಕೂಗಿಕೊಂಡರು

ಪಿಲಾತನು ಅವರ ಆ ಕೂಗನ್ನು ಕೇಳಿ, ಯೇಸುವನ್ನು ಹೊರಗೆ ಕರೆಸಿದನು. ಕಲ್ಲು ಹಾಸಿದ್ದ ಕಟ್ಟೆಯ ಮೇಲಿದ್ದ ನ್ಯಾಯಪೀಠದ ಮೇಲೆ ಕುಳಿತು, "ಇದೋ ನಿಮ್ಮ ಅರಸನನ್ನು ನೋಡಿ!" ಎಂದನು. "ಅವನನ್ನು ಕೊಲ್ಲಿಸು, ಕೊಲ್ಲಿಸು, ಅವನನ್ನು ಶಿಲುಬೆಗೆ ಹಾಕು" ಎಂದು ಅವರು ಕೂಗಿದರು "ನಿಮ್ಮ ಅರಸನನ್ನು ಶಿಲುಬೆಗೆ ಹಾಕಲೆ?" ಎಂದನು ಪಿಲಾತ. ಅದಕ್ಕೆ ಮುಖ್ಯ ಅರ್ಚಕರೆಲ್ಲಾ "ಕೈಸರನ ಹೊರತು ನಮಗೆ ಬೇರೆ ಅರಸನಿಲ್ಲ" ಎಂದರು

ಆಗ ಪಿಲಾತನು ಅವನನ್ನು ಶಿಲುಬೆಗೆ ಏರಿಸುವುದಕ್ಕಾಗಿ ಅವರಿಗೆ ಒಪ್ಪಿಸಿದನು. ಅವರು ಅವನನ್ನು ಕರೆದುಕೊಂಡರು, ಹಾಸ್ಯಮಾಡಿದರು, ಅವನ ಕೆಂಪು ಹೊದಿಕೆಯನ್ನು ಕಿತ್ತರು, ಅವನ ಬಟ್ಟೆಯನ್ನೇ ಅವನಿಗೆ ಹಾಕಿದರು, ಶಿಲುಬೆಗೆ ಏರಿಸಲು ಅವನನ್ನು ಕರೆದೊಯ್ದರು.

## ಗೊಲ್ಗೊಥಾ

ಯೇಸು ತನ್ನ ಶಿಲುಬೆಯನ್ನು ತಾನೇ ಹೊತ್ತುಕೊಂಡುಹೋದನು. ಅವನ ಜೊತೆಯಲ್ಲಿಯೇ ಮರಣದಂಡನೆಗೆ ಗುರಿಯಾದವರು ಇನ್ನಿಬ್ಬರೂ ಹೋದರು. ದಾರಿಯಲ್ಲಿ, ಹೊಲದಿಂದ ಬರುತ್ತಿದ್ದ ರೂಫನೆಂಬವನನ್ನು ಹಿಡಿದು ಯೇಸುವಿನ ಶಿಲುಬೆಯನ್ನು ಅವನಿಂದ ಹೊರಿಸಿದರು.

ಯೇಸುವನ್ನು ಗೊಲ್ಗೊಥಾ ಅಥವಾ ತಲೆಯ ಚಿಪ್ಪುಗಳ ಸ್ಥಳ ಎಂಬಲ್ಲಿಗೆ ಒಯ್ದರು. ಅಲ್ಲಿ ಅವನಿಗೆ ಕಹಿ ಬೆರಸಿದ ದ್ರಾಕ್ಷಾರಸ ಕೊಟ್ಟರು. ಅವನು ಅದರ ರುಚಿ ನೋಡಿ ಕುಡಿಯದೆ ಬಿಟ್ಟನು. ಆಗ ಬೆಳಗ್ಗೆ ಒಂಬತ್ತು ಗಂಟೆಯಾಗಿತ್ತು. ಆಗ ಅವರು ಅವನನ್ನು ಶಿಲುಬೆಗೆ ಏರಿಸಿದರು. ಉಳಿದ ಕಳ್ಳರಿಬ್ಬರನ್ನು ಯೇಸುವಿನ ಎರಡೂ ಕಡೆ ಶಿಲುಬೆಗೆ ಏರಿಸಿದರು. ಆಗ ಯೇಸು "ತಂದೆಯೇ, ಅವರನ್ನು ಕ್ಷಮಿಸು. ತಾವೇನು ಮಾಡುವೆವೆಂದು ಅವರು ಅರಿಯರು" ಎಂದನು.

ಯೇಸುವನ್ನು ಶಿಲುಬೆಗೇರಿಸಿದುದರ ಕಾರಣವನ್ನು ಪಿಲಾತನು ಬರೆಸಿ ಅವನ ಶಿಲುಬೆಯ ತಲೆಯಲ್ಲಿ ಹಾಕಿಸಿದನು. ಅದರಲ್ಲಿ "ಯೆಹೂದ್ಯರ ಅರಸನಾದ ನಜರೇತಿನ ಯೇಸು" ಎಂದು ಇಬ್ರೀಯ, ಗ್ರೀಕ್ ಮತ್ತು ಲಾತೀನ್ ಭಾಷೆಗಳಲ್ಲಿ ಬರೆದಿತ್ತು. ಯೆಹೂದ್ಯರು ಅದನ್ನು ಓದಿದರು. ಆಗ ಮುಖ್ಯ ಅರ್ಚಕರು ಪಿಲಾತನನ್ನು ಕುರಿತು "ಯೆಹೂದ್ಯರ ಅರಸನೆಂದು ಬರೆಯಬೇಡ, ಯೆಹೂದ್ಯರ ಅರಸನೆಂದು ಹೇಳಿಕೊಂಡವನೆಂದು ಬರೆ" ಎಂದರು. ಅದಕ್ಕೆ ಪಿಲಾತನು "ನಾನು ಬರೆದುದು ಬರೆದಾಯಿತು" ಎಂದುಬಿಟ್ಟನು.

ಸೈನಿಕರು, ಯೇಸುವನ್ನು ಶಿಲುಬೆಗೇರಿಸಿದ ಮೇಲೆ, ಅವನ ಬಟ್ಟೆಗಳನ್ನೂ ಅಂಗಿಯನ್ನೂ ತೆಗೆದುಕೊಂಡರು. ಬಟ್ಟೆಗಳನ್ನು ನಾಲ್ಕುಭಾಗ ಮಾಡಿ ಹಂಚಿಕೊಂಡರು. ಅಂಗಿ ಮಾತ್ರ ಹೊಲಿಗೆಯಿಲ್ಲದೆ ಮೇಲಿನಿಂದ ಕೆಳಗಿನ ವರೆಗೆ ಅಖಂಡವಾಗಿದ್ದುದರಿಂದ, ಚೀಟಿ ಹಾಕಿ ಅದನ್ನು ಎತ್ತಿಕೊಂಡರು. ಸೈನಿಕರು ಇಷ್ಟೆಲ್ಲಾ ಮಾಡಿ, ಅವನನ್ನು ಕಾಯುತ್ತಾ ಕುಳಿತರು. ಜನರೆಲ್ಲಾ ನೋಡುತ್ತಾ ನಿಂತರು.

ಪಕ್ಕದಲ್ಲಿ ಹಾದುಹೋದವರು "ಆಹಾ, ದೇವಾಲಯವನ್ನು ನಾಶ ಮಾಡಿದರೆ, ಮೂರು ದಿನಗಳಲ್ಲಿ ಅದನ್ನು ಮತ್ತೆ ಕಟ್ಟುವವನು ಈಗ ನಿನ್ನನ್ನು ಉಳಿಸಿಕೋ. ನೀನು ದೇವರ ಮಗನಾದರೆ, ಶಿಲುಬೆಯಿಂದ ಇಳಿದು ಬಾ" ಎಂದು ದೈವದೂಷಣೆ ಮಾಡಿದರು.

ಮುಖ್ಯ ಅರ್ಚಕರೂ ಯೆಹೂದ್ಯಶಾಸ್ತ್ರಿಗಳೂ ಹಿರಿಯರೂ "ಇತರರನ್ನು ಕಾಪಾಡಿದವನು ತನ್ನನ್ನು ಕಾಪಾಡಿಕೊಳ್ಳಲಾರ. ಇಸ್ರಯೇಲದ ರಾಜನಾದ ಕ್ರಿಸ್ತನು ಶಿಲುಬೆಯಿಂದ ಇಳಿದು ಬರಲಿ, ನಾವು ನೋಡಿ ನಂಬುವೆವು. ಇವನು ದೇವರನ್ನು ನಂಬಿದವನಲ್ಲವೆ! ತಾನು ದೇವರ ಮಗನೆಂದವನಲ್ಲವೆ! ದೇವರು ಬೇಕಾದರೆ ಬಂದು ಇವನನ್ನು ಬಿಡಿಸಲಿ" ಎಂದು ಅಣಕಿಸಿದರು.

ಸೈನಿಕರೂ ಬಂದು ಅವನಿಗೆ ಹುಳಿರಸವನ್ನು ನೀಡಿ, "ನೀನು ಯೆಹೂದ್ಯರ ಅರಸನಾಗಿದ್ದರೆ, ನಿನ್ನನ್ನು ಉಳಿಸಿಕೊ" ಎಂದು ಅಣಕಿಸಿದರು.

ಅವನೊಡನೆ ಶಿಲುಬೆಗೆ ಸಿಕ್ಕಿದ ಇಬ್ಬರು ಕಳ್ಳರೂ ಅದೇ ರೀತಿ ಅವನನ್ನು ಅಣಕಿಸಿದರು. ಅವರಲ್ಲಿ ಒಬ್ಬನು "ನೀನು ಕ್ರಿಸ್ತನಾಗಿದ್ದರೆ, ನಿನ್ನನ್ನೂ ಉಳಿಸಿಕೊಂಡು ನಮ್ಮನ್ನೂ ಉಳಿಸು" ಎಂದು ಹಂಗಿಸಿದನು. ಆದರೆ ಇನ್ನೊಬ್ಬನು ಅವನನ್ನು ಗದರಿಸಿ, "ನೀನೂ ಇದೇ ಮರಣಕ್ಕೆ ಈಡಾಗಿರುವುದನ್ನು ಕಾಣೆಯ? ನಿನಗೆ ದೇವರ ಹೆದರಿಕೆಯಿಲ್ಲವೆ? ನಮಗಾದರೂ ಈ ಶಿಕ್ಷೆ ನ್ಯಾಯ, ನಮಗೆ ನಮ್ಮ ಕೆಲಸಕ್ಕೆ ತಕ್ಕ ಫಲ ದೊರಕಿದೆ. ಆದರೆ ಇವನೇನೂ ಪಾಪ ಮಾಡಿಲ್ಲ" ಎಂದು ಹೇಳಿ, "ಸ್ವಾಮಿ, ನೀನು ನಿನ್ನ ರಾಜ್ಯಕ್ಕೆ ಬಂದಾಗ ನನ್ನನ್ನು ಜ್ಞಾಪಿಸಿಕೊ" ಎಂದು ಯೇಸುವನ್ನು ಬೇಡಿದನು. ಅದಕ್ಕೆ ಯೇಸು "ತಥಾಸ್ತು. ಇದೇ ದಿನ ನೀನು ನನ್ನೊಡನೆ ಪರಲೋಕದಲ್ಲಿರುವೆ" ಎಂದನು.

ಆಗ ಯೇಸುವಿನ ಶಿಲುಬೆಯ ಬಳಿ ಅವನ ತಾಯಿಯೂ ಅವಳ ತಂಗಿಯೂ ಮಗ್ದಲದ ಮರಿಯಳೂ ನಿಂತಿದ್ದರು. ಯೇಸು ತನ್ನ ತಾಯಿಯನ್ನೂ ತನ್ನ ಪ್ರೀತಿಯ ಶಿಷ್ಯಳನ್ನೂ ಕಂಡು, ತನ್ನ ತಾಯಿಯನ್ನು ಕುರಿತು, "ಅಮ್ಮಾ, ಇದೋ, ನಿನ್ನ ಮಗ" ಎಂದನು. ಅನಂತರ ತನ್ನ

ಶಿಷ್ಯಳನ್ನು ಕುರಿತು, "ಇದೋ, ನಿನ್ನ ತಾಯಿ" ಎಂದನು. ಆ ಗಳಿಗೆಯಿಂದ ಆ ಶಿಷ್ಯಳು ಅವಳನ್ನು ತನ್ನೊಡನೆ ಕರೆದುಕೊಂಡಳು.

ಆಗ ಹೆಚ್ಚೂ ಕಡಿಮೆ ಮಧ್ಯಾಹ್ನವಾಗಿತ್ತು. ಆಗಿನಿಂದ ಮೂರು ಗಂಟೆಯ ವರೆಗೆ ದೇಶದ ಮೇಲೆಲ್ಲಾ ಕತ್ತಲೆ ಕವಿಯಿತು, ಸೂರ್ಯನು ಕಾಂತಿಗುಂದಿದನು.

ಮೂರು ಗಂಟೆಯ ವೇಳೆಗೆ ಯೇಸು "ದೇವರೇ! ದೇವರೇ! ಏಕೆನ್ನ ಕೈಬಿಟ್ಟೆ?" ಎಂದು ಗಟ್ಟಿಯಾಗಿ ಕೂಗಿಕೊಂಡನು. ಅನಂತರ 'ದಾಹ!' ಎಂದನು. ಬಳಿಯಲ್ಲಿಯೇ ಹುಳಿರಸ ತುಂಬಿದ ಬಟ್ಟಲಿತ್ತು. ಒಡನೆಯೆ ಒಬ್ಬನು ಓಡಿಬಂದು, ಸ್ಪಂಜಿನಲ್ಲಿ ಹುಳಿರಸವನ್ನು ತುಂಬಿ, ಒಂದು ಬೆತ್ತದ ತುದಿಗಿಟ್ಟು, ಅವನ ಬಾಯಿಗೆ ನೀಡಿ, ಕುಡಿಸಿದನು. ಕುಡಿದನಂತರ ಯೇಸು "ಮುಗಿಯಿತು. ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸುವೆನು" ಎಂದು ಗಟ್ಟಿಯಾಗಿ ಕೂಗಿಕೊಂಡು, ತಲೆಯನ್ನು ಬಗ್ಗಿಸಿ, ಜೀವವನ್ನು ಒಪ್ಪಿಸಿದನು.

ಆಗ, ದೇವಾಲಯದ ತೆರೆ ಮೇಲಿನಿಂದ ಕೆಳಗಿನ ವರೆಗೆ ಎರಡಾಗಿ ಸೀಳಿಹೋಯಿತು. ಭೂಮಿ ನಡುಗಿತು, ಬಂಡೆಗಳು ಸಿಡಿದುವು. ಯೇಸುವಿನ ಹತ್ತಿರವಿದ್ದ ಶತಾಧಿಪತಿ, ಯೇಸು ಹಾಗೆ ಕೂಗಿ ಜೀವ ಬಿಟ್ಟುದನ್ನು ಕಂಡು, "ಇವನೀಗ ನಿಜವಾಗಿ ದೇವರ ಮಗನಾಗಿದ್ದನು" ಎಂದನು. ಅವನೊಡನೆ ಯೇಸುವಿನ ಕಾವಲಿಗೆ ನಿಂತಿದ್ದವರು ಭೂಕಂಪವೇ ಮುಂತಾದುವನ್ನು ಕಂಡು, ಬಹು ಹೆದರಿ, "ಇವನೀಗ ನಿಜವಾಗಿ ದೇವರ ಮಗನಾಗಿದ್ದನು" ಎಂದರು. ಅಲ್ಲಿಗೆ ನೋಡಲು ಬಂದಿದ್ದವರೆಲ್ಲರೂ ಅಲ್ಲಿ ನಡೆದುದನ್ನು ಕಂಡು ಎದೆ ಬಡಿದುಕೊಳ್ಳುತ್ತಾ ಹಿಂದಿರುಗಿದರು.

## ಯೇಸುವನ್ನು ಒಪ್ಪಮಾಡಿದುದು

ಮಾರನೆಯ ದಿನ ಸಬ್ಬತ್‌ದಿನವಾದುದರಿಂದ, ಶಿಲುಬೆಯ ಮೇಲಿನ ದೇಹಗಳನ್ನು ಅಂದೇ ಕೆಳಗಿಳಿಸಬೇಕೆಂದು ಯೆಹೂದ್ಯರು ಪಿಲಾತನನ್ನು ಪ್ರಾರ್ಥಿಸಿದರು ಯೇಸುವಿನ ಪಕ್ಕಗಳಲ್ಲಿದ್ದ ಕಳ್ಳರು ಇನ್ನೂ ಸತ್ತಿರಲಿಲ್ಲವಾದುದರಿಂದ, ಅವರನ್ನು ಕಾಲುಮುರಿದು ಕೊಂದರು. ಯೇಸು

ಮಾತ್ರ ಮೊದಲೇ ಸತ್ತಿದ್ದುದರಿಂದ ಅವನ ಒಂದು ಪಕ್ಕವನ್ನು ಶೂಲದಿಂದ ತಿವಿದರು. ಅಲ್ಲಿಂದ ರಕ್ತವೂ ನೀರೂ ಹೊರಗೆ ಬಂದಿತು.

ಆಗ ಅರಿಮಥಾಯವೆಂಬ ಯೆಹೂದ್ಯರ ಊರಿನ ಯೋಸೇಫನೆಂಬವನು ಪಿಲಾತನ ಬಳಿಗೆ ಗುಟ್ಟಾಗಿ ಹೋಗಿ ಯೇಸುವಿನ ದೇಹವನ್ನು ಬೇಡಿದನು. ಪಿಲಾತನ ಒಪ್ಪಿಗೆಯನ್ನು ಪಡೆದು, ಯೋಸೇಫನೂ ಇನ್ನೊಬ್ಬನೂ ಸೇರಿ, ಯೆಹೂದ್ಯರಿಗೆ ಒಪ್ಪಮಾಡಬೇಕಾದ ಕ್ರಮದಂತೆ ಆ ದೇಹವನ್ನು ಸುಗಂಧದ್ರವ್ಯಗಳಲ್ಲೂ ನಾರುಮಡಿಯಲ್ಲೂ ಸುತ್ತಿದರು. ಅವನನ್ನು ಶಿಲುಬೆಗೆ ಹಾಕಿದ ಬಳಿಯಲ್ಲಿಯೇ ಒಂದು ತೋಟದಲ್ಲಿ ಬಂಡೆಯೊಳಗೆ ಕೊರೆದ ಸಮಾಧಿಯೊಂದನ್ನು ಮಾಡಿದ್ದರು ಅಲ್ಲಿ ಅವನನ್ನು ಮಲಗಿಸಿ, ಸಮಾಧಿಯ ಬಾಗಿಲಿಗೆ ಒಂದು ದೊಡ್ಡ ಕಲ್ಲನ್ನು ಉರುಳಿಸಿ ಮುಚ್ಚಿದರು. ಮಗ್ದಲದ ಮರಿಯಳೂ ಲಾಜರನ ತಂಗಿ ಮರಿಯಳೂ ಅಲ್ಲೇ ಕಾವಲು ಕುಳಿತರು.

ತಾನು ಮಡಿದ ಮೂರು ದಿನಗಳ ಮೇಲೆ ಸಮಾಧಿಯಿಂದ ಎದ್ದು ಬರುವೆನೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದ್ದುದನ್ನು ಮುಖ್ಯ ಅರ್ಚಕರೂ ಫರಿಸಾಯರೂ ಜ್ಞಾಪಿಸಿಕೊಂಡು, "ಆ ಸಮಾಧಿಗೆ ಒಂದು ಕಾವಲು ಇರಿಸು. ಇಲ್ಲದಿದ್ದರೆ ಅವನ ಶಿಷ್ಯರು ಅವನ ದೇಹವನ್ನು ಕದ್ದುಕೊಂಡುಹೋಗಿ, ಮೂರು ದಿನಗಳ ಬಳಿಕ ಯೇಸು ಎದ್ದುಬಂದನೆಂದು ಹೇಳಿಯಾರು" ಎಂದರು. ಪಿಲಾತನು ಅದರಂತೆ ಒಂದು ಕಾವಲಿರಿಸಿದನು, ಸಮಾಧಿಯ ಬಾಗಿಲ ಕಲ್ಲಿಗೆ ಮುದ್ರೆಯೊತ್ತಿಸಿದನು ಮೂರು ದಿನಗಳವರೆಗೂ ಅದು ಹಾಗೆಯೇ ಇತ್ತು.

## ಯೇಸು ಎದ್ದುಬಂದುದು

ಮರುದಿನ ಬೆಳಗಿನಜಾವದಲ್ಲಿ ಮಗ್ದಲದ ಮರಿಯಳೂ ಇನ್ನೊಬ್ಬ ಮರಿಯಳೂ ಇನ್ನಿತರ ಹೆಂಗುಸರೂ ಸುಗಂಧದ್ರವ್ಯಸಮೇತರಾಗಿ ಸಮಾಧಿಯ ಬಳಿಗೆ ಬಂದರು. ಸಮಾಧಿಯ ಬಾಗಿಲಿಗೆ ಮುದ್ರಿಸಿದ್ದ ಕಲ್ಲನ್ನು ಹೇಗೆ ಉರುಳಿಸುವುದೆಂದು ಅವರು ಯೋಚಿಸುತ್ತಿರುವಾಗಲೇ ಭೂಮಿ ನಡನಡನಡುಗಿತು, ದೇವದೂತನೊಬ್ಬನು ಆ ಕಲ್ಲನ್ನು ಪಕ್ಕಕ್ಕೆ ಉರುಳಿಸಿ ಅದರ ಮೇಲೆ ಕುಳಿತುಕೊಂಡುಬಿಟ್ಟನು. ಅವನ ಮುಖ

ಮಿಂಚುತ್ತಿತ್ತು, ಅವನ ಬಟ್ಟೆಬರೆ ಹಿಮದಂತಿತ್ತು. ಅವನನ್ನು ಕಂಡು ಕಾವಲಿನವರೆಲ್ಲಾ ಹೆದರಿಕೆಯಿಂದ ಸತ್ತಂತಾದರು.

ಮಗ್ದಲದ ಮರಿಯಳು ಆ ಕಲ್ಲು ಉರುಳಿದುದನ್ನು ಕಂಡೊಡನೆಯೇ ಓಡಿಹೋದಳು; ಎದುರಿಗೆ ಬರುತ್ತಿದ್ದ ಪೇತ್ರ ಯೋಹಾನರನ್ನು ಕಂಡು "ಸ್ವಾಮಿಯನ್ನು ಕೊಂಡುಹೋದರು ಎಲ್ಲಿಗೊಯ್ದರೋ ಅರಿಯೆವು" ಎಂದಳು. ಅವರಿಬ್ಬರೂ ಸಮಾಧಿಯ ಕಡೆಗೆ ಓಡಿದರು. ಯೋಹಾನನು ಬಂದು, ದೇಹಕ್ಕೆ ಸುತ್ತಿದ್ದ ನಾರುಮಡಿ ಒಂದು ಕಡೆ ಬಿದ್ದಿದ್ದುದನ್ನು ಹೊರಗಿಂದಲೇ ನೋಡಿದನಲ್ಲದೆ ಒಳಗೆ ಹೋಗಲಿಲ್ಲ. ಅನಂತರ ಪೇತ್ರನು ಒಳಗೆ ಹೋಗಿ, ಯೇಸುವಿನ ತಲೆಗೆ ಸುತ್ತಿದ್ದ ವಸ್ತ್ರ ಇನ್ನೊಂದು ಕಡೆ ಬಿದ್ದಿದ್ದುದನ್ನು ಕಂಡನು. ಆಗ ಅವರಿಬ್ಬರೂ ಅದನ್ನು ಉಳಿದವರಿಗೆ ತಿಳಿಸಲು ಹೋದರು.

ಮಗ್ದಲದ ಮರಿಯಳು ಅಳುತ್ತಾ ಸಮಾಧಿಯ ಹೊರಗೇ ನಿಂತಿದ್ದಳು. ಸ್ವಲ್ಪಕಾಲವಾದ ಬಳಿಕ ಸಮಾಧಿಯೊಳಗೆ ಬಗ್ಗಿ ನೋಡಿದಳು, ಯೇಸುವನ್ನು ಮಲಗಿಸಿದ್ದ ಸ್ಥಳದಲ್ಲಿ ಇಬ್ಬರು ದೇವದೂತರನ್ನು ಕಂಡಳು. ಅವರು ಅವಳನ್ನು ಕುರಿತು "ಏಕೆ ಅಳುವೆಯಮ್ಮ?" ಎಂದರು. ಮರಿಯಳು "ನನ್ನ ಸ್ವಾಮಿಯನ್ನು ಕೊಂಡೊಯ್ದಿದ್ದಾರೆ. ಎಲ್ಲಿಗೆ ಒಯ್ದರೋ ಅರಿಯೆ" ಎಂದು ಹೇಳುತ್ತಾ ತಿರುಗಿ, ಅಲ್ಲಿ ಯೇಸು ನಿಂತಿದ್ದುದನ್ನು ಕಂಡಳು. ಆದರೆ ಅವನು ಯೇಸುವೆಂಬುದು ಅವಳಿಗೆ ಆಗ ತಿಳಿಯಲಿಲ್ಲ. ಯೇಸು "ತಾಯೆ, ಏಕೆ ಅಳುವೆ? ಏನು ಹುಡುಕುವೆ?" ಎಂದು ಕೇಳಿದಾಗಲೂ ಅವಳು ಅವನನ್ನು ಅಲ್ಲಿಯ ತೋಟಗಾರನೆಂದುಕೊಂಡು, "ಅಯ್ಯೋ, ನನ್ನ ಸ್ವಾಮಿಯನ್ನು ನೀನು ಕೊಂಡೊಯ್ದಿದ್ದರೆ, ಎಲ್ಲಿಗೆ ಒಯ್ದೆಯೆಂದು ತಿಳಿಸು" ಎಂದು ಬೇಡಿದಳು. ಆಗ ಯೇಸು "ಮರಿಯ!" ಎಂದು ಅವಳ ಹೆಸರು ಹಿಡಿದು ಕರೆದನು. ತತ್‌ಕ್ಷಣ ಅವಳು ಅವನ ಗುರುತು ಹಿಡಿದು, ಬೆಚ್ಚಿ, "ಗುರುವೆ!" ಎಂದಳು. ಆಗ ಯೇಸು "ನನ್ನನ್ನು ಮುಟ್ಟಬೇಡ. ನಾನು ಇನ್ನೂ ನನ್ನ ತಂದೆಯ ಬಳಿಗೆ ಏರಿಲ್ಲ. ನೀನು ನನ್ನ ಶಿಷ್ಯರ ಬಳಿಗೆ ಹೋಗಿ, ನಿಮ್ಮ ತಂದೆಯೂ ನನ್ನ ತಂದೆಯೂ ಆದವನ ಬಳಿಗೆ ನಾನು ಹೋಗುವೆನೆಂದು ತಿಳಿಸು, ನಿಮ್ಮ

ದೇವರೂ ನನ್ನ ದೇವರೂ ಆದವನ ಬಳಿಗೆ ಹೋಗುವೆನೆಂದು ತಿಳಿಸು" ಎಂದನು.

ಅದರಂತೆಯೇ ಮಗ್ದಲದ ಮರಿಯಳು ಹೋಗಿ ತಾನು ಕಂಡುದನ್ನೂ ಕೇಳಿದುದನ್ನೂ ಶಿಷ್ಯರಿಗೆ ತಿಳಿಸಿದಳು. ಅವಳೊಡನೆ ಸಮಾಧಿಯ ಬಳಿಯಲ್ಲಿ ಇದ್ದ ಇತರ ಹೆಂಗುಸರೂ "ಮರಿಯಳು ಪೇತ್ರ ಯೋಹಾನರಿಗೆ ಸುದ್ದಿ ತಿಳಿಸುವುದಕ್ಕಾಗಿ ಓಡಿದಾಗ, ನಾವೂ ಸಮಾಧಿಯಲ್ಲಿ ಇಬ್ಬರು ದೇವದೂತರನ್ನು ಕಂಡೆವು. ಕ್ರಿಸ್ತನು ಸಮಾಧಿಯಿಂದ ಎದ್ದುಬಂದನೆಂದು ಅವರು ತಿಳಿಸಿದರು. ದಾರಿಯಲ್ಲಿ ನಾವೂ ಕ್ರಿಸ್ತನನ್ನು ಕಂಡೆವು. ಅವನ ಕಾಲು ಹಿಡಿದು ಪೂಜೆ ಮಾಡಿದೆವು" ಎಂದರು. ಆದರೆ ಆ ಸಮಯದಲ್ಲಿ ಅಪೊಸ್ತಲರು ಯಾರೂ ಅವರನ್ನು ನಂಬಲಿಲ್ಲ.

ಸಮಾಧಿಯ ಕಾವಲಿಗೆ ನಿಂತಿದ್ದ ಸೈನಿಕರು ಕೂಡ, ಹೆದರಿಕೆಯಿಂದ ಎಚ್ಚೆತ್ತ ಮೇಲೆ ಮುಖ್ಯ ಅರ್ಚಕರ ಬಳಿಗೆ ಹೋಗಿ ತಾವು ಕಂಡುದನ್ನು ತಿಳಿಸಿದರು. ಅವರು ಅವರಿಗೆ ಬಹಳ ದುಡ್ಡು ಕೊಟ್ಟು, "ನಾವು ನಿದ್ರೆಮಾಡುತ್ತಿದ್ದಾಗ ಶಿಷ್ಯರು ಬಂದು ದೇಹವನ್ನು ಕದ್ದುಕೊಂಡು ಹೋದರೆಂದು ಹೇಳಿ" ಎಂದು ಅವರ ಬಾಯಿ ಮುಚ್ಚಿಸಿ ಕಳಿಸಿದರು.

# ದಿವ್ಯ ದರ್ಶನ

ಇದಾದ ಅನಂತರ, ಅಪೊಸ್ತಲರಲ್ಲಿ ಒಬ್ಬನಾದ ಸೀಮೋನನೂ ಇನ್ನೊಬ್ಬನೂ ಯೇಸುವಿನ ಮರಣವನ್ನೂ ಅವನು ಎದ್ದುಬಂದುದನ್ನೂ ಕುರಿತು ಮಾತನಾಡುತ್ತಾ ಯೆರೂಸಲೇಮಿನ ಬಳಿ ಹೋಗುತ್ತಿದ್ದರು. ಆಗ ದಾರಿಯಲ್ಲಿ ಅಪರಿಚಿತನೊಬ್ಬನು ಅವರನ್ನು ಎದುರುಗೊಂಡು ದೇವರನ್ನು ಕುರಿತು ಎಷ್ಟೋ ವಿಷಯಗಳನ್ನು ಅವರಿಗೆ ತಿಳಿಸಿದನು. ಅವನ ಅಪಾರವಾದ ಜ್ಞಾನಕ್ಕೆ ಅವರು ಆಶ್ಚರ್ಯಪಟ್ಟು, ಆ ರಾತ್ರಿ ಅವನು ತಮ್ಮೊಡನೆಯೇ ತಂಗಬೇಕೆಂದು ಬೇಡಿಕೊಂಡರು. ಅಪರಿಚಿತನು ಅವರೊಡನೆ ತಂಗಿದನು. ಆ ರಾತ್ರಿ ಊಟಕ್ಕೆ ಕುಳಿತಾಗ, ಕ್ರಿಸ್ತನು ತನ್ನ ಕೊನೆಯ ಊಟದ ಸಮಯದಲ್ಲಿ ರೊಟ್ಟಿಯನ್ನು ಮುರಿದಂತೆಯೇ ಅವನೂ ಮುರಿದನು. ಅವರು ಆಶ್ಚರ್ಯದಿಂದ ಅವನನ್ನು ನೋಡುತ್ತಿದ್ದಂತೆಯೇ ಅವನ ಮುಖ ವ್ಯತ್ಯಾಸವಾಯಿತು. ಅವನೇ ಕ್ರಿಸ್ತನೆಂಬುದನ್ನು ಅವರು ಕಂಡರು. ಅವರು ನೋಡುತ್ತಿದ್ದಂತೆಯೇ ಅವನು ಕಣ್ಮರೆಯಾದನು.

ಅವರು ಕೂಡಲೇ ಎದ್ದು ಯೆರೂಸಲೇಮಿಗೆ ಬಂದು ಉಳಿದ ಶಿಷ್ಯರಿಗೆ ತಾವು ಕಂಡುದನ್ನು ತಿಳಿಸಿದರು. ಅವರು ಹಾಗೆ ಮಾತನಾಡುತ್ತಿರುವಾಗಲೇ ಯೇಸು ಪ್ರತ್ಯಕ್ಷನಾಗಿ, ''ನಿಮಗೆ ಮಂಗಳವಾಗಲಿ'' ಎಂದನು. ಅವರು ಹೆದರಿದುದನ್ನು ಕಂಡು ಅವರಿಗೆ ತನ್ನ ಕೈಕಾಲುಗಳನ್ನು ತೋರಿಸಿ, ಮುಟ್ಟಿನೋಡಿರೆಂದನು. ಅವರಿಗೆ ಧೈರ್ಯವುಂಟುಮಾಡುವುದಕ್ಕಾಗಿ ಒಂದು ಸುಟ್ಟ ಮೀನಿನ ಚೂರನ್ನು ಅವರ ಎದುರಿಗೇ ತೆಗೆದು ತಿಂದನು.

ಆದರೆ ಅಪೊಸ್ತಲರಲ್ಲಿ ಒಬ್ಬನಾದ ತೋಮನು ಆ ಸಮಯದಲ್ಲಿ ಅಲ್ಲಿ ಇರಲಿಲ್ಲ. ಸ್ವಾಮಿಯನ್ನು ಕಣ್ಣಾರೆ ಕಂಡೆವೆಂದು ಮಿಕ್ಕವರು ಹೇಳಿದಾಗ, ತೋಮನು "ಶಿಲುಬೆಯ ಮೇಲೆ ಮೊಳೆ ಹೊಡೆದುದರ ಗುರುತನ್ನು ಅವನ ಕೈಗಳಲ್ಲಿ ಕಂಡ ಹೊರತು, ಶೂಲದಿಂದ ತಿವಿದ ಅವನ ಪಕ್ಕದಲ್ಲಿ ನನ್ನ ಕೈ ಹಾಕಿದ ಹೊರತು, ನಾನು ನಂಬುವುದಿಲ್ಲ" ಎಂದನು.

ಅದೇ ಕ್ಷಣದಲ್ಲಿ, ಬಾಗಿಲುಗಳೆಲ್ಲವನ್ನೂ ಹಾಕಿದ್ದರೂ ಯೇಸು ಅಲ್ಲಿ ಪ್ರತ್ಯಕ್ಷನಾಗಿ, "ನಿಮಗೆ ಮಂಗಳವಾಗಲಿ" ಎಂದನು ಬಳಿಕ ತೋಮ ನನ್ನು ಕುರಿತು "ಇದೋ ನನ್ನ ಕೈ, ಬೆರಳಿಂದ ಮುಟ್ಟಿನೋಡು. ಇದೋ ನನ್ನ ಪಕ್ಕ, ಕೈಯಿಂದ ಚುಚ್ಚಿ ನೋಡು. ನಂಬಿಕೆಯಿಲ್ಲದವನಾಗಬೇಡ, ನಂಬು" ಎಂದನು. ಆಗ ತೋಮನು "ನೀನೇ ನನ್ನ ಸ್ವಾಮಿ ! ನೀನೇ ನನ್ನ ದೇವರು ! " ಎಂದನು. ಆಗ ಯೇಸು "ತೋಮ, ನೀನು ನನ್ನನ್ನು ಕಂಡ ಬಳಿಕ ನಿನಗೆ ನಂಬಿಕೆ ಬಂದಿತು. ನನ್ನನ್ನು ಕಾಣದಿದ್ದರೂ ನನ್ನಲ್ಲಿ ನಂಬಿಕೆಯಿಡುವವರೇ ಧನ್ಯರು" ಎಂದನು.

ಇದಾದ ತರುವಾಯ, ಯೇಸುಕ್ರಿಸ್ತನು ತನ್ನ ಶಿಷ್ಯರಲ್ಲಿ ಐನೂರು ಜನಕ್ಕೆ ಒಮ್ಮೆ ಕಾಣಿಸಿಕೊಂಡನು. ಇನ್ನೊಂದು ಸಲ ಇತರರೊಡನೆ ನಲುವತ್ತು ದಿನ ನಿಂತು, ಧರ್ಮವನ್ನು ಹರಡಬೇಕೆಂದು ಅವರಿಗೆ ಬೋಧೆಮಾಡಿದನು.

ಕಟ್ಟಕಡೆಗೆ ತನ್ನ ಶಿಷ್ಯರೊಡನೆ ಯೆರೂಸಲೇಮಿನಿಂದ ಬೇಥಾನ್ಯದವರೆಗೂ ನಡೆದು, ಅಲ್ಲಿ ಅವರನ್ನು ಆಶೀರ್ವದಿಸಿ, ಒಂದು ಮೇಘದ ಮೇಲೇರಿ ಪರಲೋಕಕ್ಕೆ ಹೋದನು. ಅಲ್ಲಿ, ದೇವರ ಬಲಗಡೆ ತನ್ನ ಪೀಠದಲ್ಲಿ ಮಂಡಿಸಿದನು